ಕಲ್ಪನಾ ಗ್ರಂಥಮಾಲೆ—೬



ಮುಗಿಲ ಜೇನು

ಸಿಂಪಿ ಲಿಂಗಣ್ಣ

ಭಾರತೀ ಸಾಹಿತ್ಯ ಭಂಡಾರ, ಯರನಾಳ ಜಿ. ಬಿಜಾಪುರ.

ಕಲ್ಪನಾ ಗ್ರಂಥಪ್ರಕಾಶನ ಸಮಿತಿ
ಹುಬ್ಬಳ್ಳಿ

ಕಲ್ಪನಾ ಗ್ರಂಥಮಾಲಾ-೬

ಮುಗಿಲ ಜೇನು

ಸಿಂಪಿ ಲಿಂಗಣ್ಣ

ಕಲ್ಪನಾ
ಗ್ರಂಥ ಪ್ರಕಾಶನ ಸಮಿತಿ, ಹುಬ್ಬಳ್ಳಿ

೧೯೪೯ -೦

ಕಲ್ಪನಾ ಗ್ರಂಥ ಮಾಲಾ
ಹುಬ್ಬಳ್ಳಿ

ಮುದ್ರಕರು :
ಶಿ. ಬ. ಹರಿಹರ,
ತೋಂಟದಾರ್ಯ ಪ್ರೆಸ್
ಧಾರವಾಡ

ಪ್ರಕಾಶಕರು :
ಹಿರೇಮಲ್ಲೂರ ಈಶ್ವರನ್
ವಾಣಿಜ್ಯ ವಿದ್ಯಾಲಯ, ಹುಬ್ಬಳ್ಳಿ

ಅಗಲಿದ ಜೊತೆಗಾರತಿ

ಮೀರಾಬಾಯಿಗೆ

ಕಲ್ಪನಾ ಪರಿಚಯ

ಪ್ರಿಯ ಸುಹೃದ,

ಕಲ್ಪನಾ ನಮಗೆ ಪ್ರಿಯದರ್ಶಿನಿಯಾಗಬೇಕು. ಆಕೆ ಕೋಮಲೆ, ರೂಪವತಿ, ರಾಗಿಣಿ. ಎಲ್ಲಕ್ಕೂ ಮಿಗಿಲಾಗಿ ಅವಳು ತಪಸ್ವಿನಿ. ಅವಳ ಮಾತು ಮುತ್ತು, ನಡತೆ ಗಂಭೀರ, ಧ್ಯೇಯ ಪವಿತ್ರತಮ. ವಸಂತ ಲಕ್ಷ್ಮಿಯಂತೆ ತನ್ನ ಬಾಳು ಸುಂದರ ವಾಗಬೇಕು, ಬಿದಿಗೆಯ ಚಂದ್ರಮನಂತೆ ತನ್ನ ಚಾರಿತ್ರ್ಯ ನಿರ್ಮಲ ವಾಗಬೇಕು, ವನಸುಮದಂತೆ ತನ್ನ ಜೀವನ ವಿಕಸಿತವಾಗಬೇಕು ಅದರಿಂದಾಗಿ ತನ್ನ ಸುತ್ತಣ ಬಾಳನ್ನು ಹಿಗ್ಗಿಸಿ, ಜನಮನವನ್ನು ರಂಜಿಸಿ, ಅವರ ಬದುಕಿನ ಹಂತನ್ನು ಮೇಲಕ್ಕೆತ್ತಿ ನಯಗೊಳಿಸಿ ಮನುಜ ಲೋಕವನ್ನೇ ಮಂದಾರ ಲೋಕವನ್ನಾಗಿ ಪರಿವರ್ತನ ಗೊಳಿಸಬೇಕೆಂಬ ಹಂಬಲವುಳ್ಳಾಕೆ ನಮ್ಮ ಕಲ್ಪನಾ.

ಈ ನಮ್ಮ ಸ್ವರ್ಣ ಸ್ವಪ್ನರಂಗಿನಿ ಕಲ್ಪನಾ ನಿಮ್ಮ ಹೆಮ್ಮಗಳು. ಕನ್ನಡ ನಾಡಿನ ಕಿರುವಕ್ಕಳು, ಮಾಮೂಗರು, ಕಾವ್ಯಪ್ರಯೋಗ ಪರಿಣತಮತಿಗಳು. ಎಲ್ಲರೂ ಇವಳ ಉಡಿಯಲ್ಲಿ ಹಣ್ಣು ಕಾಯಿ ತುಂಬಿ, ಹಣೆಗೆ ಕುಂಕುಮವಿಟ್ಟು ಸರ್ವಮಂಗಲೆಯಾಗಲೆಂದು ಹರಕೆಯನ್ನೀಯಬೇಕೆಂದು ನಾವು ವಿನಯಪೂರ್ವಕವಾಗಿ ಕೋರುತ್ತೇವೆ.

ಲಲಿತ ಸಾಹಿತ್ಯ, ಬೌದ್ಧಿಕ ಸಾಹಿತ್ಯ-ರಂಜನೆ, ಬೋಧನೆ ಜನಮನದ ವಿಕಾಸಕ್ಕಾಗಿ, ಸಂಸ್ಕಾರಕ್ಕಾಗಿ ಯಾವ ಸಾಹಿತ್ಯವನ್ನೆಲ್ಲ ಒದವಿಸಬೇಕೊ ಅದನ್ನೆಲ್ಲ ನಾವು ಕಷ್ಟಪಟ್ಟು ಹುಡುಕಿ ತಂದು ನಮ್ಮ ಪಾಲಿನ ಕಾರ್ಯ ಮಾಡುತ್ತೇವೆ. ಕಲ್ಪನಾ ಈ ನೆಲದ ಮಗಳಾಗಬೇಕೆಂಬ ಔದಾರ್ಯ ಮಾತ್ರ ನೀವು ತೋರಬೇಕು.

ಗ್ರಂಥ ಪ್ರಕಾಶನ ಕಾರ್ಯವು ಪವಿತ್ರವಾದ ದುಡಿಮೆ ಯೆಂದರಿತು ನಾವು ಈ ಕಾರ್ಯಕ್ಕೆ ಕೈಹಾಕಿದ್ದೇವೆ. ಸಿಂಪಿ ಲಿಂಗಣ್ಣ ಅವರು 'ಮುಗಿಲ ಜೇನು' ಪ್ರಕಟನೆಯ ಮೂಲಕ ನಮಗೆ ನೆರವಾಗಿದಾರೆ. ಈ ದುಡಿಮೆಯಲ್ಲಿ ನಮಗೆ ಸುಖವಿದೆ, ಹಿತವಿದೆ, ಪುಣ್ಯವಿದೆ. ನಿಮ್ಮೆಲ್ಲರ ನೆರವಿನಿಂದ ನಾವು ನಮ್ಮ ಕಾರ್ಯ ಪೂರೈಸ ಬಯಸುತ್ತೇವೆ.

ಕಲ್ಪನಾ ಗ್ರಂಥಮಾಲಾ
ಹುಬ್ಬಳ್ಳಿ
ರವೀಂದ್ರ ಜಯಂತಿ ೪೯

ಹಿರೇಮಲ್ಲೂರ ಈಶ್ವರನ್

ಮುನ್ನುಡಿ

★

ನನ್ನ ತರುಣ ಮಿತ್ರರಾದ ಶ್ರೀ. ಸಿಂಪಿ ಲಿಂಗಣ್ಣನವರು ತಮ್ಮ ಈ ಕವನಸಂಗ್ರಹಕ್ಕೆ ನನ್ನಿಂದ ಒಂದು ಮುನ್ನುಡಿಯನ್ನು ಬಯಸಿದಾರೆ. ಆ ಕೆಲಸವನ್ನು ನಾನು ಬಹು ಸಂತೋಷದಿಂದ ಒಪ್ಪಿಕೊಂಡಿದೇನೆ.

ಶ್ರೀ. ಲಿಂಗಣ್ಣನವರು ಸಹಜವಾಗಿ ಭಾವುಕರು. ವೀರಶೈವ ಧರ್ಮದಲ್ಲಿ ಹುಟ್ಟಿ ಬೆಳೆದವರು. ಹಳ್ಳಿಯ ಬಾಳಲ್ಲಿ ಬೆರೆತು ಹಿರಿದಾಗಿರುವವರು. ಕವಿ ಸೋದರ ಶ್ರೀ. ಬೇಂದ್ರೆ ದತ್ತರಾಯರ ಮುಂದಾಳಿಕೆಯಲ್ಲಿ ತಮ್ಮಂತೆ ಆಧ್ಯಾತ್ಮ ರುಚಿಯುಳ್ಳ ಜನದೊಂದಿಗೆ ಗುರುವರ ಅರವಿಂದ ಘೋಷರ ಅಡಿದಾವರೆಯನ್ನು ಹಿಡಿದು ನಡೆಯುತ್ತಿರುವವರು. ಇವರ ಎಲ್ಲ ಹೊತ್ತೂ ಬಾಳನ್ನು ಚೆನ್ನ ಮಾಡಬೇಕೆಂದು ಯತ್ನಿಸುತ್ತಿದಾರೆ; ತಮ್ಮ ಬಾಳನ್ನೂ; ನಾಡ ಬಾಳನ್ನೂ.

ಈ ಸಣ್ಣ ಗ್ರಂಥದಲ್ಲಿ ಇವರ ಈ ಒಲುಮೆಗಳು ಚೆನ್ನಾಗಿ ಕಂಡು ಬರುತ್ತವೆ. "ಮನದಾಸೆ" "ಆಸೆ"-ಈ ಆಸೆ ಇವರಿಗೆ ಸಹಜವಾಗಿ ಬರುವ ಹಿರಿಯಾಸೆ; ವಿಶ್ವಜೀವನದಲ್ಲಿ ಒಂದು ಉಪಯುಕ್ತಸ್ಥಾನ ದೊರೆಯಲಿ ಎಂಬುದು. ಶ್ರೇಷ್ಠ ಸ್ಥಾನವಲ್ಲ? ಸುಂದರ ಸ್ಥಾನ ಅಲ್ಲ? ಬೇಡ. ಆದರೆ ಒಟ್ಟು ಬಾಳುವೆಯೊಂದಿಗೆ ಕಲೆತು ಸಿದ್ಧಿಹೊಂದುವ ಸ್ಥಾನ. ಈ ಬಾಳ ಕಲ್ಲನ್ನು ಅದರ ಶಿಲ್ಪಿ ಕಡೆಯುತ್ತಿದ್ದಾನೆ. ಬಸವಣ್ಣನವರು ಕರ್ತಾರನ ಕಮ್ಮಟವೆಂದ ಮರ್ತ್ಯಲೋಕ ನಮ್ಮ ಅಕ್ಕಸಾಲೆ. ಮಾಮರನ ಮಕ್ಕಳಂತೆ ಲೋಕದ ಮಕ್ಕಳ ಚರಿತೆ. ಹೊನ್ನು ಹಿರಿದಲ್ಲ. ಒಳ್ಳೆಯ ಬಾಳು ಹಿರಿದು. ಆದರೆ ಈ ಲೋಕ ಮುದ್ದಿನಾಗಾರ. ಇದರಿಂದ ಪಾರಾಗುವುದು ಎಲ್ಲರಿಗೂ ಸಾಧ್ಯವಲ್ಲ. ಲೋಕದ ಬಾಳೆಲ್ಲ ಒಂದು ಮನೆಯ ಬಾಳು. ಒಂದು ಆಟ. ಮನೆಯಲ್ಲಿ ಕೂಡ ಬಾಳನ್ನು ಯತ್ನದಿಂದ ಒಂದು ಮಾಡಬೇಕು. ಹೀಗಾಗಲು ಮನೆಯವಳು ಮನದವಳಾಗಬೇಕು. ಹಳೆಬೀಡು, ಶರಾವತಿ, ಇವರ ಮನಸ್ಸಿನಲ್ಲಿ ಮೂಡಿಸುವ ಭಾವಗಳೂ ಇವರ ತೆರದವೆ. ಬಸವಣ್ಣನವರನ್ನು ಕುರಿತ ಸ್ತವನ ಇಂಥ

ಉಚ್ಚ-ಧ್ಯೇಯದ ಭಕ್ತಿನಮ್ರವಾದ ಬಾಳಿನ ಸರ್ವಸಮ್ಮತವಾದ ನಿಲುವನ್ನು ಗುರುತಿಸುತ್ತದೆ.

ಚೊಕ್ಕವಾದ ಚೆಲುವಾದ ಮೇಲಾದ ಬಾಳನ್ನು ಸರಿಯಾಗಿ ತೋರುವ ಇಂಥ ಗೀತಗಳು ನಮ್ಮ ಸಾಹಿತ್ಯದಲ್ಲಿ ನೂರು ಕಡೆಯಿಂದ ಬರಬೇಕು, ನೂರು ಕಾಲಕ್ಕೂ ಬರಬೇಕು. ಈ ಕಾಲಕ್ಕೆ ಈ ಗುರಿಯನ್ನು ಹಿಡದೆತ್ತಿರುವ ಬಗ್ಗೆ ನಾನು ಶ್ರೀ. ಸಿಂಪಿ ಲಿಂಗಣ್ಣನವರನ್ನು ಅಭಿನಂದಿಸುತ್ತೇನೆ. ಅವರು ನಂಬಿರುವ ಗುರುತತ್ವದ ಅನುಗ್ರಹ ಅವರ ಜೀವನದಲ್ಲಿ ಹೆಚ್ಚುಹೆಚ್ಚಾಗಿ ಫಲಿಸಿ ಹೆಚ್ಚುಹೆಚ್ಚಾಗಿ ಸಾಹಿತ್ಯದಲ್ಲಿ ರೂಪುಗೊಳ್ಳಲಿ ಎಂದು ಹಾರಯಿಸುತ್ತೇನೆ.

ಬೆಂಗಳೂರು
೩೦--೫--೧೯೪೫

ಶ್ರೀನಿವಾಸ.

ಪರಿಚಯ

ಭಗವಾನ್ ಶ್ರೀಅರವಿಂದರು "ಭಾವೀ ಕವಿತ್ವ" ಎಂಬ ಹೆಸರಿನ ಇಂಗ್ಲೀಷ ಪುಸ್ತಕದಲ್ಲಿ ಬರಲಿರುವ ಕವಿತ್ವದ ಸ್ವರೂಪವನ್ನು ಕುರಿತು ಹೀಗೆ ಹೇಳಿರುವರು:—

"ಈ ಕವಿತ್ವವು ನೂತನ ವಿಷಯಗಳನ್ನು ಹಾಗೂ ಪುರಾತನ ವಿಷಯಗಳನ್ನು ಹೊಸಮಾರ್ಗದಿಂದಲೂ ಹೊಸವಾಣಿಯಿಂದಲೂ ಬಣ್ಣಿಸುವದು; ಅದು ತನ್ನ ಕ್ಷೇತ್ರದೊಳಗಿಂದ ಏನನ್ನೂ ಬಹಿಷ್ಕರಿಸದೆ ಹಾಗೂ ಇಳಿಸದೆ— ಮೇಲ್ಗಡೆಗೆ ಅತಿಯಾಗಿ ಉನ್ನತಗೊಳಿಸುವದರ ಮೂಲಕವೂ, ಒಳಗಡೆಗೆ ಮೂಲ ಸುತ್ತುಮುತ್ತಲು ಅತಿಯಾಗಿ ಬೆಳೆಸುವುದರ ಹಾಗೂ ವಿಸ್ತಾರಗೊಳಿಸುವುದರ ಮೂಲಕವೂ ಅಂತರತಮವಸ್ತುಗಳ ದರ್ಶನವನ್ನೂ ಮತ್ತು ಆ ಕಾರಣದಿಂದ ಜಗತ್ತಿನ ಹಾಗೂ ಜೀವನದ ಮತ್ತು ಆತ್ಮಾನುಭವದ ಅನುಕ್ತ ಸಂಭವನೀಯತೆಗಳ ಬಗೆಗೆ ಮಾರ್ಪಾಡುಹೊಂದಿದ ಕಾಣ್ಕೆಯನ್ನೂ ಅದು ಬಣ್ಣಿಸುವದು. ಅದು ನಮಗೆ ಶಾಶ್ವತನ ಬಗೆಗೆ, ಪರಮಾತ್ಮನ ಸಾನ್ನಿಧ್ಯದ ಬಗೆಗೆ, ಯಾವವುಗಳನ್ನು ನಾವು ಅತಿ ಸಂಕುಚಿತತರವಾಗಿಯೂ ಆಶ್ಚರ್ಯಕರವಾಗಿಯೂ ಬಾಹ್ಯಿಕ ಜಡಜಗತ್ತಿನ ಮೇಲೆ ಅಂಟಿಕೊಂಡು ಕುಳಿತ ಒಂದು ಬಗೆಯ ಯಾವ ತರ್ಕ ಬುದ್ಧಿಯ ಮೂಲಕ ಕೆಲಕಾಲದ ಮಟ್ಟಿಗೆ ಕಳೆದುಕೊಂಡು ಬಿಟ್ಟದ್ದೇವೋ ಅವುಗಳ ಬಗೆಗೆ ಅನುಭೂತಿಯನ್ನು ದೊರಕಿಸಿ ಕೊಡುವದು. ಆದರೆ ಈ ವಿಷಯವನ್ನು ಅದು ಪರಂಪರಾಗತಧರ್ಮದ ನಿಸ್ತೇಜವಾದ ಹಾಗೂ ಪದ್ಧತಿರೂಢವಾದ ಧ್ವನಿಯಲ್ಲಿ ಬಣ್ಣಿಸದೆ ಅಂತರ್ಜ್ಞಾನದ ಅನುಭವದ ವಾಣಿಯಂತೆಯೂ, ಶಾಶ್ವತಸಾನ್ನಿಧ್ಯದ ದಿವ್ಯಪ್ರಕಟನೆಯ ಛಂದ ಹಾಗೂ ಮಂತ್ರದಂತೆಯೂ ಬಣ್ಣಿಸುವದು. ಕವಿಯ ವಾಣಿಯು ಸಕಲವಸ್ತು ಮಾತ್ರಗಳ ಹಾಗೂ ನಿಖಿಲ ಜೀವಜಾತಗಳ ಆತ್ಮಸ್ವರೂಪನಾದ ದೇವನನ್ನೂ ಹಾಗೂ ವಿಶ್ವದ ಮಹಾಜೀವನವನ್ನೂ, ಮತ್ತು ಮಾನವನೊಳಗಿನ ದೇವಾಂಶವನ್ನೂ ನಮಗೆ ಪ್ರಕಟಗೊಳಿಸಿ

ಕೊಡುವದು; ಅಲ್ಲದೆ, ಯಾವುದರೊಳಗೆ ಮಾನವನಿಗೆ ತನ್ನ ಸ್ವತಃದ ಸತ್ತ್ವಿಯ ಹಾಗೂ ಜೀವನದ ಮತ್ತು ಹವಣಿಕೆಗಳ ಸಮರ್ಥವಾದ ಝುರಿಗಳಿರುವುದಾಗಿ ಅನಿಸುವದೋ, ಹಾಗೂ ವಿಶ್ವಗತ ಸಕಲ ಅನುಭವಗಳೊಡನೆಯೂ, ಮಹಾನಿಸರ್ಗದೊಡನೆಯೂ ಸಕಲ ಜೀವ ರಾಶಿಗಳೊಡನೆಯೂ ತನ್ನ ಸಮೃದ್ಧಿಯನ್ನೂ, ಏಕತೆಯನ್ನೂ ಯಾವುದರೊಳಗೆ ಆತನು ಅನುಭವಿಸುವನೋ ಅಂಥ ಆ ತನ್ನೊಳಗಿನ ದೇವತ್ವದ ಸ್ಪರ್ಶವನ್ನೂ, ಹರ್ಷವನ್ನೂ ಪಡೆಯಲೆಳಸುವ ಮಾನವ ಅಂತರಾತ್ಮದ ಪ್ರಯತ್ನಗಳ ಸಕಲ ಭಾವನೆಗಳನ್ನೂ ಆನಂದಗಳನ್ನೂ ಆತನು (ಕವಿಯು) ಬಣ್ಣಿಸುವನು. ವ್ಹಿಟ್ಮನ್, ಕಾರ್ಪೆಂಟರ್, ಏ. ಈ. ಮತ್ತು ಟಾಗೋರ್ ಇವರಲ್ಲಿ ಯಾವ ತಾನವು ಆರಂಭವಾಗಿ ತನ್ನ ಹಲವು ಆಲಾಪನೆಗಳನ್ನು ಇದೀಗ ತಾನೇ ಕಂಡುಕೊಂಡಿದೆಯೊ, ಅದು ಹೆಚ್ಚು ಹೆಚ್ಚು ಸಮೃದ್ಧವೂ ಸನ್ನಿಕಟವೂ ಘನಿಷ್ಠವೂ ಆದ ಕಾವ್ಯಸಂಬಂಧೀಯ ಜ್ಞಾನ-ದರ್ಶನ-ಭಾವನೆಗಳಲ್ಲಿ ಪರಿಣಮಿಸಿ ಕೇವಲ ರಹಸ್ಯಕವಿತೆಯ ರಾಜ್ಯವಾಗಿರುವ ಅಪರೂಪವಾದ ಆಂತರಿಕ ಅವಸ್ಥೆಗಳನ್ನು ಹಾಗೂ ಸಂಸ್ಪರ್ಶಗಳನ್ನು ಮಾತ್ರವೇ ಅಲ್ಲದೆ, ನಮ್ಮ ಆಂತರಿಕ ಹಾಗೂ ಬಾಹ್ಯಿಕ ಅಸ್ತಿತ್ವಕ್ಕೆ ಸಂಬಂಧಿಸಿದ ಪ್ರತಿಯೊಂದು ವಿಷಯವನ್ನು ಸಹ- ಸಮಸ್ತ ಜೀವನ ಹಾಗೂ ಅನುಭೂತಿಗಳು ಆತ್ಮಿಕ- ಪ್ರತೀತಿ ಹಾಗೂ ಆತ್ಮಿಕವ್ಯಾಖ್ಯೆಗೆ ಬಂದು ಮುಟ್ಟುವಂತೆ- ಹೆಚ್ಚು ಹೆಚ್ಚಾಗಿ ಆಲಿಂಗಿಸಲು ಮುಂದುವರಿಯುವದು.”

ಗೆಳೆಯ ಲಿಂಗಣ್ಣನವರು “ಮಿಲನ” ಕನ್ನಡಿಸಿ ಮುಗಿಸಿದ ಮೇಲೆ ಕೆಲದಿನಗಳ ನಂತರ ಅವರ ಹೃದಯದಲ್ಲಿ, ಹೊಸಕವಿತೆಗಳ ಹೊಸಝುರಿಯೊಂದು ಒಡೆಯುವ ಸುಳುಹು ಅವರಿಗೆ ಹತ್ತಿತೆಂದು ಅವರ ಕವಿತೆಗಳ ಕೈ ಬರಹದ ಪುಸ್ತಕದಿಂದ ಪ್ರತೀತವಾಗುತ್ತದೆ. ಆಗ ಅವರ ಜೀವನವು ಒಂದು ರೂಪಕ್ಕೆ ಬರಲಿದ್ದ ಕಾಲ. ಪ್ರತಿವ್ಯಕ್ತಿಗೂ ಅವರವರ ಜೀವನವು ತನ್ನದೊಂದು ವಿಶಿಷ್ಟ ಸ್ವರೂಪವನ್ನು ಸ್ಪಷ್ಟವಾಗಿ ಧಾರಣಮಾಡುವ ಕಾಲವು ಬರುತ್ತದೆ. ಬಹುಕಾಲದ ಪರಿಶೀಲನದ ಭಟ್ಟಿಯಲ್ಲಿ ಕರಗಿ ದೈವಾನುಗ್ರಹದಿಂದ ಕಾಲಕ್ರಮದಲ್ಲಿ ಪ್ರಾಪ್ತವಾಗುವ ಒಂದು ಸ್ವೋಚಿತವಾದ ಪಡಿಯಚ್ಚಿನಲ್ಲಿ ಎರಕಹೊಯ್ಯಲ್ಪಟ್ಟು ಜೀವನವೈಶಿಷ್ಟ್ಯವು ರೂಪಗೊಳ್ಳುವ ಮಾಹೇಂದ್ರ

ಮುಹೂರ್ತದಲ್ಲಿ ಹೃದಯವು ಮಂಗಲಗೀತವನ್ನು ಹಾಡತೊಡಗುತ್ತದೆ. "ಮುಗಿಲಜೇನು" (Honey of The Infinity) ಅಂಥ ಗೀತಗಳದೊಂದು ಸಂಗ್ರಹ.

ಸಂತತವಾಗಿ ಮೂರುತಿಂಗಳಲ್ಲಿ ಬಂದ ಮೂವತ್ತು ಮೂವತ್ತೈದು ಗೀತಗಳು ಹಾಗೂ ಆ ವೇಳಿನ ಮತ್ತು ಅದಕ್ಕೂ ಮುಂಚಿನ ಇಪ್ಪತ್ತು ಇಪ್ಪತ್ತೈದು ಗೀತಗಳು ಸೇರಿದ್ದು, "ಮುಗಿಲಜೇನು". ಅಲ್ಲದೆ, ಆನಂತರದ ಬೇರೆ ಕೆಲವು ಕವಿತೆಗಳೂ ಇದರಲ್ಲಿ ಪವಣಿಸಲ್ಪಟ್ಟಿರುವವು. ಅವೂ ಇದಕ್ಕೆ ಪೂರಕವಾದವುಗಳೇ.

ಇದನ್ನು "ಕರವಾಳ" ಎಂದರೆ "ದೇವನಾಯುಧ" ಎಂಬ ಹೆಸರಿನಿಂದ ಪ್ರಕಟಿಸಬೇಕೆಂದು ಲಿಂಗಣ್ಣನವರ ಬಲುದಿನದ ಬಯಕೆಯಿದ್ದಿತು. ಆದರೆ ವಿಷಯ ವೈಶಿಷ್ಟ್ಯದ ಮೂಲಕ "ಮುಗಿಲಜೇನು" ಎಂಬ ಸವಿಹೆಸರೇ ಅದಕ್ಕೆ ಒಪ್ಪುವದೆಂದು ನಾನೂ ಸೂಚಿಸಿದ್ದರ ಮೂಲಕವೂ ಹಾಗೂ ಮೂಲಸಂಗ್ರಹದಲ್ಲಿಯೇ ಆ ಹೆಸರಿನದೂ ಒಂದು ಕವಿತೆ ಇದ್ದುದರಿಂದಲೂ ಹಾಗೆ ಮಾಡಲಾಯಿತು. "ಮಹಾಕಾವ್ಯ" ಎಂಬ ಕವಿತೆಯನ್ನೋದಿದರೆ ಈ ಹೆಸರಿನ ಸವಿಯು ಸಾರ್ಥಕವೆಂದೆನಿಸುವದು.

ಸೃಷ್ಟಿ ಹಾಗೂ ಜೀವನ ಇವುಗಳ ರಹಸ್ಯವೇನು? ಎಂಬುದು ಅನಾದಿ ಕಾಲದ ಕೂಟಪ್ರಶ್ನೆ. ಎಲ್ಲ ಜ್ಞಾನಾಭಿಲಾಷಿಗಳು ಇದನ್ನು ಬಿಡಿಸುವದಕ್ಕೆ ಗೋಳಾಡಿರುವರು, ಗೋಳಾಡುವರು. ಆದರೆ ಬಿಡಿಸದೆ ಗತ್ಯಂತರವಿಲ್ಲ. ಯಕ್ಷ ಪ್ರಶ್ನೆಯಿದ್ದ ಹಾಗೆ. ಉತ್ತರ ಹೇಳಬೇಕು, ಇಲ್ಲದಿದ್ದರೆ ಜೀವನ ವ್ಯರ್ಥ. ಟಾಲ್‌ಸ್ಟಾಯರ ಆತ್ಮಚರಿತ್ರೆಯಲ್ಲಿ ಈ ಹೋರಾಟದ ಸ್ವರೂಪವನ್ನು ಅರಿತುಕೊಳ್ಳಬಹುದು.

ಒಬ್ಬೊಬ್ಬರಿಗೆ ಒಂದೊಂದು ವಿಧದಿಂದ ಉತ್ತರದ ಅರಿವು ಹುಟ್ಟುತ್ತದೆ ಒಬ್ಬರಿಗೆ ಒಳಗಿನಿಂದ, ಒಬ್ಬರಿಗೆ ಹೊರಗಿನ ಸೃಷ್ಟಿಯಿಂದ, ಒಬ್ಬರಿಗೆ ಗ್ರಂಥದಿಂದ ಒಬ್ಬರಿಗೆ ಒಬ್ಬರ ಉಪದೇಶದಿಂದ, ನಮ್ಮ ಭಾರತೀಯ ಪುರಾತನರಲ್ಲೊಬ್ಬರಿಗೆ ಸೃಷ್ಟಿಯೊಳಗಿನ ಅನೇಕ ಪ್ರಾಣಿ ಹಾಗೂ ವಸ್ತುಗಳಿಂದ ಜ್ಞಾನೋದಯು ವಾಗಿದೆ. "ಸೃಷ್ಟಿಯ ಸದುಪದೇಶ"ವೆಂಬ ಹೆಸರಿನಿಂದ ಈ ಸಂಗತಿಯು ಕನ್ನಡದಲ್ಲಿ ಪುಸ್ತಕರೂಪದಿಂದ ಬಹಳ ದಿನಗಳ ಹಿಂದೆಯೇ ಪ್ರಕಟವಾದದ್ದುಂಟು.

ಗೆಳೆಯ ಲಿಂಗಣ್ಣನವರು ಸೃಷ್ಟಿಯಿಂದ ಸದುಪದೇಶ ಪಡೆದುಕೊಳ್ಳಲು ಹವಣಿಸಿದುದನ್ನು ನಾವು "ಮುಗಿಲಜೇನಿ"ನಲ್ಲಿ ಕಾಣಬಹುದು. "ಎಂದು? " ಎಂಬ ಕವಿತೆಯ ಪಲ್ಲವಿಯಲ್ಲಿ ಈ ಮಾತು ಒಡೆದು ಕಾಣುವದು. "ಮಾಂಗಲ್ಯ ಮುತ್ತು" ಎಂಬ ಕವಿತೆಯಲ್ಲಿ ಮೋಡ, ಮಿಂಚು, ಗದ್ದರಣೆ, ಬಿರುಗಾಳಿಗಳಿಂದ ಒಂದು ಮಾತನ್ನು ಕಲಿತರೆ, "ಅಕ್ಕಸಾಲೆ"ಯಲ್ಲಿ ಕಾವು, ಏಟು, ಸೆಳೆತ, ಎಳೆತಗಳಿಂದಲೂ ಮುಗಿದ ಮುಗಿಯದ ಸಣ್ಣದೊಡ್ಡ ಆಭರಣಗಳಿಂದಲೂ, ಕುಂಬಿಕಡ್ಡಿಗಳಿಂದಲೂ ಇನ್ನೊಂದು ಮಾತನ್ನು ಕಲಿಯಲು ಉಜ್ಜುಗಿಸಿರುವರು. "ಕೊನೆಯೆಂತೊ" ಎಂಬುದರಲ್ಲಿ ಮಾಮರದ ಹಗರಣದಲ್ಲಿ ಹೈರಣಿಸಿ, "ಬಂಗಾರಬೆಟ್ಟ"ದಲ್ಲಿ ಕರ್ತವ್ಯಕರ್ಮದ ಹಿರಿಮೆಯನ್ನು ಮನಗಂಡಿರುವರು. ಮುಳ್ಳುತುಂಬಿದ "ಡಬ್ಬುಗಳ್ಳಿ"ಯಿಂದಲೂ ಒಂದು ಮುತ್ತಿನಂತಹ ಮಾತನ್ನು ಕಲಿಯಲು ಅವರು ಹಿಂಜರಿಯರು. "ಕಳ್ಳಿಯೆ ! ನಿನಗೆಂದಿಗು ಮರಣವಿಲ್ಲವು ನೀನು ಭಾರತದ ಸಂಸ್ಕೃತಿಯಂತೆ" ಎಂದು ಅಮರತ್ವವನ್ನು ಹಾಡಿರುವರು. "ಬಯಲಾಟ"ದಲ್ಲಿ 'ಕಲ್ಲು ಕಲ್ಲಿಗು ಕಣ್ಣು ಹುಲ್ಲುಕಡ್ಡಿಗು ಕಿವಿಯು' ಎಂದು ಸಚರಾಚರದ ಸಜೀವತೆಯನ್ನು ಅನುಭವಿಸಿ, "ಭಯ"ದಲ್ಲಿ 'ಅಗೊ ! ಬೆಟ್ಟಬೆಟ್ಟಗಳ ಸಾಲು ಭಯದಿ ಕೈಕೈ ಹಿಡಿದಿವೆ ! " ಎಂದು 'ಭಯವೆ ದೇವನ ಆಜ್ಞೆ, ಭಯವೆ ದೇವನ ಸಂಜ್ಞೆ' ಎಂದು 'ಭಯಾತ್ ತಪತಿ ಸೂರ್ಯಃ; ಮೊದಲಾದ ಉಪನಿಷತ್ತಿನ ಸನ್ನಿವೇಶಗಳನ್ನು ನೆನೆಸಿಕೊಂಡಿರುವರು. ಸೃಷ್ಟಿವಿಕಾಸದ ಹಿರಿತತ್ವವನ್ನರಿಯದೆ ನರಳುವವರಿಗೆ "ಅಕ್ಕಸಾಲೆ"ಯಲ್ಲಿ 'ಮರುಳರಿರಾ, ಏಕಿಂತು ಮರುಗುತಿಹಿರೆಲೆ? ಆ ಹಾಡೆ ಮೊದಲು ನನಗೂ ಇತ್ತು. ಕರ್ತಾರನೊಲಿದು ಕೈ ಹಿಡಿದಗಳಿಗೆಯೆ ಹಿರಿಯೋಗ!' ಎಂದು ಹಿರಿಭರವಸೆಯನ್ನು ಕೊಡುವರು. ವಿಶ್ವವೆಂಬ "ಒಂದೇ ಮನೆ"ಯಲ್ಲಿ- ದೇವದೇವನ ಒಂದೆ ಮನೆಯಲ್ಲಿ ಎಷ್ಟು ಒಡಕುಗಳು? "ಮುಗಿಲೊಂದೆ ಮಳೆಯೊಂದೆ, ಉಸಿರೊಂದೆ ಹಸಿರೊಂದೆ, ಆದರೇನು ? .... ಕದನಗಳು ಕಾಳಗಗಳು ಕತ್ತಿಯಾವೇಶಗಳು; ಮೋಸಗಳು ದ್ವೇಷಗಳು, ವಿಷವಾಯು ಮದ್ದುಗಳು!!" ಎಂದು ಕಳಕಳಿಸಿದರೂ "ಮಹಾಕಾವ್ಯ"ದಲ್ಲಿ ಮಾನವರು ದಾನವರು, ಮುಗಿಲು ಜಲ ಚಿಕ್ಕೆಗಳು ! ಮರಬಳ್ಳಿ ಹೂಕಾಯಿ ಮುಳ್ಕಲ್ಲು ಹುಲ್ಲುಗಳು! ಸರ್ವವೂ ಆ ಮಹಾಕಾವ್ಯದಲಿ ವಸ್ತುಗಳು' ಎಂದು ದಾನವರನ್ನೂ ಮುಳ್ಳುಕಲ್ಲುಗಳನ್ನೂ ಕೂಡ ಪ್ರೇಮದಿಂದ ನೋಡಿರುವರು.

"ಬೇಡಲಾರೆ" ಎಂಬ ಕವನದಲ್ಲಿ 'ಕಡಲ ನೀರು ತಾನು, ಕೊಡದ ನೀರು ನಾನು ಬಲ್ಲೆನದನು. ಕಡಲ ನೀರ ಬಣ್ಣರೂಪ, ಸವಿಯು ಕೊಡದ ನೀರಿಗುಂಟು. ಅದರ ಶಕ್ತಿ ಅದರ ಬೆಡಗು ಅಣುವಿನಷ್ಟು ಇಲ್ಲವೇನು?' ಎಂದು ದೇವನ ಅಪಾರಶಕ್ತಿ, ಶಾಂತಿ, ಜ್ಯೋತಿ, ಆನಂದ ಮೊದಲಾದವುಗಳನ್ನು ತಮ್ಮೊಳಗಿನ ಆತ್ಮನಲ್ಲಿ ಅನುಭವಿಸುವ ಆಶೆಯನ್ನು ತಳೆಯುವರಂತಲೇ "ಬೀಜರಾಶಿ"ಯಲ್ಲಿ 'ಮಾನವರೆ ತಾವೆಲ್ಲ? ಮಾನಿಸರೆ ನಾವಿಲ್ಲಿ? ಕಲ್ಪನೆಯ ಮೊಳೆಯಾಗಿ ಕಲ್ಪತರು ನಮ್ಮಲ್ಲಿದೆ. ಅದ್ಭುತದ ಶಕ್ತಿಶಿಶು ನಮ್ಮ ಗರ್ಭದಲುಂಟು' ಎಂದು ಕಣೆಯನ್ನು ಹೇಳಿರುವರು. "ಕಡಲಿನಾಳದಲ್ಲಿ" "ಶರಾವತಿ" ಮೊದಲಾದವುಗಳಲ್ಲಿಯೂ ಇದೇ ಭಾವವು ಅಡಕವಾಗಿ ಮೊಳಗುವದು. ಆದರೆ ಇಂದು ಆ "ಶಿಶು" ಎಂಥ ಅವಸ್ಥೆಯಲ್ಲಿದೆ? 'ಮರದ ಕೊಂಬೆಗೆ ಒಂದು ತೊಟ್ಟಿಲವ ಕಟ್ಟಿಹುದು..... ಮರದ ಮೇಲ್ಛದಿಯಲ್ಲಿ ಮರಜೇನು ಹುಟ್ಟಿಹುದು! .... ದೇವರಾಯನ ಕರುಣೆಯಿಂದ.... ಹನಿಯುತಿದೆ ಸವಿಜೇನು ಒಂದೊಂದು ಹನಿಯಾಗಿ!' ಆದರೆ 'ತೂಗುತಿದೆ ತೊಟ್ಟಿಲವು.... ಇಂತಿರಲು ಆ ಅಮೃತ, ತನ್ನ ಬಾಯಿಗೆ ಎಂದು, ಎಂತು ಬೀಳುವುದದನು, ತಿಳಿಯುವುದೆ ಆ ಕೂಸು?' "ಜೇಕು ನಿಂತಿರಲಾಗ ಲೇಸು ಲೇಸು" ಹೌದು ಎಂಥ ಲೇಸು! ನಮ್ಮ ಹೊಯ್ದಾಟ- ಚಾಂಚಲ್ಯ ನಿಂತು ಎಲ್ಲ ಸ್ಥಿರವಾದಾಗಲ್ಲವೇ ಅನಂತದಲ್ಲಿ ಅಮೃತಧಾರೆಯಾಗಿ ಇಳಿಯುವ "ಮುಗಿಲ ಜೇನನ್ನು" ಸಾವು ಸವಿಯುವದು? ಅಂತಲೇ "ಮಹಾಕಾವ್ಯ"ದಲ್ಲಿ ಉಸುರಿದಂತೆ "ಹೆಜ್ಜೆ ಹೆಜ್ಜೆಗೂ ಹಾಡು ಜಾವಜಾವಕು ರಾಗ. ಯುಗಯುಗಗಳಳಿದರೂ ಈ ಬಗೆಯು ಹಾಡು ಹೊಸದು!" ಎಂದು ನಾವು ಹಿಗ್ಗಬೇಕಲ್ಲವೆ?

ಹಿಂದಿನಿಂದ ಬರೆದ ಕವಿತೆಗಳೆಂದರೂ ಅದೇ ಉಸುರಿನಿಂದ ಬಂದವುಗಳೇ ಹೆಚ್ಚು. "ಆಶೆ" ಮತ್ತು "ಮನದಾಸೆ"ಗಳಲ್ಲಿ ಈ ಅಭೀಪ್ಸೆಯನ್ನು ಮನಗಾಣಬಹುದು. "ಈಸು ದಿನವ ಕಳೆದರೇನು, ಏಸು ವರುಷ ಗತಿಸಲೇನು? ನಾನು ಗಳಿಸಲಿರುವುದೊಂದೆ, ಏನು ಹಾಡಲದನೆ ತಂದೆ-ನುಡಿಯುತಿರುವದು, ವೀಣೆ, ಮಿಡಿಯುತಿರುವದು" ಎಂದು ಧ್ಯೇಯದ ಸ್ಥಿರತೆಯನ್ನು ಸ್ಪಷ್ಟಪಡಿಸಿ "ವಿಶ್ವವೃಕ್ಷಕಾನು ಅರಳು, ಕಾಯಿ, ಹಣ್ಣು, ಆಗದಿರಲು, ರೆಂಬೆಗುಂಟೆನಿಂತ ಹಸರು, ಎಲೆಯದಾಗಲೆನುವ ಉಸಿರು ಸೂಸುತಿರುವದು,

ಎದೆಗೆ ಬೀಸುತಿರುವದು" ಎಂದು ತಮ್ಮ ಹಿರಿಯಾಸೆಯ ಸ್ವರೂಪವನ್ನು ನಿಚ್ಚಳವಾಗಿ ಕಾಣಿಸಿರುವರು. "ಒಂದೇ ಆಶೆಯು ಎನಗಿದೆ ತಂದೇ, ಆಪ ಪಡೆಯುವುದೇ ಮೊದಲಾಸೆ ಇಂದೇ ಸಿಗದಿರೆ ಇನ್ನೆಂದಾದರೂ ದೊರಕೊಳಲಿನ್ನುವುದಾ ಆಸೆ." ಗೀತಾಂಜಲಿಯಲ್ಲಿ "ಈ ಜನ್ಮದಲ್ಲಿ ನಿನ್ನ ದರುಶನವಾಗದಿದ್ದರೂ ಆಗದಿರಲಿ, ಆದರೆ ನಿನ್ನನು ಪಡೆಯಲಿಲ್ಲವಲ್ಲಾ, ಎಂಬ ತಳಮಳಿಕೆಯು ನಿದ್ರೆಯಲ್ಲಿಯೂ ಎಚ್ಚರಿಕೆಯಲ್ಲಿಯೂ ಕನಸಿನಲ್ಲಿಯೂ ಮನಸಿನಲ್ಲಿಯೂ ಸಹ ಜಾಗ್ರತವಾಗಿ ಉಳಿಯಲಿ" ಎಂಬ ಆತುರಗೀತದ ಒಂದಣುವನ್ನು ನಾವಿಲ್ಲಿ ಅನುಭವಿಸುವದಿಲ್ಲವೆ? ಹೀಗೆ ಹಿರಿಯಾಸೆಪಟ್ಟ ಕವಿಯು ತನ್ನ ಆಶೆ ಫಲಿಸುವುದಕ್ಕೆ "ದೇವಶಿಲ್ಪಿಯೆ, ಕೇಳು ನಾ ಬಲು ಬಿರುಸುಕಲ್ಲಾಗಿರುವೆನು ಯಾವ ಒಡವೆಯ ಮಾಡಿ ಬಿಡುವೆಯೊ, ನಿನ್ನ ಕೈಯಲಿ ಕೊಡುವೆನು" ಎಂದು ಸರ್ವ ಸಮರ್ಪಣದ ಮಂತ್ರವನ್ನು ಜಪಿಸಿ "ಸ್ವೀಕರಿಸು" ಎಂದು ಜಗದೀಶನಡಿಗೆ ತಮ್ಮನ್ನು ನಿವೇದಿಸಿರುವರು.

ಹೀಗಿರಲು ಇವರು ಕಂಡ "ಉಷಾತಾಯಿ" ದಿನದ ಒಂದು ಜಾವ ಮಾತ್ರವಲ್ಲ, ಅನಾದ್ಯನಂತಕಾಲದ ಆದಿಮಾತೆ ಆವಳು. "ಬಂದಳು ಬಂದಳು ಉಷೆ ಬಂದಳು ಅದೊ!... ನಿಂದಳು ನಿಂದಳು ಮುಗುಳ್ನಗೆ ಸಾಗರ... ತಂದಳು ತಾಯಿಯು ಶಾಂತಿಯ ರಸವನು" ಇತ್ಯಾದಿಯಾಗಿ ಈ ಮಹಾತಾಯಿಯ ಮಹಿಮೆಯನ್ನು ಕೊಂಡಾಡಿ "ಕಡೆತನಕಿಡು ಇದೆ ಕೃಪೆಯಿಂದೆನ್ನುತ ಭಕ್ತಿಯ ಭರದಲಿ ಪೊಡಮಡುವೆ" ಎಂದು ಆದಿಮಾತೆಗೆ ಬೇಡಿಕೊಂಡಿರುವರು. ಜ್ಞಾನಸೂರ್ಯನ ಸಂದರ್ಶನ ಮಾಡಿಸುವ ತಾಯಿಯು ಇವಳೇ. ಒಂದು ರೀತಿಯಿಂದ "ದ್ಯಾವಾ ಪೃಥಿವಿ" ಯರೆಂದರೂ ಇವರೇ.

ಇಷ್ಟೆಲ್ಲ ಆದ ಮೇಲೆ "ಮನೆಯವಳ ವಿಷಯ ಹಿರಿಯಾಸೆಯ ಕವಿಯ ಹೃದಯವನ್ನು ಹರಣಮಾಡುವುದು ಸಹಜವೇ ಅದೆ. ತಾನು ನಡೆದ ದಾರಿಯಲ್ಲಿ ಆವಳೂ ನಡೆಯದೆ ಗತ್ಯಂತರವಿಲ್ಲ. "ಮನೆಯವಳೆ, ನೀನಿನ್ನು ಮನದವಳು ಆಗೀ .... ನನ್ನವಳು ನೀನಾಗಿ ಈ ಮನೆಗೆ ಬಂದಂತೆ, ನೀ ಮಾಡೇ ನಿನ್ನವನು ನಾನಾಗುವಂತೆ.... ನಾವಿನ್ನು ನಡುಹೊಳೆಯ ಈಸಬೇಕಿಹುದು, ನಿನ್ನ ಸಂಗಡ ನಾನೆ, ಗಟ್ಟಿಹಿಡಿ ಬೆಚ್ಚದಲೆ, ಮುಳುಗಿ ಮುಳುಗಿಸಬೇಡ ಕೈಬಿಟ್ಟು ನಲ್ಲೆ .... ನನ್ನ ಒಡವೆಯು ನಾನು ಗಳಿಸಬೇಕೆಂದು

ದುಡಿಯುತ್ತಿರುವೆನು, ಮಿಡುಕಿ, ಎಲ್ಲೆಲ್ಲು ಹುಡುಹುಡುಕಿ, ಗೋಳಿಡುವೆ ಬಿಡುವಿಲ್ಲ-ಶುಭ ನುಡಿಯೆ ಹಕ್ಕೀ!'' ಎಂದು ತನ್ನ ಹೃದಯದ ಹಕ್ಕಿಗೆ ತನ್ನ 'ಸಹ-ಧರ್ಮಿಣಿ' ಯಾಗಲು 'ಅರ್ಧಾಂಗಿ' ಯಾಗಲು, ಸಹಧ್ಯೇಯಗಾತಿ ಯಾಗಲು ಕೇಳಿಕೊಳ್ಳುವರು. ಇದೇ ಅಲ್ಲವೇ–ದಾಂಪತ್ಯದ ಶುಭಸಾಫಲ್ಯ!

'ಹರಿಹರ' 'ಜೀವಶಿಲೆ' ಪ್ರವಾಸವೃತ್ತವನ್ನು ಬಣ್ಣಿಸುವ ಕವಿತೆಗಳ "ಜೀವಶಿಲೆ" ಅತ್ಯುತ್ತಮ ಕವಿತೆ ಅಲ್ಲವೆಂಬು ಯಾರು ಅನ್ನುವರು? 'ಮದಿರಾ ಮಂದಿರ'ವು ಅನುವಾದ; 'ಸಂಧ್ಯಾವಂದನೆ'ಯು ನನ್ನದೊಂದು ಕವಿತೆಯ ಪೂರಕವಾಗಿ ಬರೆದ ಪ್ರತಿಪದ್ಯ. ಇನ್ನು ಕವಿಯಂತೆ ನಾವೂ "ಆಟಸಾಕು" ಎಂದು ನಮ್ಮ ಕಿರಿಚರಹವನ್ನು ಮುಕ್ತಾಯಗೊಳಿಸಬೇಕಲ್ಲವೇ? "ಕಣ್ಣು ಮುಚ್ಚುವಾಟ ಸಾಕು, ಕಣ್ಣು ತೆರೆಯುವಾಟಬೇಕು" ಎಂದು ಅಜ್ಞಾನದ ಕತ್ತಲೆಯಿಂದ ಮುಚ್ಚುಗವಿದ ನಮ್ಮ ಕಣ್ಣನ್ನು ತೆರೆಯಿಸುವ ದಿವ್ಯವಿಜ್ಞಾನ ಸೂರ್ಯನೆಡೆಗೆ ಹಾಗೂ ಅಮರಸಹಕಾರಿಣಿಯಾದ ದಿವ್ಯ ಉಷಾತಾಯಿಯ ಕಡೆಗೂ ನಮ್ಮ ಮುಖವನ್ನು ಹೊರಳಿಸುವಾ.

ಹಲಸಂಗಿ
೧೦-೭-೪೫

ಮಧುರಚೆನ್ನ

ಅರಿಕೆ

"ಮುಗಿಲಜೇನು" ಕವನಸಂಗ್ರಹವು ಏಳೆಂಟು ವರುಷಗಳ ಹಿಂದೆಯೆ ಪ್ರಕಟವಾಗಬೇಕಿತ್ತು. ಯಾಕಂದರೆ ಇದರಲ್ಲಿ ಬರುವ ಕವನಗಳು ಹತ್ತು ವರುಷಗಳ ಹಿಂದೆ ಬರೆದವುಗಳು. ಮೂರು ವರುಷಗಳ ಹಿಂದೆ ಇದನ್ನು ಮುದ್ರಿಸುವ ಪ್ರಯತ್ನ ನಡೆದುದರ ಫಲವಾಗಿ "ಮುನ್ನುಡಿ" "ಪರಿಚಯ" ಬರೆಯಿಸಿದ್ದಾಯ್ತು. ಆದರೆ ಕಾಗದದ ಅನನುಕೂಲತೆಯ ಕಾರಣದಿಂದ ಇಂದಿನ ವರೆಗೆ ಮುಂದುವರಿಸಬೇಕಾಯ್ತು. ಲೇಖನಸಿದ್ಧತೆ, ಮುನ್ನುಡಿ, ಪರಿಚಯ, ಧನಸಹಾಯ ಇವೆಲ್ಲ ಕೈಗೂಡಿದರೂ ಮುದ್ರಣಕಾರ್ಯವು ತಡೆಯಬೇಕಾದರೆ, ನಾಡತಾಯಿಗೆ ಅದಿನ್ನೂ ಬೇಕಿರಲಿಲ್ಲವೆಂದಾಯಿತು

ಈಗ, ನನ್ನ ಮಿತ್ರರಾದ ಪ್ರೊ. ಹಿರೇಮಲ್ಲೂರ ಈಶ್ವರನ್ ಅವರು ಪ್ರಕಟನಾಕಾರ್ಯಕ್ಕೆ ಹೊಣೆಹೊತ್ತು ನಿಂತಿರದಿದ್ದರೆ, ನನ್ನ ಮಿತ್ರರನೇಕರು ಧನಸಹಾಯ ಮಾಡಿರದಿದ್ದರೆ "ಮುಗಿಲಜೇನು" ಮುಗಿಲಜೇನಿನಂತೆ ಅವ್ಯಕ್ತವಾಗಿಯೇ ಉಳಿಯುತ್ತಿತ್ತು. ನನ್ನ "ಕರವಾಳಕ್ಕೆ" "ಮುಗಿಲಜೇನು" ಎಂದು ನಾಮಕರಣಮಾಡಿ ಆದರ ಪರಿಚಯ ಮಾಡಿಕೊಟ್ಟ ಶ್ರೀ. ಚನ್ನಮಲ್ಲಪ್ಪನವರಿಗೂ, ಶೀಘ್ರದಲ್ಲಿಯೇ ಇದಕ್ಕೊಪ್ಪುವ ಮುನ್ನುಡಿ ಬರಕೊಟ್ಟು, ಹರಸಿರುವ ಹಿರಿಯ ಸಹೋದರರಾದ ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರಿಗೂ ನಾನು ಚಿರಋಣಿಯಾಗಿರುವೆನು. "ಮುಗಿಲಜೇನು" ಮುದ್ರಿತ ಪುಸ್ತಕವನ್ನು ನೋಡುವ ಭಾಗ್ಯವಿಲ್ಲದೆ, ಸ್ವರ್ಗವನ್ನೇರಿ ಮುಗಿಲಜೇನು ಸವಿಯ ನಿಂತ ನನ್ನ ಜೀವನದ ಜೊತೆಗಾತಿಯಾಗಿದ್ದ ಸ್ವ ಮೀರಾಬಾಯಿಗೆ ಈ ಕವನಸಂಗ್ರಹವನ್ನು ಶ್ರದ್ಧಾಂಜಲಿಯಂತೆ ಅರ್ಪಿಸಿದ್ದೇನೆ. ಶ್ರೀ ಉರುವಕೊಂಡದ ಜಗದ್ಗುರುಗಳೂ ವಿಜಾಪುರದ ಶ್ರೀ ಹೇರಲಗಿಯವರೂ. ಅದೇ ಊರಿನ ಸ್ಕೂಲಬೋರ್ಡಿನ ಕ್ಲಾರ್ಕ ಶ್ರೀ. ಎಸ್. ಬಿ. ಬೀಳಗಿ ಅವರೂ ಸಕ್ರಿಯ ಸಹಾನುಭೂತಿಯನ್ನು ಮತ್ತು ನಿರಂತರ ಪ್ರೋತ್ಸಾಹವನ್ನು ನೀಡಿರುವದಕ್ಕೆ ನಾನವರಿಗೆ ಧನ್ಯವಾದಗಳನ್ನು ಅರ್ಪಿಸುತ್ತೇನೆ ಕನ್ನಡ ತಾಯಿಯು ಈ ಕವನಕುಸುಮಾಂಜಲಿಯನ್ನು ತಡವಾಗಿಯಾದರೂ ಸ್ವೀಕರಿಸಲು ಕೈಚಾಚಿರುವದಕ್ಕಾಗಿ, ಅತ್ಯಂತ ಭಕ್ತಿನಮ್ರನಾಗಿ ಈ ಕೃತಿಯನ್ನು ಅರ್ಪಿಸಿ ಶಿರಬಾಗುತ್ತೇನೆ. ಕನ್ನಡ ಜನತಾ ಜನಾರ್ದನನು ಅಕ್ಕರತೆಯಿಂದ ಇದನ್ನು ಸವಿಯುವನೆಂದು ನಂಬುತ್ತೇನೆ.

ಚಡಚಣ
೪೯, ಬಸವಜಯಂತಿ

—**ಸಿಂಪಿ ಲಿಂಗಣ್ಣ**

ಪರಿವಿಡಿ

೧. ಮುಗಿಲ ಜೇನು

ಮರದ ಕೊಂಬೆಗೆ ಒಂದು
ತೊಟ್ಟಿಲನ ಕಟ್ಟಿಹುದು
ತೊಟ್ಟಿಲಲಿ ಆಡುತಿದೆ
ಕೈಕಾಲುಗಳ ಬಿಚ್ಚಿ
ಈಗ ಕಣ್ದೆರೆದಿರುವ
ಹೊಚ್ಚ ಹೊಸ ಎಳೆಯ ಕೂಸು ॥
ಮರದ ಮೇಲ್ಬದಿಯಲ್ಲಿ
ಮರಜೇನು ಹುಟ್ಟಿಹುದು
ದೇವರಾಯನ ಕರುಣೆ
ಯಿಂದ ಹುಟ್ಟಿಗೆ ಸಣ್ಣ
ಮುಗಿಲು ಕೊರೆದಿಹುದಲ್ಲಿ
ಹನಿಯುತಿದೆ ಸವಿಜೇನು
ಒಂದೊಂದು ಹನಿಯಾಗಿ
ಧಾರೆಯಾಗಿಳಿಯುತಿದೆ
ಹನಿಗಡಿದು ಆ ಧಾರೆ
ಮತ್ತೆ ಮೇಲಕೆ ಏರಿ
ಹನಿಗೊಂಡು ಇಳಿಯುತಿಹುದು ॥
ತೂಗುತಿದೆ ತೊಟ್ಟಿಲವು
ಬಿಡದೆ ತೂಗಲು ಬೇಕು
ತೂಗು ನಿಂತರೆ ಹಸುಳೆ
ಕಿರಚಿ ಕೂಗುವದೆನಿತೊ.
ಹುಟ್ಟಿರುವ ರೆಂಬೆಯದು
ಅಂತರದಿ ತೇಲುತಿದೆ
ರೆಂಬೆಯಲಿ ಹುಟ್ಟಿಹುದು

ಹುಟ್ಟಿನಲಿ ಜೇನಿಹುದು
ಜೇನಿನಲಿ ಸವಿಯಿಹುದು
ಸವಿಯಲ್ಲಿ ಸುಧೆಯಿಹುದು,
ಅದು ಒಸರಿ ಇಳಿವಂತೆ
ದೇವರಾಯನ ಕರುಣೆ
ಮುಗಿಲು ಕೊರೆದಿಹುದಲ್ಲಿ
ಹನಿಹನಿದು ಹನಿಯುತಿದೆ
ಇತ್ತ, ಈ ತೊಟ್ಟಿಲಲಿ
ಅಮರಶಿಶು ಅಳುತಲಿದೆ
ತಿನ್ನಲಿಕೆ ಬಾಯಿಹುದು
ಸಹಿಸಲಾಗದೆ ಅಳುತ
ತೊಟ್ಟಿಲಲಿ ತೂಗುತಿದೆ
ಇಂತಿರಲು ಆ ಅಮೃತ
ತನ್ನ ಬಾಯಿಗೆ ಎಂದು
ಎಂತು ಬೀಳುವುದದನು
ತಿಳಿಯುವುದೆ ಆ ಕೂಸು?
ಜೀಕು ನಿಂತಿರಲಾಗ ಲೇಸು! ಲೇಸು!!

೨ ಕರವಾಲ.

ಕಣ್ಣೀರ ಮುನ್ನೀರ ನಡುವಿನಲಿ ಮುಳು ಮುಳುಗಿ
ಮಣ್ಣು ಮುಕ್ಕಿಸಿ ವೀರ- ಧೀರ ಸಾಹಸಿಗಳನು
ಹಸಿದ ನಾಲಗೆ ಚಾಚಿ ನೆಲವ ನೆಕ್ಕಲಿಕೆಂದು
ಮಸೆದ ಕೊಡಲಿಯನಾಂತ ಕಾಳಿ ಕಂಕಾಳಿಯಾ
ಕರದ ಕರವಾಲ ನಾನು ||

ತುಂಡಿಸಿದ ರುಂಡಗಳು ತಾಯಕೊರಳಿಗೆ ಮಾಲೆ
ಮೊಂಡಗೈಗಳು ನಗ್ನ ನಡಕಿಟ್ಟ ಒಡ್ಯಾಣ
ಕಾಳ ಹಸ್ತಕೆ ರಕ್ತ ಅಲತಿಗೆಯ ರಸವಾಯ್ತು
ತಾಳ ಹಾಕುತಲಿರಲು ಮೈಯು ಕೈಯುಗಳೆಲ್ಲ
ಲೀಲೆಯಾ ಪಿರಿಸುಸುರಿಗೆ ಹೂವು ನಾನು ||

ರಕ್ಕಸರ ಸೊಕ್ಕು ರಕ್ತವನು ತರಿದೊರಿಸಲಿಕೆ
ಉಕ್ಕು ಉಕ್ಕಿನ ಹಲ್ಲು ನನಗುಂಟು ಹರಿತಾಗಿ
ತಾಯ ನಾಲಗೆಯಂತೆ ಕಡುಗೆಂಪು ನನ್ನ ಮೈ
ತಾಯಿಗೀಯುವ ಮೊದಲು ನೆತ್ತರಿನ ರುಚಿ ನನಗೆ
ಫಲದಾಸೆಯಿನಿತಿಲ್ಲದಾ ವೀರಕರ್ಮಿ ನಾನು ||

ತಾಯ ಶಕ್ತಿಯೆ ನನಗೆ ಕುಣಿಸುತಿಹುದು
ತಾಯ ಶಕ್ತಿಯೆ ನನ್ನ ತಣಿಸುತಿಹುದು
ಆಕೆ ಮುಟ್ಟಲು ಜಡವು ಜೀವವಾಂತಿಹೆನು
ಹಿಡಿದೆತ್ತಲಾನೊಂದು ಅಂಗವಾಗಿಹೆನು
ನಾನವಳ ಅಂಗವಾಗಿಹೆನು ||

೩. ವಿಮರ್ಶಕ !

ನುಡಿದೇವಿಯೆಡೆ ಬಂದ ಕವನ ನೈವೇದ್ಯವನು
ಮುಡಿಪಿಟ್ಟು ಅವಳಿತ್ತ ಹರ್ಷ ಪ್ರಸಾದವನು
ಕವಿಭಕ್ತನುಡಿಯಲ್ಲಿ ಇಡುವ ಪೂಜಾರಿ ನೀ
ಒಡೆಯನುಡುಗೊರೆಯಿತ್ತು ಬಡವನವಲಕ್ಕಿಯನು
ಹೀಗಳಿಸದೆಡೆಯಿಡುವ ಹಿರಿಮನಸು ನಿನಗಿರಲಿ
ಕಲ್ಲುಸಕ್ಕರೆಯೊಬ್ಬ ಬೆಲ್ಲಪತ್ರಿಯನೊಬ್ಬ
ತೆಂಗು ಕಪ್ಪುರಗಳನು ಮುತ್ತಿನುಡಿಯಕ್ಕಿಯನು
ತಂದು ಮಣಿವವರಿಹರು ಹರಕು ಹೂಗಳನರಸಿ
ಬಡಕೊಡಲ ತಟ್ಟೆಯಲಿ ತಂದು ಕೈ ಮುಗಿಯುತಿರೆ
ಬಿಡದೆ ಕೈನೀಡಿ ಆ ನುಡಿದೇವಿ ನಲಿದೊಲಿದು
ಬೇಡುತಿರೆ ನೀ ಬರಿದೆ ಅಗ್ಗದೊಡನೆಯು ಎಂದು
ವರದ ಹಸ್ತವನಿಂತು ಮರೆಮಾಡಬರುವರೇ?
ಹೀನ ದಕ್ಷಿಣೆಗೆ ಬಲಿಬಿದ್ದ ಬಡಪೂಜಾರಿಯೇ!!

೪. ಬಯಲಾಟ

ಆಟ! ಇದು ಬಯಲಾಟ! ಇಗೊ ನಾವು ಹಿಗ್ಗಿನಲಿ
ನಲಿದುಲಿದು ಕೂಗುವಾ ಕುಣಿದಾಟ!! ನೋಡಿಲ್ಲಿ
ಬಣ್ಣಬಣ್ಣದ ಪರದೆ, ಸೊಬಗು ಬೀರುವ ಪಕ್ಕ !
ಕಣ್ಣನುರೆ ಕುಕ್ಕಿಸುವ ಮಿಂಚು ದೀಪದ ಬೆಳಕು !
ಕುರುಡುಗೊಳಿಸುವ ಕಾಳ ಕಗ್ಗತ್ತಲೆಯ ಪೊತ್ತು !
ನೊರೆದುಲಿವ ಸಂಗೀತ ರಾಗದಾಲಾಪಗಳು !
ಈಯಾಟ ನೋಡಲಿಕೆ ನೆರೆದು ಕುಳಿತವರೆಷ್ಟು ?
ಕಲ್ಲುಕಲ್ಲಿಗು ಕಣ್ಣು, ಹುಲ್ಲುಕಡ್ಡಿಗು ಕಿವಿಯು !
ಮೇಳದಲಿ ಒಂದಿನಿತು ಕೊಂಕಿದರು ನಗೆಗೀಡು.
ಜಾಣಜಾಣರು ನೆರೆದು ಈ ಆಟ ನೋಡುವರು
ಎಂದು ನಾಂದಿಯೊ ಇದಕೆ - ಏಕೆ ಮೊದಲಾಯಿತೊ ?
ಇಂದೆ ಮುಗಿಯುವುದೆಂದು ಹೇಳಲಹುದೆ ?
ಬಂದ ಪಾತ್ರಗಳೆಲ್ಲ ಕುಣಿದು ಮರೆಯಾಗುತಿವೆ
ಹಿಂದೆ ಬಹ ಪಾತ್ರಗಳ ಎಣಿಕೆಯಿಲ್ಲ.
ಜೀವನದ ಕಲಹಗಳು, ಸುಖದುಃಖರೋಗಗಳು,
ವಿರಹ ವ್ಯಾಧಿಗಳೆಲ್ಲ ನೆತ್ತರವನುಕ್ಕಿಸುವ
ಕೊಲೆಸುಲಿಗೆ ಯುದ್ಧಗಳು, ಅನುರಾಗ ಪ್ರೀತಿಗಳು
ಪ್ರೇಮದಾಲಾಪಗಳು, ಮರಣಭಯ ಕ್ರೋಧಾವೇಶ
ಮೊದಲಾಗಿ ಸರ್ವವೂ ನಾಟಕದ ಸನ್ನಿವೇಶ !!
ಎದೆಯೊಲವನುಕ್ಕಿಸುವ ಇನಿಗೊರಲ ಕೂಗುಗಳು !
ಎದೆಗೆಡಿಸಿ ಬಿಕ್ಕಿಸುವ ಗುಡುಗು ಗದ್ದರಣೆಗಳು !
ನುಣ್ದನಿಯ ಸರಸಸಂಗೀತಗಳು- ಉಲಿವುಗಳು !
ಕೂಸುಗಳ ಕೊಳಲದನಿ ಮುದ್ದು ಮುದ್ದಿನ ಮಾಟ !
ನಲಿಯುವೆವು ಒಲ್ಮೆಯಲಿ ಒಮ್ಮೆ ಸತಿಪತಿಯಾಗಿ

ಕೆಲೆಯುವೆವು ಹಿಗ್ಗಿನಲಿ ಒಲಿದ ಸಖಸಖರಾಗಿ
ಅರಸು ಸಿರಿಯುಲೊಮ್ಮೆ ಮೈಮರೆವ ಸುಖದೊಟ್ಟು
ವಿರಸ ಜೀವನವೊಮ್ಮೆ ಉರಿಗಿಚ್ಚು ಮರೆಸುವದು !
ಕುಣಿದು ಕೂಸುಗಳಂತೆ ತಣಿದು ತರುಣರ ತೆರದಿ
ದಣಿಯುವೆವು ಹೋರಾಡಿ ಸಂಸಾರ ರಂಗದಲ್ಲಿ !!

*   *   *

ನಲಿವುಕೆಲೆ ಹರುಷ ಹಿರಿಹಿಗ್ಗುಗಳು ನಮಗೇಕೆ ?
ಕೊಲೆಯುಭಯ ಕಾಳಗದ ಆವೇಗ ಇವು ಬೇಕೆ ?
ನಾವಾರು ? ಈ ಒಂದು ಇರುಳಾಟದಲಿ ಕುಣಿದು
ನಲಿಯಲಿಕೆ ಬಂದವರು, ಬೆಳಗಿನಲಿ ಮೇಳಯಿಸಿ
ರಾತ್ರಿಯಾಟವ ನೆನೆದು ಕೈತಟ್ಟಿ ನಗುವವರು
ವೇಷದುಡುಗೊರೆಗಳನು ಕಳೆದಿಟ್ಟು ಕಣ್ತೆರೆದು
ಗುರುತರಿತು ನಾವೆಲ್ಲ ಹಿಗ್ಗಿನಲಿ ಬೆರೆಯುವವರು
ಈ ಆಟದಲಿ ನಲಿದು ಹಿಗ್ಗಲಿಕೆ ಬಂದವರು
ನಾಳೆ ನೆನೆನೆನೆದಿದನು ಹಿಗ್ಗಿನಲಿ ಬೆರೆವವರು
ತೊಟ್ಟವೇಷದಲಿನಿತು ಕಲೆಯು ಕಳೆಗೊಳುವಂತೆ
ಮೈಮರೆಯೆ ಹಿಗ್ಗಿನಾವೇಶವದು ಬೇಡವೇ ?

೫ ಭಯು!

ಭಯು ! ಭಯು !! ಎತ್ತೆತ್ತಲು ಭಯು ! ಸುತ್ತುಮುತ್ತಲು ಭಯು !
ದೇವನಾಜ್ಞೆಯು ನಿಷ್ಠುರಕಠೋರತೆಗೆ ಭಯುಗೊಂಡಿದೆ — ವಿಶ್ವ!
ಉದಯುದಲೆದ್ದು ದಿನದೆಲ್ಲ ಕಜ್ಜಗಳ ಕೊನೆಗಾಣಿಸಲಿಕೆ
ದುಡಿದುಡಿದು ಅಡಗುತಿಹನದೋ—ಆ ರವಿ ದಿನಪತಿಯುಂತೆ!
ಹೊತ್ತಕೆಲಸದಲೆಂತು ಕುಂದುಬರುವುದೋ ಎಂದು
ಕುಂದುವನು ಚಂದಿರನು ಬಿಳುಪೇರ್ದ ಮೊಗ ರೋಗಿಯುಂತೆ!
ಉಸುರಿಲ್ಲದಲೆದುಲಿದು ಓಡುತಿದೆ ಆ ಗಾಳಿ
ಒಂದು ಹೊತ್ತಿನ ಬಿಡುವು ಅದಕಿಲ್ಲ ಅಂಚೆಯಾಳು!
ಬೆಳಕುಕತ್ತಲೆಯೆಸದೆ ಮೊರೆದುರುಳುತಿಹಳಲ್ಲಿ
ಆ ಹೆಣ್ಣುಹೊಳೆ ಮುಳ್ಕಲ್ಲು ಕಮರಿಂಪಲಿ ಮುಗ್ಗುತ್ತ ನುಗ್ಗುತ್ತ!
ಯುಗಯುಗಗಳಿಂದಲು ಆಣೆಯಿಟ್ಟವರಂತೆ
ಅಗೊ! ಬೆಟ್ಟಬೆಟ್ಟಗಳ ಸಾಲು ಭಯುದಿ ಕೈಕೈ ಹಿಡಿದಿವೆ!
ಮೋಡಪಡೆ ನೋಡಲ್ಲಿ ಸಾಗುತಿದೆ ಸಾಗುತಿದೆ.
ಕಡಲನೀರನು ಹೊತ್ತು ತೇಕುತೇದುತ– ಹೇರಾಳಿನಂತೆ!
ಕತ್ತಲೆಗೆ ಕಡುಬೆದರಿ ಮಲಗುವದು ಸೃಷ್ಟಿಯೆಲ್ಲ
ಅಯ್ಯೊ! ಬೆಳಗಾಯ್ತೆಂದು ದಿಗ್ಗನೇಳುವದು ಹೆದರಿ.
ಚಳಿಯೆಂದು ನಡುನಡುಗಿ ಬಿಸಿಲಿಗೋಡುವರೊಮ್ಮೆ
ಉರಿಬಿಸಿಲು ಸಾಕಾಯ್ತು ನೆರಳೆಲ್ಲಿ ಎಂದರಚಿ ಕೂಗುವರು.
ಕರ್ತವ್ಯಕಂಜುವರು। ಕಾಟಗಳಿಗಂಜುವರು !
ಊಟಕಳುಕುವರುಂಟು ! ರೋಗಕಳುಕುವರುಂಟು !
ಭಯುಗೊಂಡು ಭಯುಗೊಂಡು ಕಲ್ಲುಕಲ್ಲಿಗು ಶರಣು !
ಭಯುದಿಂದ ನಯುವಾಗಿ ನಾಗರಿಕತೆ ಬೋನಪಡೆ !
ಭಯುದ ಬಿಸಿಲಿಗೆ ಮರವು ಚಿಗುರುತಿಹುದು.
ಭಯುದ ಹಸಿವೆಗೆ ಭಕ್ತಿ ಹೊಗರುತಿಹುದು.

ಹುಟ್ಟಿದರೆ ಭಯವುಂಟು! ಮುಟ್ಟಿದರೆ ಭಯವುಂಟು!
ಅಡಿಗಡಿಗೆ ಭಯದಗಂಟು! ಗಂಟುಗಂಟಿಗೆ ಭಯದ ಅಂಟು!
ಭಯತೊಟ್ಟು ಭಯಮರೆತ ಭೀರುಗಳಿಗೆಣೆಯಿದೆಯೆ?
ಭಯವೆ ದೇವನ ಆಜ್ಞೆ! ಅದುವೆ ದೇವನ ಸಂಜ್ಞೆ!
ಭಯವೆ ಆತನ ಮೌನಭಾಷೆ! ಅಭಯನಿರುವಲ್ಲಿಲ್ಲವ
ಭಯದನೊತ್ತು

---

೬. ಅಕ್ಕಸಾಲೆ

ನೋಡು; ನಾವಿಲ್ಲಿ ನೆರೆದಿಹವು ಈ ಅಕ್ಕಸಾಲೆಯಲಿ
ಇಲ್ಲಿಹುದು ಬಾಳುವೆಯ ಕುಲುಮೆ. ಕೆಂಪು ಕಿಚ್ಚಿನ ಕುಂಡ
ಅಲ್ಲಿ ಆ ಅಡಿಗಲ್ಲು! ನಿರ್ದಯದ ಸುತ್ತಿಗೆಯು!
ನಿಷ್ಠುರದ ಇಕ್ಕಳವು! ಮೋಹಿಸುವ ಪಡಿಯಚ್ಚು!
ಒಡೆಯನೆಲ್ಲಿಹನೇನೊ ವಿಶ್ವಕರ್ಮನವನಿಲ್ಲಿ ಹೂಡಿಹನು
ಚಿನ್ನಬೆಳ್ಳಿಗಳೆಲ್ಲ ತುಣುಕುಗೊಂಡಿವೆ ಏಕೆ?
ಒಂದು ಕಳೆಗುಂದಿಹುದು, ಒಂದು ಕಲೆಗೆಟ್ಟಿಹುದು
ಅರೆಮಿಂಚು ತೊರಗಿಹುದು, ತಳೆದಿಹುದು ಕುಸುರೊಂದು
ಬಣ್ಣನುಟ್ಟಿಹ ಕೆಲವು ತಕ್ಕಡಿಯು ನಡೆನೋಡನೇರಿಹವು
ಯಾವರಾಯನ ಮನೆಯ ಒಡವೆ ವಸ್ತುಗಳಿಹವೊ?
ಎಂಥ ರಾಣಿಯು ಕೆಂಪು ಮೈಯುಡರಲಿಹ ತೊಡವುಗಳೊ?
"ಅರರೆ ಎಂಥಾ ಕಿಚ್ಚು! ಕರಗಿ ತಳಮುಳಿಸಿ ತಿಳಿಯಾಗಿಹೆನು!
"ಅಯ್ಯೋ! ಎಂಥಾ ಏಟು! ಬಡಿದತ್ತ ಮೈಗೊಟ್ಟು
ಮಣಿಯುತ್ತಲಿಹೆನು!
"ಕತ್ತರಿಸಿ ಕಡಿಯುವನು! ಮುರಿದು ಮುಸಿಗೊಗೆಯುವನು
"ಏಸು ಸಲ ಈ ಕಿಚ್ಚು ಏಸು ಸಲ ಈ ಏಟು??
"ಮರೆತು ನಮ್ಮನು ಎನಿಸು ಕಾಲ ಒಗೆಯುವನೊ ಈ ಕರ್ತಾರ?"
ಎಂದು ಕೇಳುತ್ತಲಿವೆ ಅಲ್ಲಲ್ಲಿ ಬಿದ್ದ ಹೊನ್ನುಬೆಳ್ಳಿಗಳು
ಇದ ಕೇಳಿ ಹೂನಗೆಯ ಬೀರಿತಾ ಗದ್ದುಗೆಯ ಚಿನ್ನದೋಲೆ
"ಮರುಳರಿರಾ! ಏಕಿಂತು ಮರುಗುತಿಹಿರೆಲೆ!
ಆ ಹಾಡೆ ಮೊದಲು ನನಗೂ ಇತ್ತು
ಕರ್ತಾರನೊಲಿದು ಕೈವಿಡಿದ ಗಳಿಗೆಯೋ ಹಿರಿಯೋಗ!
ಕಿಚ್ಚುಕೆಂಡದಿ ಮಿಂದೆ! ಏಟು ಎದೆಯರಳಿಸಿತು!
ಪಡಿಯಚ್ಚಿನೊತ್ತಿನಲಿ ಅಚ್ಚರೂಪಾಗಿಹೆನು

ಇಂದಿದೋ ಮಡಿಯುಟ್ಟು ಮಂದಿರಕೆ ನಡೆದಿಹೆನು
ಒಲಿದರಸಿ ಕಿವಿಯೊಳಗಿರಿಸೆ ಅದುವೆ ಧ್ರುವಪದವೆನಗೆ!
ಏಕೊಂದು ಮರುಗುವಿರಿ! ಏಕಿನಿತು ಕೊರಗುವಿರಿ!
ಏನಿದ್ದರೂ ನೀವು ದೇವರಾಯನ ಮಡದಿಗೊಪ್ಪುವ
ತೊಡುವೊಡವೆಯಾಗುವಿರಿ! ದಿಟವೆನ್ನಿ! ದಿಟವೆನ್ನಿ!
ಹಿಗ್ಗು ನಿಮ್ಮೆದೆಗಿರಲಿ! ನೋಡಿರಿಲ್ಲಿ
ಅಡಿಗಲ್ಲು ಸುತ್ತಿಗೆಗಳೆಂತು ಬಿದ್ದಿಹವು
ಮೋಕ್ಷವುಂಟೇ ಅವಕೆ?
ಕಿಚ್ಚಿನಲಿ ಮಿದುವಾಗಿ ಸಮಟಿಗೆಯ ಬಿನ್ನಾಣದಿಂದಲವಕೀರೂಪು!
ಇದನರಿತು ಅಳಿಮನವ ಕಳೆದೊಗೆಯಬೇಕು
ಮಾತಾಯನಲುಮೆಯನು ನೆಚ್ಚಬೇಕು"

೭. ಮುರಿದು ಬಿದ್ದ ಕತ್ತಿ

ಒಮ್ಮೆ ಸಂಜೆಯ ಸಮಯ ಅದೆ ದೀಪನಂಟಿಸಿದೆ
ಸೊಮ್ಮುಗೊಂಡಿತ್ತಾಗ ಮಾತು ಮಾತಿನ ಭರವು
ದೇಶದೇಶದ ವಾರ್ತೆ ಹೇಳಿಕೇಳುತ್ತಲಿರೆ
ಹೊಲದಾಳು ಭರಮತಾನವಸರದಿ ಬಂದು
"ಧನಿಯರಿರಾ! ಇದೊ ನೋಡಿ ಈ ಕತ್ತಿ
ಹೂಳಿತ್ತು ಮಣ್ಣಲ್ಲಿ ತುಕ್ಕುಹತ್ತಿ
ಊಳುತಿರೆ ತಾನಾಗಿ ಮೇಲೆ ಬಂತು
ಊರಮುಂದಿನ ಹೊಲದಿ ಸಿಕ್ಕಿತಿಂತು
ಅಚ್ಚಉಕ್ಕಿನ ಕತ್ತಿ! ಮುರಿದರೇನು?
ಮೇವು ಕತ್ತರಿಸಲಿಕು ಬಾರದೇನು?"
ಎಂದುಸುರಿ ಅದನಿಟ್ಟು ಕೊಟ್ಟಿಗೆಗೆ ನಡೆದ
ನಮಗೊಂದು ಹೊಸವಿಷಯ ಮಾತನಾಡಲಿಕೆ
"ತುಡುಗರಾಯುಧ"ವೆಂದು ನುಡಿದನೊಬ್ಬ
"ಅಲ್ಲ ತೆಗೆ! ಅಲ್ಲೇತಕಿದ್ದೀತು ಮುರಿದಕತ್ತಿ"
"ಗೊಬ್ಬರದ ಗಾಡಿಯಲಿ ಬಂದಿರಲು ಸಾಕು"
"ಹಳೆಯ ಕುಡ! ಇಂದು ಈ ಗತಿಯ ಕಂಡಿಹುದು"
ಇಂತು ಕಲ್ಪನೆಯ ಕಲ್ಲುಗಳನೇರಿಸಿದರೂ
ಯಾವ ಮಂದಿರದ ನಿರ್ಮಾಣವಿಲ್ಲ!
ನನ್ನ ಬಗೆಯಲಿ ಮಾತ್ರ ಎಣಿಕೆ ಮಿಗಿಲಾಯ್ತು
ನಿದ್ದೆ ಬಾರದು ಮತ್ತೆ ಯುಕ್ತಿ ತೋರದು ಎನಿತು
ಕಡೆಯ ಜಾವದ ಇರುಳ ಜಂಪಿನಲ್ಲಿ
ಕತೆಯ ಹೇಳಿತು ಕತ್ತಿ ಕನಸಿನಲ್ಲಿ
"ಕೇಳಣ್ಣ! ನನಗಿಂದು ನಾನೂರು ವರುಷ
ಹೇಳುವೆನು ಹಾಳುಕತೆ ಏನು ಹರುಷ?

ನಾನೊಬ್ಬ ಮನ್ನೆಯನ ಕೈಯಾಳು ಅಂದು
ನಾನೆ ಆಳುತಲಿದ್ದೆ ಅವನ ನೈಮನಗಳನು
'ಕಾಳಗದ ಕಲಿ' ಎಂಬ ಹೆಸರು ನನಗೆ
ಸೋಲೆಲ್ಲಿ ನನ್ನ ಕೈ ಹಿಡಿದ ಕಲಿಗೆ
ವಿಕ್ರಮನ ಕಾಲದಲಿ ನನ್ನ ಜನ್ಮ
ನನ್ನ ಜನ್ಮದ ದಿವಸ ಎಂಥ ಹಬ್ಬ !
ಮನೆಮನೆಯ ಬಾಗಿಲಲಿ ಸಾಲುದೀಪ !
ಕೇರಿಕೇರಿಯ ಮುಗಿಲು ತೋರಣದ ಗಿಣಿಬಳಗ !
ಬಣ್ಣ ಬಣ್ಣದ ಬೆಳಕು, ಶೃಂಗಾರದೆಸಕು !
ಡೋಲು- ಹರೆ- ಕಹಳೆಗಳ ಮುಗಿಲ ಮೊಳಗು !
ಚಿನ್ನದಾ ಪಲ್ಲಕ್ಕಿಯಲಿ ನನ್ನ ಮೆರೆವಣಿಗೆ
ಮೆತ್ತನೆಯ ಸಕಲಾತಿ ದಿಂಬು ನನಗೆ!
ಕೆತ್ತನೆಯ ಕುಸುರು ಬಜ್ಜರದ ಹಿಡಿಕೆ
ಜರದ ಸುಳುಹಿನ ಕವಚ ನನ್ನ ಮೈಗೆ
ನನ್ನ ವೋರೆಯ ಮೆರುಗು ಮಿಂಚಿನಂಚು !
ಹುಟ್ಟು ಹಬ್ಬದ ಕತೆಯ ಬೆಳಸಲಾರೆ
ನಾ ಮುದುಕ ನೆನಪೆಲ್ಲಿ ಉಸುರಲಾರೆ
ರಣಕೆ ಹೊರಡಲು ನನ್ನ ವಿಧಿಯುಕ್ತ ಪೂಜೆ
ಅರಮನೆಯ ಐದೆಯರು ಆರತಿಯ ನೆತ್ತಿ
ಮುತ್ತಿ ನಕ್ಷತೆಗಳನು ಮೇಲೆರಚಿ ಬಿತ್ತಿ
ಹರಸುವರು ಮಂಗಲದಿ ವಿಜಯ ಪಡೆಯೆಂದು
ಮೈಮಣಿದು ಮನ್ನೆಯರು ಎತ್ತಿಕೊಳ್ಳುವರು
'ಕಾಳಗದ ಕಲಿಗೆ ಜಯವೆಂದು ಕೂಗುವರು
ರಾಜ ರಾಜರ ಭಯವು ನನಗೆಲ್ಲಿ ಆಗ ?
ನೂರಾರು ಬಂಟರನು ರಣಕೆ ಬಲಿಕೊಟ್ಟೆ
ಶೂರಧೀರರ ರುಧಿರರುಚಿಯೆನಗೆ ಗೊತ್ತು
ವೀರ್ಯಸಾಹಸ ಧೈರ್ಯಗಳು ನನ್ನ ಸೊತ್ತು

ಗೆಲುವಿನಲಿ ಕೀರ್ತಿ- ಯಶ ಮೊದಲು ನನಗೆ
ಒಲಿದ ರಾಣಿಯುಸ್ಪರ್ಶ ಮೊದಲು ನನಗೆ
ಅರಸು ಅರಸಿಯ ಲಗ್ನ ನನ್ನ ಮುಂದೆ
ಮದುವಣಿಗರಾರತಿಯು ನನಗೆ ಹಿಂದೆ
ತುಂಬಿದೋಲಗವಲ್ಲಿ ನನಗೆ ಮಾನಸ್ಥಾನ
ಏನು ಹೇಳಲಿ ಇನ್ನು ತುಂಬಿ ಬರುತಿದೆ ಕೊರಲ
ನೋಡು ನನ್ನೀಗತಿಯ ಮುಪ್ಪಿನಾವೇಗವನು
ರಾಜರಾಜರು ಹುಟ್ಟಿ ಬೆಳೆದಳಿದು ಹೋದರೂ
ನನ್ನ ಪ್ರಾಯವು ಅಂದು ಅಳಿಯದಿತ್ತು
ನಿನ್ನ ಹೊಲವೆನಗೆ ಕೊನೆಯ ಕಾಳಗದ ರಣ
ಅಲ್ಲಿ ನಾನಾದೆ ಗತಿಗೆಟ್ಟಿರುವ ರಣದ ಹೆಣ
ಎನಿತು ಬದುಕಿದರೇನು ? ಮುಪ್ಪು ತಪ್ಪಿತೆ ಹೇಳು
ಕೀರ್ತಿ-ಯಶ- ಬೆಳಕುಗಳ ಮರೆಸುವದು ಮುಪ್ಪು !
ಬಾಳುವೆಯ ಬಲಿಕೊಟ್ಟು ಮರಣವೇ ಶರಣೆಂದು
ಸೋಲುವದು ಮುಪ್ಪು!"

ಎಂದುಸುರಿ ಆ ಕತ್ತಿ ಮುಖಮುದುರಿ ಮರೆಯಾಯ್ತು.
ಎಚ್ಚೆತ್ತು ಕೇಳಿದರೆ "ಮರಣವೇ ಶರಣೆಂದು ಸೋಲುವದು
ಮುಪ್ಪೆಂಬ ನುಡಿಯುಲಿಯಿತು.

೮. ಕೊನೆಯೆಂತೋ ?

ಮಾಮರವು! ಮಾಮರವು! ಕಣ್ಣು ತಣಿಸುವ ಹಸುರು!
ಬಿಸಿಲ ಬೇಗೆಗೆ ಬೆಂದು ಬಳಲುವರಿಗಾಸರವು -
ಗಾಯಕರ ವಾದಕರ ಪಂಡಿತರಿಗಾಸ್ಥಾನ !
ಏನು ಸುಗ್ಗಿಯ ಸೊಬಗು ! ಮುತ್ತಿನೆಸಳಿನ ಹೂವು !
ಹೂವುಗಳೆ ಎಲೆಗಳೋ ಎನುವಂತೆ
ಎಲೆಗಳಸ್ತಿತ್ವವನು ಮರೆಸಿ
ಎಣೆಯಿಲ್ಲದರಳಿಹವು—
ಧರಣಿಯಲಿ ಮಾನವನ ಪಸರದಂತೆ !
ಹೂವು ಹೂವಿಗು ಹೀಚು ಮಿಡಿಯಾಗಿ ಕಾಯಾಗಿ
ಭವ್ಯಮಾವಿನ ಮರವ ನಿರ್ಮಿಸುವ
ಬೀಜವನು ಎದೆಯಾಂತ ತನಿರಸದ ಹೊಂಗಳಸಗಳ ಜನನಿ !
ಆದರೇನು ?
ಎಲೆ ಹೂವೆ ! ಮರುಳುನಗೆ ನಗುತಿರುವೆ ಏಕೆ ?
ಸುಳಿಗಾಳಿಗು ನಿನ್ನ ಎದೆ ನಡುಗು ಏಕೆ ?
ಬೆಚ್ಚಗಂಗಳು ನನ್ನ ಭಾವವನು ಮೀಟುತಿವೆ !
ಅಹುದು ನಿನ್ನೀ ಸಂಜ್ಞೆ ನನಗರ್ಥವಾಯ್ತು !!
"ಈ ಹೂವಿನಾಗರಕೆ ಬಿರುಗಾಳಿ ಪ್ರಳಯಕಾಲ
ಲೆಕ್ಕವಿಲ್ಲದ ನಾವು ಧರೆಗುರುಳಿ ಮುಡಿಯುವೆವು !
ಕೇಳು ನಮ್ಮ ಕೊನೆಯ ಕತೆಯ
ತತ್ತಿಗಳ ನುಂಗಲಿಕೆ ಮೃತ್ಯುವಿನ ಬಾಯ್ತೇಸೊ !
ಹಿಂಚಿಸಲೆ ಹುಳುಕಚ್ಚಿ ಗೋಳಿಸುವ ಕೂರ್ದವಡೆ !
ಗಾಳಿಹುಳುಗಳ ಮೀರಿ ಬದುಕಿ ಮಿಡಿಯಾದರೂ
ಮಳೆ ಆಣೆಕಲ್ಲುಗಳ ಕಣ್ತಪ್ಪಿ ಅಡಗಿದರು
ಅಗೋ ಬಂತು ದನಗಾಹಿ ಬಾಲಕರ ದಂಡು !

ಕಲ್ಲಿನೇಟಿನ ಮುಳಿಯು ಗಂಟು ಬೇನೆಯು ಹಾಗೆ!
ಮುಟ್ಟಿದವರಳಿಯು ಬೇಕು!
ಚಟಸಿಪಲ್ಲಿಗಳೆಂದು ಬಾಲಹತ್ಯೆಗೆ ನಿಂತ
ಮಾನವರ ಲೋಕವೇ ಮರಣವರಮನೆಯೆಮಗೆ!
ಅವರ ಬಾಯ್ರುಚಿಗೆಂದು ಹೋಳುಹೋಳಾಗುತಿದೆಪ್ರಾಯು!
ಕ್ರೂರಕೊಲೆ ಚಿತ್ರಹಿಂಸೆಯು ಮರಣ!
ರೋಗರುಜೆ ವೈರಿಗಳ ಹಾವಳಿಗೆ ಬಗೆಬೆಂದು
ಬಂಧುಗಳ ದುರ್ಮರಣ ದುಃಖದಲಿಕಡುನೊಂದು
ಚಿಂತೆಯುಲಿ ಪಾಡಾಗಿ ಸಾಕುಸಾಕೆಂದೆರಗಿ
ಸಾವನಪ್ಪುವರೆನಿಬರೋ?
ಈ ಸಮಯ ಸುತ್ತಲಿನ ಕುತ್ತುಗಳಿಗೆಣೆಯಿಲ್ಲ.
ಸುಂಗಿನೆಗೆಯುವುದೊಂದು ಕಚ್ಚಿಕೆಡಹುವದೊಂದು!
ಹಣ್ಣುಗಾರನು ಬಂದು ಕಟ್ಟಿನಮ್ಮನು ಇಳಿಸಿ
ಕತ್ತಲೆಯ ಕೋಣೆಯುಲಿ ಕೆಡಹುವನು ಕೈದಿಯಂತೆ.
ನುಲ್ಲಲಿಕೆ ಹವೆಯಿಲ್ಲ ಕಾಣಲಿಕೆ ಬೆಳಕಿಲ್ಲ!
ಹೊಚ್ಚುಹಾಸುಗಳೆಲ್ಲ ಹುಲ್ಲು ಹುಲ್ಲೇ!
ಕೊರಗಿ ಕುಂದಿರಲಾಗಿ ಬಣ್ಣ ಬಂತೆಂದುಬ್ಬಿ
ಕೊರೆದು ತಿನ್ನುವಕೆಲರು ಒತ್ತಿಹಿಂಡುವಹಲರು!
ಮಾರುವರು ತೂರುವರು ಸಿರಿವಂತರಾಗುವರು.
ಕೋಣೆಯುಲೆ ಕಣ್ತಪ್ಪಿ ಕೊಳೆವ ಪಾತಕವೆಮಗೆ!
ಆಗ ನೋಡುವುದಲ್ಲಿ ಸುಗ್ಗಿಯಾ ಸೊಬಗು!
ಕೇರಿಕೇರಿಗು ಮೂಳೆತೊಗಲುಗಳೆ ಬೆಡಗು!
ಇಂತು ಕೊನೆಗಾಲವನು ಬಗೆದು ಮಿಡುಕುತಲಿಹೆವು
ಈ ಕಟ್ಟಳೆಯ ಮೀರಿ ಬದುಕ ಬಲ್ಲೆನೆ ಹೇಳು ನನಗೆ."
ಈ ಬಗೆಯುಲೆಣಿಕೆಯುಲಿ ಮನವು ಮೈಮರೆತಿಹುದೇ?
ದೈವಸಂಪನ್ನರಿಗು ಕೊನೆಯುಂಟು ಆದರದು--
ಎಂತೆಂದು ಹೇಳಬಹುದೇ?

————

೯. ಮೋಡಿಕಾರ

ಮೋಡಿಕಾರ ಮುತ್ತಯ್ಯನ ಚೀಲದಿ
ಅಯ್ದೆಂದರೆ ಅಯ್ದೇ ಒಡವೆಗಳು
ಹುಲ್ಲು ಕಡ್ಡಿಗಳ ಕಟ್ಟೊಂದಿಹುದು
ಇನಿತರಿಂದಲೆ ಬೆರಗಿನಾಟವನು ಹೂಡಿಹನು
ವಿಧ ವಿಧದ ರೀತಿಯಲಿ ಅಯ್ದೊಡವೆಗಳ ಬೆರಸಿ
ಚಿನ್ನವನು ಮಾಡಿಹನು- ಮಣ್ಣುಗಳ ಮಾಡಿಹನು
ರತ್ನ ವಜ್ರಾದಿಗಳ ತಾಮ್ರ ತವರಿದ್ದಲಿಯು
ಲವಣಾದಿ ಉಪ್ಪುಗಳ ಕಡಲುಕಣಿ ರಚಿಸಿಹನು
ಹುಲ್ಲುಗಳ ಬಗೆಯೇಸು, ಹಣ್ಣುಗಳ ವಿಧವೇಸು?
ಮಣ್ಣುಗಳ ಬಣ್ಣಗಳನೆಣಿಸಲಹುದೇ ?
ಕಲ್ಲುಗಳ ಜಾತಿಯನು ಗುಣಿಸಲಹುದೇ ?
ಮೂಳೆನರನೆತ್ತರದ ಚೀಲಗಳ ರಚಿಸಿ
ತನ್ನ ಕಟ್ಟಿನ ಕಡ್ಡಿ ಅದರ ನೆತ್ತಿಗೆ ಚುಚ್ಚಿ
ಮಂತ್ರವನ್ನುಸುರಿದರೆ ಆ ಗೊಂಬೆಗುಸಿರು
ನುಡಿಯುವದು- ನಲಿಯುವದು- ಕುಣಿಯುವದು- ಕುಡಿಯುವದು
ಗೊಂಬೆಗಳ ಗಣಗಣದ ಹೊಲಬನರಿವುದಸಾಧ್ಯ !
ಕೋಟಿರೂಪದ ಕೀಲು ಬೆರಗುಗೊಳಿಸುವ ಬಗಟು !
ನೆತ್ತಿಯಿಂದಾ ಕಡ್ಡಿ ಕಿತ್ತಿ ಕಡೆದೆಗೆಯೊಗೆಯೆ
ನಿಂತ ನಿಂತಲ್ಲಿಯೇ ಆ ಗೊಂಬೆ ಬೀಳುವದು
ರಕ್ತಮಾಂಸಗಳೆಲ್ಲ ಅಯ್ದೊಡವೆಯಾಗುವವು
ಮಾಡುವನು ಆಡುವನು ತಾನೋಡಿ ನಲಿಯುವನು
ಆಟ ಸಾಕೆಂದೆನಿಸೆ ಮುರಿದು ಮೊಟ್ಟೆಯ ಕಟ್ಟಿ
ಮತ್ತೊಂದು ಹೂಡುವನು

ಇವನೆಂಥ ಮೋಡಿಕಾರನಯ್ಯ !
ಮಂತ್ರಗಳ ಶಕ್ತಿಯೇನು, ತಂತ್ರಗಳಯುಕ್ತಿಯೇನು ?
ಆಟ ಹೂಡಿದ ದಿವಸವೆಂದೊ ಏನೊ?
ಮುಗಿವ ಮಿತಿ ತಿಳಿವುದೇನೊ ?

೧೦ ಬಾಳ ಸುಲಿಗೆ

ಬಾಳಸುಲಿಗೆ! ಬಾಳಸುಲಿಗೆ! ಗಳಿಗೆ ಗಳಿಗೊಂದು ತುಡುಗು!
ಬಾಳಿನೆಳೆಯ ಸೆಳೆವ ಕಾಲಚಕ್ರನೆಂಬ ಸುಲಿಗೆಗಾರ!
ಎಲ್ಲೋ ಮರೆಯಲಡಗಿ ತನ್ನ ನೂರು ಕೋಟಿ ಆಳುಗಳನು
ಅಟ್ಟಿ ಯುಕ್ತಿಯಿಂದ ನಮ್ಮ ಸುಲಿದು ಬರಿದು ಗಣಿಕೆಯಂತೆ
ಎಸೆದು ಬಿಡುವನು, ಮತ್ತೆ ಕಸಕೆ ಕೊಡುವನು
ನಿದ್ದೆನಾರಿ ಸುಳಿದು ಮುದಿಸಿ ಸೆಳೆಯುತಿಹಳು ಅರ್ಧ ಬದುಕು!
ಹಸಿವೆಯೆಂಬ ಹಸುಳೆ ಅತ್ತು ಕಳೆಯುತಿಹುದು ನನ್ನ ಸೊತ್ತು!
ನನ್ನ ಬದುಕು ನಿನ್ನ ಬದುಕು ಎಂಬ ಕಲಹ ಸುಲಿಯಿತೆನಿತೊ!
ಗೆಲವು ಕೀರ್ತಿ ಹೆಣ್ಣಿನಾಸೆ ಕಣ್ಣು ಕಟ್ಟಿ ತುಡುಕಿತಿನಿತು
ಕಣ್ಣುಹಬ್ಬ ತೋರಿ ಕೆಲವು ನುಣ್ಣದನಿಯ ನುಲಿದು ಕೆಲವು
ಚಿನ್ನನೊಡವೆಯೆಂದು ಮೈಯ ಮರೆತು ನಿಂತಿರಲು ಕೆಲವು
ಹಾಗೆ ಕೆಲವು ಹೀಗೆ ಕೆಲವು ಬದುಕು ಬಳಿದು ಹೋಯಿತು
ಹಿಡಿಯ ಹೋದ ಕ್ಷಣವು ಕೂಡ ಕೈಗೆ ಸಿಗದೆ ತುಡುಕಿತು
ಮುಂದೆ ನಿಂತ ಕ್ಷಣವದೃಶ್ಯ! ಸರಿದ ಕ್ಷಣವು ಬಿಸಿಲು ಕುದುರ!
ಅಳೆಯಲಾಗದನಿತು ಬಾಳದಾರ ಉದ್ದವಿದ್ದರೇನು?
ಪವಣಿಸಲಿಕೆ ಆಗದಲ್ಲ ಒಂದು ಕಿರಿಯ ಮುತ್ತನು!

೧೧. ದೇವನಾಯುಧ

ಹಳ್ಳಿಯಲಿ ಬಾಲಸ್ನೇಹಿತನೊಮ್ಮೆ ಹೇಳಿದುದು—
“ಊರಲಿಹ ಕೇಡುಗರ ಕೇಡುಗಳು ಪೀಡೆಗಳು
ನನ್ನ ತಲೆ ಕೆಡಿಸಿದವು ಹಿಂಡುವೆಮ್ಮೆಗಳ ಕೊಳೆ,
ತೆನೆಕೊತ್ತ ಪಯರುಗಳ ಈಡಾಟ, ತಂದ ಹಣ
ಕೊಡದಿರುವ ಬಂಡುತನ, ಮೋಸಗಾರರ ಕೂಟ
ಈ ಬಗೆಯ ಹೊಲಬುಗಳ ಕಿಲುಬಿನಲಿ ಕೊಳೆಗೆಟ್ಟ
ಕೇಡುಗರು ದೇವರೊಲ್ಮೆಯಲೆನಿತೊ ಸುಖವಾಂತು
ಒಳ್ಳೆಯವರೆನಿಸುವರು ಹಿರಿತನವನೆಸಗುವರು
ಸರ್ವಾಪರಾಧಗಳ ಕ್ಷಮಿಸಿ ದೇವಗೆಲವೀಯುವನು
ಒಳ್ಳಿದರು ಹೈರಣಿಸಿ ಹಾಳಾಗಿ ಹೋಗುವರು
ಯತವಿಲ್ಲ ಗೆಲವಿಲ್ಲ ಮನ್ನಣೆಯದಿಲ್ಲ!
ದೇವರಾಯನ ರೀತಿ ನೀತಿಯೆಂತೆನ್ನುವುದು ?
ಇಂತು ಈ ಯೋಚನೆಯ ತೆರೆಗಳಲಿ ತೇಲುತ್ತ
ಭಾರತದ ಯಾವುದೋ ಪುಸ್ತಕವ ಕೈಲಾಂತು
ಓದಿಯಾದರು ಕೊರಗು ಮರೆಯುಬಹುದೆಂದೆ
ಧರ್ಮಜನ ಜೂಜಾಟ, ಕೌರವನ ಮಾತ್ಸರ್ಯ,
ದ್ರೌಪದಿಯ ಎಳೆದಾಟ, ಉರಿವನೆಯ ಭೀಕರತೆ,
ಕೆಲವು ಓಲೆಯನೋದಿ “ಎಲ್ಲಿಯೂ ಇದೆ ಹಾಡು !
ಕಲಿಯುಗದ ಕೆಡುಗಾಲ ಸತ್ಯಯುಗದಲಿ ಉಂಟು
ಲೋಕನಾಥನ ಗುಟ್ಟು, ಅರ್ಥವಾಗದ ಒಗಟು
ಕೇಡುಗರ ವಿಜಯಸುಖ ಒಳ್ಳಿದರ ಗೋಳಾಟ!
ಮಾತು ಬಲುತೊಡಕಿನದು ಗುಂಜು ಗುಂಜಾಗಿಹುದು
ಬಯಲಿಗಾದರೂ ಹೋಗಿ ಇದನು ಮರೆಯೋಣೆಂದು
ಅನತಿದೂರದ ಒಂದು ದೇಗುಲದ ಕಟ್ಟೆಯಲಿ

ಹೊದೆದ ಒಲ್ಲಿಯನೊಗೆದು ಅಲ್ಲಿಯೇ ಅಡ್ಡಾದೆ
ಜಂಪು ಸುಳಿಯುವ ಸಮಯ, ದನಗಾಹಿ ಬಾಲಕರು
ಕೈತುಂಬ ಕಲ್ಲುಗಳ ಹಿಡಕೊಂಡು ಹಿಗ್ಗಿನಲಿ
ದೇಗುಲಕೆ ಬಂದಿರಲು ನಿದ್ದೆ ಬೆದರೋಡಿತಾಗ
ಗೋಲಿಗಳ ಕಟೆಯುದಕೆ ನೊದಲಾಯಿತು
ಅಂಕಡೊಂಕದ ಗುಂಡು ಕಲ್ಲನೊಂದನು ಇಟ್ಟು
ಹಿಡಿಗಲ್ಲಿನಲಿ ಜಡಿವ ರೀತಿಯುವರದು
ಏಟುತಿನ್ನುವ ಕಲ್ಲು ಗಳಿಗೆಯೊಂದೆರಡರಲೆ-
ಗೋಲಿಯಾಯ್ತು
ಜಡಿಗಲ್ಲು ಅಚ್ಚಳಿಯದಿತ್ತು ಮುಂಚಿನಂತೆ!
ಸಿದ್ಧಗೋಲಿಯ ಕಿಸೆಗೆ ಹಾಕಿದರು ಹಿಗ್ಗಿನಲಿ
ಇನ್ನೊಂದು ಹಿಡಿಗಲ್ಲು ತಂದು ಆ ಜಡಿಗಲ್ಲ
ಕಟೆಕಟೆದು ಗೋಲಿಯನು ಮಾಡಲಿಕೆ ತೊಡಗಿದನು
ಡೊಂಕು ಪಂಕಗಳೆಲ್ಲ ಕಳಚಿದವು ಒಂದೊಂದೆ
ಅಂತು ಆ ಜಡಿಗಲ್ಲು ಗೋಲಿಯಾಗುವದೆಂದೆ
ಶಾಂತವಾಯಿತು ಮನವು ಆಗ ಆಕ್ಷಣದಲೇ
ನನ್ನ ಒಗಟಿನ ಗಂಟು ಬಿಚ್ಚಿತೆಂದಾಗಲೇ—
ಒಡವೆಯಾಗುವ ವರೆಗೆ ದುಃಖ ಸೋಲುಗಳು,
ಕೇಡುಗರ ಕೇಡಿನಲಿ ದೇವನೊಲ್ಮೆ,
ಪಾಪಿಗಳು ಮುಸಿಗಿಳಿಯೆ ಯಶವಿಜಯ ಅಡಗುವವು
ದುಃಖ ಸೋಲಿನ ಭರದಿ ಒಡವೆಯಾಗುವರು

೧೨ ಸತ್ಯವಾವುದೋ ?

ಹುಟ್ಟಿ ಬಂದ ಮನುಜರೆಲ್ಲ ಕೋಟಿ ಯುಗಗಳಿಂದಲು
ಅಗಿಯುತಿಹರು ಅಗಿಯುತಿಹರು ಜ್ಞಾನಕಣೆಯನು
ಎನಿತು ಹರಿತವಾದರೇನು- ಸೂಜಿ ನೆಲವನಗಿವುದೇ ?
ಶಕ್ತಿ ವಿಪುಲವಾದರೇನು- ಸೂಜಿಗಲ್ಲಿಗೆಷ್ಟು ಚಿನ್ನವು ?
ಇದ್ದಲಿ ಮನೆ ಒಬ್ಬ ತಂದ, ಬಜ್ಜರವನೆ ಒಬ್ಬ ತಂದ
ಕಣೆಯು ಒಂದೆ ಒಂದು ಮಾತ್ರ
ಹಸುರು ಹುಲ್ಲು ಪಚ್ಚರತ್ನವೆನಿಸುತಿರುವುದು
ಪಚ್ಚವೊಮ್ಮೆ ಹುಲ್ಲುಕಡ್ಡಿಯಾಗಿ ತೋರ್ಪುದು
ಕಣ್ಣೆಹಬ್ಬ ಮುಗಿಲದಿಬ್ಬ— ಇಲ್ಲವೆಂಬರು
ಕಂಡು ಮುಟ್ಟೆ ಇಲ್ಲ ಗಾಳಿ ಒಡವೆಯೆಂಬರು
ಹುಟ್ಟಿಬೆಳೆದು ಅಳಿವದೇಹ ಮಿಥ್ಯವಂತೆ
ಗಾಳಿಯಂತೆ ಅಲೆವ ಉಸಿರು ಸತ್ಯವಂತೆ!
ಚಿನ್ನವನ್ನೆ ಮಣ್ಣಿನಂತೆ ಬಗೆವರುಂಟು
ಮಣ್ಣಾನೆಲವ ಚಿನ್ನವೆಂದು ಬಗಿದರುಂಟು
ಜೀವವಾಂತ ಜೀವಕೋಟಿ ಜಡವದೆಂಬರು
ಜಡದ ಬೆಟ್ಟಗುಡ್ಡಗಳನು ಜೀವವೆಂಬರು
ಪತ್ನಿಸುತರು ಮಾಯದಾಟವೆನುವರುಂಟು
ಮುಕ್ತಿಕಾಂತೆ ನಿತ್ಯಪತ್ನಿಯೆಂಬರುಂಟು
ಹರೆಯಸಿರಿಗೆ ಬಿಸಿಲುಗುದುರೆಯಂತೆ ತಿಳಿವರು
ಮುಗಿಲಲಿದ್ದ ಮಿಂಚುಬಿಲ್ಲು ಸತ್ಯಸತ್ಯವೆಂಬರು
ತಮ್ಮ ಮುಟ್ಟಕೇರಿ ನೋಡಬನ್ನಿ ಸತ್ಯವೆಂಬರು
ಕಂಡು ನಂಬಿರೆಂದು ಕೂಗಿ ಕೂಗಿ ಕರೆವರು
ಎರಡು ಸತ್ಯ ಎರಡು ಮಿಥ್ಯ ಇರಲೆಬೇಕು
ನನ್ನಎಣಿಕೆ ಸತ್ಯಮಿಥ್ಯ ಮಿಶ್ರವೋ ?
ತಿಳಿಯಲಾರೆ ! ತಿಳಿಯಲಾರೆ ! ಸತ್ಯವಾವುದೋ ?

೧೩ ದಬ್ಬಾಳಿಕೆಯೇ ?

ಇದು ವಿಶ್ವಸಾಮ್ರಾಜ್ಯ! ಪ್ರಜೆಗಳೆಲ್ಲರು ನಾವು!
ಕಟ್ಟಳೆಯ ಕಟ್ಟಿನಲಿ ಕಳೆಗೆಟ್ಟು ಕೊಳೆಯುವೆವು!
ಈ ಧರ್ಮನಾಡಿನಲಿ ಕ್ಷಮೆಯ ವಾಸನೆ ಇಲ್ಲ.
ಹಿರಿದಿರಲಿ ಕಿರಿದಿರಲಿ ಯಾವ ಅಪರಾಧಕು
ಮರೆದರಿದು ಮಾಡಿದರು ತಪ್ಪಲಾರದು ಶಿಕ್ಷೆ
"ಇತ್ತವರು ತನ್ನವರು" ಎಂಬ ಬಿರುದಾತನಿಗೆ
ಮನಸು ಮೈ ಮಾತುಗಳ ನಿತ್ಯವರನೊಲಿದರಸಿ
ಅಧಿಕಾರದುಡುಗೊರೆಯನಿತ್ತು ಮನ್ನಿಸುತಿಹನು
ಕೊಡಬೇಕು- ಎಲೆಹೂವನಾದರೂ ಕೊಡಬೇಕು!
ಕೈಯಾಸೆ ತಪ್ಪಿಲ್ಲ ವಿಶ್ವಸಾಮ್ರಾಟನಿಗು
ಯೋಗ್ಯರೆಲ್ಲರಿಗೊಂದೆ ಸ್ಥಾನಮಾನಗಳಿಲ್ಲ
ತಾನೊಪ್ಪಿ ಕರುಣಿಸಲು ಮಾನವನ ಬದುಕಂತೆ!
ಕೋಟಿವರುಷಾಳಿಕೆಗೆ ತುಂಬಿ ಹೋಗಿದೆ ಇಂದು
ಕವಡೆಯೊಂದಕು ಯಾರ ಒಡೆತನವದಿಲ್ಲ
ಬಿಡುಗಡೆಯ ನೆನೆಪವನು ಕ್ರೂರದಂಡನೆಗೀಡು!
ಸ್ವಾತಂತ್ರ್ಯ ಸಾಧನೆಯು ಸಾಹಸಿಗರ ತರಿಯಲಿಕೆ
ತಾನೆ ಆಯುಧವೆತ್ತಿ ಇಳಿದು ಬಹನವತಾರಿ!
ಇಂಥ ದಬ್ಬಾಳಿಕೆಯ ಅರ್ಥವನು ಬಗೆಯುತಿರೆ
ಕೂಗಿ ಒಡನುಡಿಯಿತೆದೆ ಮರದಲಿಹಿತ ಗೂಗೆ—
"ಕುರುಬನಿರಲೇ ಬೇಕು ಕುರಿತನವಿರುವಲ್ಲಿ
ಪುರುಷಸಿಂಹಗೆ ಎಂದೂ ಬಿಡುಗಡೆಯೆ ಉಂಟು"

೧೪. ಬಂಗಾರ ಬೆಟ್ಟ

ನನ್ನ ಈ ಹೀನದೆಸೆ ಹಿಂಗಿಸುವ ಹಾದಿಯನು
ಪ್ರೀತಿಯವನೊಬ್ಬ ತಾ ಹಿತನುಡಿಯ ಉಸುರಿದನು
"ಹೊರಡು! ಇಂದೇ ಹೊರಡು!
ಕಾಡುಗಳ ನಾಡುಗಳ ಆಚೆಯಲಿ
ಹಿಮಗಿರಿಯ ಸಾಲುಗಳ ಹಿಂಬದಿಗೆ
ಮಾನಸಸರೋವರವ ಹಿಂದೂಡಿ
ಧವಲಗಿರಿ ಶಿಖರದಲಿ ಅರಸನಿಹನೊಬ್ಬ
ರನ್ನಹೊನ್ನದ ಬೆಟ್ಟ ಅವನ ಬಳಿಯಿಹುದು
ಕೇಳಿದೊಡೆ ಒಲಿದೊಪ್ಪಿ ಬೆಟ್ಟವನೆ ಒಪ್ಪಿಸುವನು"
ಇದಕೇಳಿ ನಾ ಹೊರಟೆ
ಕಾಡುಗಳ ನಾಡುಗಳ ಮುಳ್ಕಲ್ಲುಗಳ ತುಳಿದು
ಗಾಳಿಚಳಿ ಮಳೆಗಳಿಗೆ ಮೈಗೊಟ್ಟು ಹೈರಣಿಸಿ
ಹೊತ್ತುಹೊತ್ತಿಗೆ ಹೊಟ್ಟೆಕಿಚ್ಚುರಿದು ತಳಮಳಿಸಿ
ಹೊನ್ನಬೆಟ್ಟಿನ ನೆನಹು ಮುಂದು ಮುಂದೆಳೆಯುತಿರೆ
ದಾರಿಯಲಿ ಇರುಳೊಂದು ಕಳೆಯಲಿಕೆ ಛತ್ರವೊಂದಕೆ ನಡೆವೆ
ಹಾದಿಕಾರರ ಹಿಂಡು ತಂಗಿ ಒರಗಿತ್ತಲ್ಲಿ
ಛತ್ರದೊಡೆಯನು ನನ್ನ ಕಂಡು ಕೇಳಿದನಿಂತು—
"ನೀನಾರು? ಹೇಳೆನಗೆ ಬರಿಗಾಲ ಭಂಟ!"
"ಅಹುದಹುದು ನಾನೊಬ್ಬ ಬಡಜೀವಿ
ಈ ಹರಕುತನವೆನ್ನ ಬಾಳುವೆಯ ಕೈಹಿಡಿಯು!"
"ಚಳಿಮಳೆಯ ಲೆಕ್ಕಿಸದೆ ನೀನೆತ್ತ ಸಾಗಿರುವಿ!"
"ಧವಳಗಿರಿಯಾಚೆಯಲಿ ಹೊನ್ನಬೆಟ್ಟೊಂದಿಹುದು
ಅದರೊಡೆಯನನ್ನೊಲಿಸಿ ಹೊಂಬೆಟ್ಟ ತರುವೆ,
ಆ ಸಿರಿಯ ಭರದಿಂದ ಹರಕುತನ ಹಿಂಗಿಸುವೆ"

"ದೇವರಾಯನ ಸಿರಿಯ ನೀನೆಂತು ಕಟ್ಟಿತರುವೆ?"
"ಹೊನ್ನನೀಯುವ ಕೈಯು ಕಟ್ಟಲಿಕೆ ಅರಿವೆ ಕೊಡವೆ?"
"ಛೀ! ಮರುಳೆ!! ಇಂಥ ತಿರುಕರಿಗಳಿಕೆ—
ಬೊಕ್ಕಸದೊಡೆಯ
ಘೋರ ಗಂಹರವ ಸೇರಿಹನು
ಅರಿವೆ ಕಟ್ಟಲು ಬೇಡು! ಹೂರಲೊಂದು ಆಳುಬೇಡು!!
ಇಲ್ಲಿವರೆಗೈತಂದು ದಣಿದೆಯೇಕೆ?
ನಿನ್ನ ನೆತ್ತರಕೆ ಬಿಸಿಯಿಲ್ಲ! ಒತ್ತರಕೆ ಕಸುವಿಲ್ಲ!
ನೀ ದುಡಿದು ಪಡೆದೊಡವೆ ಏನುಂಟು ತೋರಿಸದನು?
ಇಲ್ಲದಿರೆ ಮುಂದಡಿಯನಿಡಲಾರೆ!
ತಂದ ಹೊನ್ನವನೆಂತು ಕಾಯುವವನು?
ಅದು ನಿನಗೆ ದಕ್ಕುವುದೆ?
ಕಳ್ಳನೆಂದೆಣಿಸಿ ಸೆರೆಮನೆಯಲೊಗೆಯುವರು!
ಬೇಡಿ ತಂದುದು ರನ್ನಹೊನ್ನದ ಹೊರೆಯಿದ್ದರೂ—
ನಿನಗಲ್ಲವದು!
ದುಡಿದು ಪಡೆ, ತೋಳಬಲವಿರುವಲ್ಲಿ ಬೊಕ್ಕಸದ ಕೀಲಿ!
ಹೋಗುವುದು ನೀನೇಕೆ ಧವಳಗಿರಿಗೆ?
ಹರಿದು ಬರುವುದು ತಾನೆ ಹೊನ್ನಹೊಳೆಯಾಗಿ
ಕಟ್ಟು ಕೊತ್ತಳವೊಂದು! ಕಾಪಾಳುಗಳ ಅಣಿಗೊಳಿಸು!"
ಎಂಬ ಗರ್ಜನೆಗದುರಿ ನೀರಾಯ್ತು ಸನ್ನೆದೆಯು!
ಹೀನ ಬಲವಿರುವಲ್ಲಿ ಸಿಗುವುದೇನೆಂದು ಬಗೆದೆ
ದಣಿದು ಬಂದುದಕೊಂದು ಹೊಲಬನರಿತೆಂದು ಹೊರಟೆ

೧೫. ವೃದ್ಧ ನರಿ

ರಾತ್ರಿಯೊಂದು ಜಾವದಲ್ಲಿ ವೃದ್ಧ ನರಿಯು ಹಲುಬಿತು
ಬೆಳದಿಂಗಳ ಕಡಲಿನಲ್ಲಿ ಅಪಸ್ವರವನು ಹರಹಿತು
"ಅಯ್ಯೋ! ಮೋಸಹೋದೆನಲ್ಲ! ಎಂಥ ಸಮಯ ಪ್ರಾಪ್ತವಾಯಿತು!
ಎಲ್ಲಿ ಹೋದರಲ್ಲಿ ನನ್ನ ಕೇಡು ಬಗೆವ ಯೋಚನೆ
ಹಿರಿಯ ಮರವು ಸುತ್ತು ಕೊಂಬೆ ಕೈಗಳನ್ನು ಚಾಚಿದೆ
ನನ್ನ ಹೊಟ್ಟೆಪಾಡು ಸಾಗದಂತೆ ಬೆಳಕು ತೂರಿದೆ
ಕಾಲಕೆರವು ಜೋಕೆಯೆಂದು ಇರುಳಹಕ್ಕಿ ಕೂಗಿತು
ಊರ ಅಗಸೆ ಹೊಂಚು ಹಾಕಿ ಮೇಲೆ ಬೀಳ ನಿಂತಿದೆ
ಎಂದಿನಿಂದ ಮುಗಿಲು ಗುಡುಗಿ ಸಿಡಿಲು ಚೆಲ್ಲಲೆಳಸಿದೆ
ಇರಿಯಲೆಂದು ಚಾವಡಿಯಲಿ ಕತ್ತಿ ತೂಗಹಾಕಿದೆ
ಅಳವಿನೊಳಗೆ ಸಿಗುವ ಸಮಯ ಕಾದು ಹೊಳೆಯು ಸಾಗಿದೆ
ಮನೆಗು ಮನೆಗು ಬೆಂಕಿಯೊಲೆಯು ನನಗೆ ಕೊಳ್ಳಿ ಹಚ್ಚಲು
ಗಂಡಹೆಂಡಿರಲ್ಲಿ ಮತ್ತೆ ಗೆಳೆಯ ಗೆಳೆಯರಲ್ಲಿ ಮಾತು
ನನ್ನ ಹಿಡಿವ ಎಣಿಕೆಯನೇ ಬಗೆಯುತಿರುವವು
ಕೂಸಿನಳುವು ಹಟವು ನನ್ನ ತಿನ್ನಬೇಡುವಂತಿದೆ
ಏನು ಮಾಡಿ ಬದುಕಿಕೊಳಲಿ- ಯಾರನಿನ್ನು ನಂಬಲಿ!
ಸೃಷ್ಟಿಯೆಲ್ಲ ನನ್ನ ಕೇಡು ಬಗೆದರೆಂತು ಬದುಕಲಿ?
ಕಾಡು-ನಾಡು ಯತ್ನದಲಿವೆ ಹಗಲು ರಾತ್ರಿಯೆನ್ನದೆ
ಲೋಕವಳಿದು ಹೋದರುಂಟು ನನಗೆ ಶಾಂತಿ ಸೌಖ್ಯವು?
ಲೋಕದೊಡೆಯ! ಕೇಳು ನಿನಗೆ ಕರುಣೆ-
ಇನಿತು ಬಾರದೇ?"

ಕೂಗು ಕೇಳಿ ಬಾವಿಗಪ್ಪೆ ದಂಡೆಗಂಟಿ ನಿಂತಿತು
ಒಂದು ಮಾತು ವೃದ್ಧನರಿಗೆ ಸಾರಿ ಸಾರಿ ಹೇಳಿತು—
"ನಿನ್ನ ಕೇಡು ಬಗೆವುದೊಂದೆ ಲೋಕಕಿರುವ ಕಾರ್ಯವೇ!
ಕೇಡು ಬಗೆಯ ನಿಂತ ಲೋಕಕೀಡೆ ನೀನು!
ಹುಚ್ಚು ನರಿಯೆ! ಬಾಳಿ ಬದುಕು! ಬದುಕಿ ಬಾಳು!
ತಾಳು! ಮಾತು ಸಾಕು! ಇರುಳು ನಿದ್ದೆ ಹಾಳು!!"

೧೬ ಮಹಾಕಾವ್ಯ

ಕವಿಕುಲದ ಆದಿಕವಿ ರಚಿಸಿಹನು ವಿಶ್ವಕಾವ್ಯ
ಒಂದೊಂದು ಅಣುವಿನಲಿ ನವರಸದ ನಿಧಿಯುಂಟು
ಕಾವ್ಯ ಕಡಲಿನ ಒಂದು ಹನಿಯು ಸವಿದವರಿಲ್ಲ
ಕಾಡುಗಳು ನಾಡುಗಳು ಹಕ್ಕಿಗಳು ಹುಲ್ಲೆಗಳು
ಮಾನವರು ದಾನವರು ಮುಗಿಲಜಲ ಚಿಕ್ಕೆಗಳು
ಮರಬಳ್ಳಿ ಹೂ ಕಾಯಿ ಮುಳ್ಕಲ್ಲು ಹುಲ್ಲುಗಳು
ಸರ್ವವೂ ಆ ಮಹಾಕಾವ್ಯದಲಿ ವಸ್ತುಗಳು
ನೂರು ಓದಿದರೇನು, ಕೋಟಿ ಕೇಳಿದರೇನು ?
ವಿಶ್ವಕಾವ್ಯದ ಒಂದು ಓಲೆಯಲಿ ಒಂದೆರಡು
ಸಾಲುಗಳನೋದುವರೆ— ಜೀವನಕೆ ಸಂಜೀವ
ತತ್ವಗಳ ಬೊಕ್ಕಸವು, ನವರಸದ ಪೀಯೂಷ
ಹಳ್ಳಿಯಲಿ ಹೊಳಲಿನಲಿ ಹೆಣ್ಣುಗಂಡೆನ್ನದಲೆ
ಕವಿಯಾಗಿ ಹಾಡಿದರು, ಕಾವ್ಯಗಳ ರಚಿಸಿದರು
ಊಳುತಿರೆ ಹೊಲಗಳನು, ಬಿತ್ತುತಿರೆ ಬೀಜಗಳ .
ಸುಗ್ಗಿಯಲಿ, ಮಾಗಿಯಲಿ, ಹಂತಿಯಲಿ, ಹೋಳಿಯಲಿ
ಕುಳಿತಲ್ಲಿ ನಿಂತಲ್ಲಿ ಹಾಡಿದನು ಮಾನವನು
ಬೀಸುಕುಟ್ಟುವ ಶ್ರಮವ ಹಾಡಿ ಮರೆದಳು ತಾಯಿ
ಜೋಗುಳವ ಪಾಡಿದರು, ಶೋಭನವ ಹಾಡಿದರು
ಹೆಜ್ಜೆ ಹೆಜ್ಜೆಗು ಹಾಡು ಜಾವಜಾವಕು ರಾಗ
ಯುಗ ಯುಗಗಳಳಿದರೂ ಈ ಬಗೆಯ ಹಾಡು ಹೊಸದು
ಸೊಲ್ಲು ಸೊಲ್ಲಿಗು ಸೊಬಗು, ಚಿತ್ತರದ ಸಿಂಗಾರ
ಕಾವ್ಯಝುರಿಯಲಿ, ಮಿಂದ ಹಕ್ಕಿಗಳು ನ್ಯೆಮರೆತು
ಪಂಚಮದ ಕೊಳಲಿನಲಿ, ರಾಗದನುರಾಗದಲಿ
ವಾಲ್ಮೀಕಿ ಮುನಿಯೆದುರು ರಾಮಲಕ್ಷ್ಮಣರಂದು

ಕಾವ್ಯ ರಾಮಾಯಣವ ಹಾಡಿತಣಿಸಿದ ತೆರದಿ
ನಿತ್ಯಕವಿಯನು ಕರೆದು ದಿನದಿನವು ಹಾಡುತಿಹವು
ಹುಟ್ಟು ಕಾವ್ಯದ ಗರ್ಭ, ಬೆಳೆಗೆ ಕಾವ್ಯದ ಉಸಿರು
ಜೀವನದ ಕಲಹದಲಿ- ವಿಜಯದಲಿ ಕಾವ್ಯಕಹಳೆ
ಮೃತ್ಯು ಮುಖದಲಿ ಉಂಟು ಕಾವ್ಯ ಗಾಂಭೀರ್ಯ
ಕಣ್ತೆರೆಯೆ ಚಿತ್ರಕಾವ್ಯ, ಕಣ್ಮುಚ್ಚೆ ದಿವ್ಯಕಾವ್ಯ
ಮೂಸಿದರೆ ಕಾವ್ಯಗಂಧ, ಕೇಳಿದರೆ ಕಾವ್ಯನಾದ
ಮುಟ್ಟಿದರೆ ಅಮೃತಸ್ಪರ್ಶ- ಎಲ್ಲೆಲ್ಲು ಕಾವ್ಯ ಕಾವ್ಯ !
ಬಡವ ಬಲ್ಲಿದನೆನದೆ, ಹುಂಬ ಕಲ್ತವನೆನದೆ
ಸರುವರಿಗು ತೆರೆದಿಟ್ಟ ಕಾವ್ಯನಿದು !
ತಿಳಿಯದೆನ್ನುವ ಛಲವು ಕುರುಡ ಹಿಡಿತ
ತಿಳಿತಿಳಿವ ಸರಳತೆಯು ತುಂಬ ಉಂಟು
ಅದು ಬಿಡಲಿ- ದನಿಯು ಸವಿ, ಸೊಲ್ಲಿನಲಿ ಮಾಧುರ್ಯ,
ಸವಿಗಂಡ ರಸಿಕನಿಗೆ ಮಾನವನ ಕವನಗಳು
ಕವಿಕುವರರಾಡಿರುವ ಹುಡಿಯಾಟ!
ಕಾವ್ಯಮಾಮರದ ಕೆಂಚಿಗುರಿನಂಚು !!

೧೭. ಮದ್ದಿನಾಗಾರ

ಭೂಮಿ ಸ್ಥಿರವಾಗಿಲ್ಲ, ಅದಕೆ ಆಸರವಿಲ್ಲ
ಕೋಟಿ ಜ್ವಾಲಾಮುಖಿಯ ಬತ್ತಿಗಳು ಬಸುರಿನಲಿ
ಭೂಕಂಪದಂಥ ಮಲರೋಗ ಅವಳಿಗೆಯುಂಟು
ಉಗ್ರಕೋಪದ ಕಡಲಿನುಕ್ಕು ದಿನಕೆರಡು ಸಲ
ಗರ್ಜಿಸುವ ಗುಡುಗುಗಳು ತಲೆಯ ಮೇಲಾಡುತಿವೆ
ಇಂತು ತಾಯಿಯ ತೊಡೆಯ ಕುನ್ನಿ ನಾನು
ಹಸಿವೆಯಾರದ ಹುಲಿಯು ಹೊಟ್ಟೆಯಲಿ ಹಲಬುತಿದೆ
ಬಿಡಿಸಲಾಗದ ತೊಡಕು ತಲೆಗವಿಯ ಕತ್ತಲಲಿ
ಎದೆಯ ಗುಡಿಯಲಿ ಕಲ್ಲು ಗಂಟೆಹುದು ದೇವರಾಗಿ
ತಾಳ್ಕೆಯಿಲ್ಲದ ಬಾಳದಾರಕೆನ್ನಯ ಕಟ್ಟು
ಸಿಡಿಗುಂಡು ಜಡಿಮದ್ದು ಬಿರುಸುಗಳು ಹಿರಿಬಳಗ
ಹಾವು ಹುಲಿ ಕರಡಿಗಳ ದವಡೆಯಲಿ ಸುಖನಿದ್ದೆ
ರೋಗರುಜೆ ಜೀವನದ ಕಲಹಗಳ ಕಣ್ಣಾರಿಕೆ
ಪ್ರಾಣ ಮನ ಬುದ್ಧಿಗಳ ಮಂಗಗಳ ಸೆಣೆಸಾಟ
ಇಂಥ ಚಕ್ರವ್ಯೂಹ ಕೋಟೆಯಲಿ ಬಾಳಹಸುಳೆ!
ತಿನ್ನಲಿಕೆ ಹಣ್ಣುಗಳು, ತಣಿಯೆ ತಿಂಗಳವೆಳಕು
ಮುಗಿಲಮಂಟಪದ ಸಿಂಗಾರವೆಮಗುಂಟು,
ಕುದುರೆಯಾಟದ ಪ್ರಾಣಿಗಿರುವ ತೆರದಿ
ಅರಗು-ಗಂಧಕ-ರಾಳ-ಮದ್ದಿನಾಗಾರ ಈ ಲೋಕ
ಉರಿತಗುಲದಂತಿರಲು ಹೇಳುವದು ಕೌರವನ ಪಂಥ!
ಸಾಧ್ಯವೆಲ್ಲರಿಗುಂಟೆ? ಪಾರಾಗಿ ಹೋಗುವುದು
ಪಂಚ ಪಾಂಡವರ ಹೊರತು

---

೧೮. ಒಂದು ಮನೆಯಲ್ಲಿ

ಒಂದುಮನೆ! ಒಂದುಮನೆ! ನಾವಿರುವ ಲೋಕ
ಆ ಒಂದು ಮನೆತನಕ್ಕೆ ಲೋಕಜನ ಬಳಗ
ಒಬ್ಬ ಸೂರ್ಯನ ಬೆಳಕೆ ಆ ಮನೆಯ ದೀಪ
ಮುಗಿಲೊಂದೆ! ಮಳೆಯೊಂದೆ!! ಉಸಿರೊಂದೆ! ಹಸಿಯೊಂದೆ!!
ಆದರೇನು?
ಒಂದೆ ಮನೆತನಕಿಹುದು ನೂರೊಂದು ವರ್ಣಗಳು!
ಒಂದೆ ಮನೆತನದಲ್ಲಿ ಕೋಟಿ ಉದ್ಯೋಗಗಳು!
ಒಂದರಲೆ ಆಳುಗಳು-ಅರಸುಗಳು!
ಒಬ್ಬನುಣ್ಣಲು ಪಂಚಪಕ್ವಾನ್ನದಡಿಗೆ
ಇನ್ನೊಬ್ಬಗಿಹುದು ಬರಿ ಹಸಿದೊಡಲ ಸುಡಿಗೆ!
ಒಡಲು ಹಸಿಯದೆ ಒಳಗೆ ಕೊರಗುವರು ಕೆಲರು
ಹಸಿದ ಒಡಲಿನ ಜಳಕೆ ಕರಗುವರು ಹಲರು!
ಇಷ್ಟೆಲ್ಲ ಒಂದೆ ಮನೆತನದ ವಾರ್ತೆ
ಬಿಸಿಲು ಚಳಿಯಲಿ ಒಂದು ಬರಿಮೈಯು ಬಳಲುವದು
ಹೊರಲಿಕಾಗದೆ ಹೊತ್ತು ಸಿರಿಮೈಯು ದಣಿಯುವದು
ಉಗುರಿನಳುಕಿಗೆ ನೂರು ಆರೈಕೆ ಒಬ್ಬನಿಗೆ
ಸಾವಿನುಡಿಯಲಿ ಬಿದ್ದರೂ ಏನುಂಟು ಅನ್ಯನಿಗೆ?
ಥಳಕು ಬೆಳಕಿನ ರಮ್ಯಮಂದಿರವದೊಬ್ಬನಿಗೆ
ರೊಜ್ಜು ರಾಡಿಯ ಹರಕು ಗುಡಿಸಲವದೊಬ್ಬನಿಗೆ
ಆ ಒಂದೆ ಮನೆತನದ ನೀತಿಯೆಂತೊ?
ಕದನಗಳು ಕಾಳಗಗಳು! ಕತ್ತಿಯಾವೇಶಗಳು!
ಮೋಸಗಳು ಪೋಷಗಳು! ವಿಷವಾಯು ಮದ್ದುಗಳು!
ಆ ಒಂದೆ ಮನೆತನದ ಒಂದು ದಿನದಲ್ಲಿ—
ಕೆಲವರಿಗೆ ಹಬ್ಬ! ಹಲವರಿಗೆ ದುಃಖ!

ನೂರು ಹುಟ್ಟಿಹರಿಂದು! ನೂರು ಜನ ಸತ್ತಿಹರು!
ಮದಿವೆ ಹಂದರವಿಲ್ಲಿ! ಮರಣಯಾತ್ರೆಯದಲ್ಲಿ!
ಶೋಭನದ ಹಾಡುಗಳ ರಾಗಗಳು ಒಂದೆಡೆಗೆ
ಪ್ರಣಯದುಬ್ಬೆಗದ ನಿಡುಬೊಬ್ಬೆ ಇನ್ನೊಂದೆಡೆಗೆ!
ಬರಗಾಲದವಡೆಯಲಿ ಬಾಳುವವರುಂಟು
ಸುಖದೂಟವುಂಡುಂಡು ನರಳುವವರುಂಟು!
ಹಂಬಲಿಸಿ ಹಲಬುವರು ಮಕ್ಕಳಿಲ್ಲೆಂದು
ಹೈರಣಿಸಿ ಗೋಳುವರು ಸಾಕುಸಾಕೆಂದು
ಬೆಳಕು ಬೆಳಕಿನ ಬುದ್ಧಿ ಮಿನುಗುತಿದೆ ಒಂದೆಡೆಗೆ.
ಮಂದ ಬುದ್ಧಿಯ ನೊಬ್ಬು ಹರವಿಹುದು ಆ ಕಡೆಗೆ!
ಇದಕೆ ಕಾರಣವರಸಿ ತಿಳಿಯಲಿಕೆ ಸುಲಭವೇ ?
ಮನೆಯೊಡೆಯನನ್ಯಾಯವೆನ್ನಬಹುದೇನು ?
ಕೃತಿಯಂತೆ ಫಲದೂಟವೆನಲಾಗದೇನು ?

೧೯. ವಿಶ್ವವೃಕ್ಷ

ಏನು ವೃಕ್ಷ! ಎಂಥ ವೃಕ್ಷ! ವಿಶ್ವವೃಕ್ಷವು?
ಏನುಕೊಂಬೆ! ಏಸು ರೆಂಬೆ! ಒಂದು ವೃಕ್ಷವು?
ಬೆಟ್ಟಹಳ್ಳ ಹುಲ್ಲು ಕಲ್ಲು ಪಕ್ಷಿಯೆಲ್ಲ ಎಲೆಗಳು!
ಮನುಜ ವರ್ಗವೆಲ್ಲ ವೃಕ್ಷರಾಜನಂದ ಹೂಗಳು!
ಹೂವಿಗೊಂದು ಬಣ್ಣ - ಬಣ್ಣಕೊಂದು ಹೂವು!
ಒಂದೆ ವೃಕ್ಷಕಿರುವ ಹೂವು ಇನಿಸು ಬಗೆಯಲೆಂತೊ ತಿಳಿಯೆ!
ಬೆಳ್ಳಗಿನ ಹೂವುಗಳು! ಬಿಳಿಗೆಂಪು ಹೂವುಗಳು!
ಹೊನ್ನ ಬಣ್ಣದ ಹೂವು! ನೀಲಿಮದ ಹೂವುಗಳು!
ಬಗೆಬಗೆಯ ಬಣ್ಣಗಳು ಹೂವಿಗುಂಟು
ಬಗೆಗೊಳಿಪ ವಾಸನೆಯು ಅವಕೆಲ್ಲಕುಂಟು
ಕೆಲವು ಮಘುಮಘಿಸುವವು
ಹಲವು ಕಂಪೆರಚುವವು
ಉಗ್ರವಾಸನೆ ಕೆಲಕೆ! ಹೀನವಾಸನೆ ಕೆಲಕೆ!
ಬಣ್ಣಗಳ ವೈವಿಧ್ಯ! ವಾಸನೆಯು ಬಹುರೀತಿ!
ಯಾವ ಜಾತಿಯ ವೃಕ್ಷವಿದನೆಂತು ತಿಳಿವೆ?
ಮೊಗ್ಗೆಯಲಿ ಮುಗಿಯುವವು! ಅರಳಿನಲಿ ಉರುಳುವವು!
ದೇವನಡಿಗೇರುವವು! ಕೆಲವು ಮುಡಿಗಾಗುವವು!
ಹುಳುಗಳಿಗೆ ಆಹಾರ! ರೋಗಿಗಳಿಗೌಷಧವು!
ರಸಿಕರಿಗೆ ಸವಿಯೂಟ! ಬಡವರಿಗೆ ಜೀವನವು!
ಒಂದೆ ಗೊಬ್ಬರದನ್ನ ಒಂದೆ ಹೊಟ್ಟೆಯಲರಗಿ
ಒಂದೆ ರಸವನು ಹೊತ್ತು ಒಂದೆ ನರದಲಿ ಬೆಳಗಿ
ಒಂದೆ ಬಣ್ಣದ ಎಲೆಯ ಮೊತ್ತಿನಲಿ ಮುತ್ತಾಗಿ
ಹೂವಿನಲಿ ಬದಲಾಯ್ತು ವಾಸನೆಯ ವಿಧವು!
ಹೂವಿನಲಿ ಮಿಗಿಲಾಯ್ತು ಬಣ್ಣಗಳ ಬಗೆಯು!
ಏನಿಸು ಗುಣಧರ್ಮಗಳೊ ಒಂದೆ ವೃಕ್ಷದ ಹೂವಿಗೆ?

೨೮. ವೇಷಗಾರಿಕೆ

ಏನಿಸು ಕಾಲ ಕುಣಿಯುತಿರುವೆ ಭಾಗವತರ ಆಟದಲ್ಲಿ
ಇನಿಸು ಗುರುತು ತೋರದಲ್ಲ- ಯಾರು ವೇಷಗಾರರು ?
ವೇಷದವರು ನಮ್ಮ ಜನರು
ಒಂದು ಮನೆಯ ಬಳಗದವರು
ವೇಷತೊಟ್ಟ ದಿವಸ ಬಂದೆ!
ಬಣ್ಣವೆಲ್ಲ ಒಬ್ಬನಿಂದೆ !
ಯಾರು ಎಲ್ಲಿ ಕುಣಿಯುತಿಹರೊ ಪರಿಯನರಿಯೆನು
ಮುಂದೆ ಯಾವ ವೇಷ- ಭಾಷೆ ಒಂದು ತಿಳಿಯೆನು
ಮನವನೆಳೆವ ಹೆಣ್ಣಿನುಡಿಗೆ
ಗಂಡುಗಾಡಿ ಬಂಟನಡಿಗೆ !
ಕೂಸಿನೆಸೆವ ಮೊಗದ ಮುದ್ದು
ಗೂನುಬೆನ್ನ- ಮುಪ್ಪು ಬಂದು !
ವೇಷದಂತೆ ಭಾಷೆಯಾಗಿ
ಭಾಷೆಯಂತೆ ದನಿಯುಮಾಗಿ
ಸಮಯಕೊಂದು ಸನ್ನಿವೇಶ ಬರುತಲಿರುವದು
ಸನ್ನಿವೇಶದಂತೆ ಕ್ರೋಧ- ಪ್ರೀತಿ ಹುಟ್ಟುತಿರುವದು
ಬಿನದದಲ್ಲಿ ನಗೆಯ ಸೆಲೆಯು
ಕ್ರೋಧದಲ್ಲಿ ಭಯದ ಬಲೆಯು
ಪ್ರೀತಿಯಲ್ಲಿ ಮೋಹ ಮೊಳೆತು
ಹರುಷದಲ್ಲಿ ಅರಿವು ಕೊಳೆತು
ನನ್ನತನವು ಅಳಿದು ಈಗ ಪಾತ್ರದೊಡನೆ ಬೆರೆತೆನಲ್ಲ !
ಅನ್ಯರನ್ನು ಅರಿವ ಮೊದಲು ನನ್ನ ನಾನು ಮರೆತೆನಲ್ಲ !!
ಏನು ವೇಷಗಾರಿಕೆ ?
ಎಂಥ ಮೋಸಗಾರಿಕೆ !
ನನ್ನ ನಾನು ಅರಿತರುಂಟು
ಅನ್ಯರರಿವ ಪರಿಯುಗುಟ್ಟು !

೨೧. ಪ್ರಮಾದ

ಇರುವುದೊಂದು-- ತಿಳಿವುದೊಂದು !
ಕುಂಟುಬುದ್ಧಿ- ಕುರುಡು ಮನಸು !
ಕಂಡದಾರಿ ತುಳಿವಶಕ್ತಿ ಬುದ್ಧಿಗಿಲ್ಲವೋ-
ಕೋಟಿಕಾಲು ಮನಸಿಗುಂಟು ನೆಲೆಯು ಕಾಣದೋ?
"ಮುಗಿಲು ಎಂಬುದೇನು ಅಲ್ಲ- ಬಟ್ಟಬಯಲು"ಎನುವ ಸೃಷ್ಟಿ
"ಬಣ್ಣ ನೀಲಿ ಉಂಟೆ ಉಂಟು ವಸ್ತುಮುಗಿಲು"ಎನುವ ದೃಷ್ಟಿ
"ಬೆಳದಿಂಗಳು ಶಶಿಯದಲ್ಲ- ರವಿಯ ದಾನ"ಎನುವ ಸೃಷ್ಟಿ
"ಚಂದ್ರನುದಿಸೆ ಬೆಳದಿಂಗಳು-- ಅವನ ಬೆಳಕೆ"ಎನುವ ದೃಷ್ಟಿ
"ಭೂಮಿ ರವಿಯ ಸುತ್ತು ತಿರುಗುತಿಹುದು"ಎನುವುದೊಂದು ಸೃಷ್ಟಿ
"ಸೂರ್ಯನುದಿಸಿ ಏರಿ ಮುಳುಗುತಿಹನು"ಎನುವುದೊಂದು ದೃಷ್ಟಿ
"ಮೋಡ ಒಡನೆಯಲ್ಲ- ಕಣ್ಣಮುಬ್ಬು"ವೆಂಬ ಸೃಷ್ಟಿಯೊಂದು
"ಗುಡುಗು ಮಿಂಚನುಗುವುದೊಂದು ಒಡವೆ"ಯೆಂಬ ದೃಷ್ಟಿಯೊಂದು
"ಭೂಮಿಯಿಂದ ಚಂದ್ರ ಸಿಡಿದು ಹೋದ"ನೆಂಬ ನಿಯಮ ಸೃಷ್ಟಿ
"ಎಳೆವ ಶಕ್ತಿ ಪೃಥ್ವಿಗುಂಟು ಅದನು ಬಿಟ್ಟಿತೆಂತು"ಎನುವ ದೃಷ್ಟಿ
"ಮರವ ಕಟ್ಟಬಲ್ಲ ಶಕ್ತಿ ಬೀಜಕುಂಟು"ಎನುವ ಸೃಷ್ಟಿ
"ಅರೆದು ನೋಡಲೇನು ಒಳಗೆ ಹಿಟ್ಟೆ ಹಿಟ್ಟು"ಎನುವ ದೃಷ್ಟಿ
"ಸತ್ಯಕೆಂದು ಸಾವೆ ಇಲ್ಲ- ನಿತ್ಯಸತ್ಯ"ಎನುವ ಸೃಷ್ಟಿ
"ಸತ್ಯದಿಂದ ಬದುಕಿದವರು ಕೋಟಿಗೊಬ್ಬ"ಎನುವ ದೃಷ್ಟಿ

ಇಂತು ಸೃಷ್ಟಿ- ದೃಷ್ಟಿಗಳಲಿ ವಾದನಡೆದಿದೆ
ಮೇಳವಿಲ್ಲದಿರಲು ಅದು ಪ್ರಮಾದವೆನಿಸಿದೆ

---

೨೨. ಮಾಂಗಲ್ಯ ಮುತ್ತು

ಪಡುವಣದ ಬಿರುಗಾಳಿ ಭೋರೆಂದು ಬೀಸುತಿದೆ
ಬಿಳಿಮೋಡ ಬಗೆಬಗೆಯ ರೂಪಗಳ ಧರಿಸುತಿದೆ
ಎಳೆದೊಯ್ಯುತಿದೆ ಗಾಳಿ ಮೋಡಗಳ ಸಾಲುಗಳ
ರೂಪದಲಿ ಸ್ಥಿರವಿಲ್ಲ–ಕ್ಷಣಕ್ಷಣಕೆ ಬಹುರೂಪ!
ಒಂದೆಡೆಗೆ ದೃಢವಿಲ್ಲ–ತೂರುತಿವೆ, ಹಾರುತಿವೆ!
ಗಾಳಿಕೈಯಲಿ ಸಿಕ್ಕ ತರಗೆಲೆಯ ತೆರದಿ.
ಗುರಿಯಿಲ್ಲ ನಿರಿಯಿಲ್ಲ ಓಡುತಿವೆ ಎತ್ತಲೋ
ಸಾಮಾನ್ಯ ಜೀವಿಗಳ ಬಾಳ–ಕವಿನೆಳಲಂತೆ!
"ನಿಮ್ಮ ಪಯಣವದೆಲ್ಲಿ ಹೇಳಿ ನಾವೂ ಬರುವ"
ಎಂದೊರಲಿ ಕೇಳುತಿಹ ಕೂಸುಗಳ ಪ್ರಶ್ನೆಗೂ
ಪಡಿನುಡಿಯನುಸುರಲಿಕೆ ಬಾಯಿಲ್ಲ-ಬಲವಿಲ್ಲ!
ಕಣ್ಮುಚ್ಚಿ ಸಾಗುತಿವೆ!
ಬರಗಾಲದುರಿಯಲ್ಲಿ ಕಂಗೆಟ್ಟ ಜನರೆಲ್ಲ
ಮೊಗವೆತ್ತಿ ಕೈಮುಗಿದು ಕರುಣಿಸೆನ್ನುವರದೋ!
ಗಾಳಿಸೆಳವಿಗೆ ಸಿಕ್ಕ ಮುಗಿಲೋಳಿ! ಅದಕೊಂದು ಕೇಳಿಸದು!
ತನ್ನ ತಾನುಳಿಯಲಿಕೆ ಬಲವಿಲ್ಲ–ಬಯಸಿಲ್ಲ!
ಪಯಣವತಿ ಸುಲಭ! ಬಲು ಸರಲ! ಶ್ರಮವಿಲ್ಲ!!
ಮುಂದಡಿಯ ನಿಟ್ಟಂತೆ ಹೊರೆಯೇರುತಿರಬಹುದು
ಆದರದು ಉನ್ನತಿಯ ದಾರಿಯೇ? ಸರ್ವನಾಶ!
ಅದೊ ನೋಡು! ಮೂಡಣದ ಬಸಿರು!
ಹೊಸ ಮುಗಿಲುಗಳ ಜನನಿ! ಹಡೆಯುತಿಹಳಲ್ಲಿ!
ಗಾತ್ರದಲಿ ಮಹದ್ವಾನೆ! ಗೋತ್ರದಲಿ ಮರಿಸಿಂಹ!
ಗಾಳಿಯನು ನಡುಗಿಸುವ ಕರಿಯಬಣ್ಣ!
ಸಂಗ್ರಾಮಕಣಿಗೊಳುವ ಗುಡುಗು ಸಿಡಿಲು!

ಕತ್ತಲೆಯ ಸೀಳಲಿಕೆ ಮಿಂಚಿನಂತು!
ಬಂತು ಬಂತದೊ ಸೈನ್ಯ ಧೀರಗಾಂಭೀರ್ಯದಲಿ
ಏರುತೇದುತ ಬಂತು! ಮಿಂಚಿಮಿರಿಯುತ ಬಂತು!
ಗಾಳಿಯನು ಎದುರಿಸಿತು! ದಿಕ್ಕುಗಳ ಬದಲಿಸಿತು!
ಭೂಮಿ ತಾಯಿಯ ಹಸಿವೆ ಮೊದಲು ಹಿಂಗಿಸಿತು
ರೂಪದಲಿ ಸ್ಥಿರವಾಗಿ ಗುರಿಯೆಡೆಗೆ ಸಾಗಿ!
ಕಿರಿಯದಾದರು ಅದಕೆ ಬಲವೆನಿತು! ಬೆಳಕೆನಿತು!
ಮುಂದುವರಿಯುವ ಧೈರ್ಯ–ಸಹನೆಯೆನಿತೊ?
ಅಹುದಹುದು!
ಬಾಳನೆದುರಿಸುವಲ್ಲಿ ಬೆಳಕು ಬಲಗಳ ಹುಟ್ಟು
ಜೀವಸತಿಗೊಂದು ಮಾಂಗಲ್ಯ ಮುತ್ತು!

೨೩ ದುಡಿಮೆ

ದೈವ ದೈವದಾಟವೆಂದು ಜೀವ ನಿದ್ದೆಗೆಟ್ಟಿದೆ
ದೈವವಿತ್ತ ಆಯುಧಗಳು ಜಂಗುಗಟ್ಟಿವೆ!
ಮಲಗಲೆನಿತು ನಿದ್ದೆಯಿಲ್ಲ—ದೈವದಲ್ಲಿ ಬರೆದೆ ಇಲ್ಲ!
ಕನಸು ಬಿತ್ತು– ದೈವವದನೆ ತಂದುಕೊಟ್ಟಿತು–

“ಸಂತೆಯೊಂದರಲ್ಲಿ ತಂದೆ
ಮಗನು ಬೆನ್ನ ಹಿಂದೆ ಹಿಂದೆ!
ಹಣ್ಣಿನೋಳಿಯಲ್ಲಿ ಹುಡುಗ
ಹಣ್ಣು ಬೇಡಿ ಹಟವ ತೆಗೆದ
ಮಗನು ಕೇಳದಿರಲು ತಂದೆ
ಕೊಂಡುಕೊಟ್ಟನು ಮತ್ತೆ,
ಮುಂದೆ ನಡೆದನು, ಹುಡುಗ
ಹಿಂದೆ ನಡೆದನು
ಆಟದೊಡವೆ ಕಂಡು ನಿಂತು
ಚಂಡು ಬೊಗರೆ ಬೇಕೆಂದು
ತಂದೆಯನ್ನು ನಿಲ್ಲಿಸಿದನು
ಆತನದನು ಕೊಡಿಸಿಬಿಟ್ಟನು
ಹೀಗೆ ಏಸೊ ಒಡವೆಗಳನು
ಬೇಡಿಬೇಡಿಕೊಂಡನು
ಕೊನೆಯ ಹಟವು ಬೇರೆ ಇತ್ತು
ಸಂತೆ ಮೂಟೆ ಕಟ್ಟಿ–ಎತ್ತಿ
ತನ್ನ ಮೇಲೆ ಹೊರಿಸು ಎಂದು
ಗಂಟುಬಿದ್ದನು—ತಂದೆ
ಬೇಡ, ಭಾರವೆಂದನು
ಹುಡುಗ ಕೇಳಲಿಲ್ಲ! ತಂದೆ

ಗಂಟನೆತ್ತಿ ಶಾಸ್ತ್ರಕಾಗಿ
ಮಗನ ತಲೆಯ ಮೇಲೆ ಹೊರಿಸಿ
ಮೇಲೆ ತಾನು ಕೈಯ ಹಿಡಿದನು
ಹುಡುಗ ಭಾರಹೊತ್ತು ಹಾಗೆ
ಮುಂದೆ ನಡೆದನು—"
ಯಾರ ಕೂಗೊ ಕೇಳಿ ನನಗೆ
ಎಚ್ಚರಾಯಿತು—ಕನಸು
ನೆನಪು ಉಳಿಯಿತು
ನಮ್ಮ ಹಿತದ ಹೊಣೆಯ ಹೊತ್ತ
ತಂದೆಯಾದರೇನು ಅವಗೆ ನೆನಪು ಕಡಿಮೆ
ಆತ್ತು ಕರೆದು ಪಡೆಯಬೇಕು!
ಶಕ್ತಿ ಸಾಲದಾದರೇನು?
ಭಾರವಾದ ಹೊರೆಯ ಹೊರಲು
ನಿಂತಕ್ಷಣವೆ ತಂದೆ ಮೇಲೆ
ಗುಪ್ತಹಸ್ತದಿಂದ ಎತ್ತಿ
ಹಿಡಿದು ನಮ್ಮ ನಡೆಸ ಬರುವನು.
ದೈವ ಹಿರಿದು! ಯತ್ನಕಿರಿದು!!
ಆದರೇನು?
ಯತ್ನಯುಕ್ತಿ—ದೈವ ಶಕ್ತಿ!
ದುಡಿಮೆ ಕೈದು—ನೆರವು ಹಸ್ತ!!

೩೪. ಬೇಡಲಾರೆ

ಕರುಣೆ ಬೇಕು! ಈತಕರುಣೆ ಬೇಕು! ಎಂಬರೆಲ್ಲ
ಯಾರಿಗಾಗಿ ಕರುಣೆಬೇಕು! ಏತಕೀತನೊಲವು ಬೇಕು ?
ಮಾಂಸಮೂಳೆ ಮಜ್ಜೆಗಳನು ಹೊರೆಯಲೆಂದು ಬೇಡಲೇ?
ಅಡರಿಬರುವ ಕೇಡುಪೀಡೆಗಳಿಗೆ ಅಳುಕಿಬೇಡಲೇ ?
ದೈವಶಕ್ತಿ ಹಿರಿಯುದಹುದು, ನನ್ನ ಹೆಮ್ಮೆಗಿಲ್ಲ ನೆಲೆಯು
ಅವನ ಮುನಿಸುಗಣ್ಣ ಕಿರಣಬೆಳೆಯು ಮಣ್ಣಿಗಿಕ್ಕಬಹುದು!
ಕರುಣೆ ಪಡೆದ ಭಕ್ತಗಿಲ್ಲವೇನು ಹೊನ್ನಶೂಲ ?
ಬೇಡಿಬೇಡಿ ನೂರುವರುಷ ಅಂಜಿಅಳುಕಿ ಕೊನೆಗು ಶೂಲ!
ಬೇಡಿ ಹಂಗಿನಲ್ಲಿ ಸಿಗದೆ ತಲೆಯನೆತ್ತಿ ಬಾಳಬೇಕು
ಆಗುಹೋಗುಗಳನು ಒಮ್ಮೆ ಅಳೆದು ಕಟ್ಟಿ ಒಗೆದನಂತೆ!
ಇನ್ನು ಬೇಡಿ ಪಡೆವುದೇನು?ಕಟ್ಟುಮುರಿದು ಕೊಡುವುದೇನು?
ಆಟಕೆಂದು ಹೆಣೆದ ಬಲೆಯು ನೋಯಿಸುವುದೆ ನನ್ನನಿಂದು?
ಸಿಪ್ಪೆನಿಂದ ಹಣ್ಣುಮಾಡಿ ನೊಣೆದರೇನು-ಬೀಜಕಡೆಗೆ!
ಕಡಲನೀರು ತಾನು-ಕೊಡದ ನೀರು ನಾನು, ಬಲ್ಲೆನದನು
ಕಡಲನೀರಬಣ್ಣ-ರೂಪ-ಸವಿಯು ಕೊಡದನೀರಿಗುಂಟು!
ಅದರ ಶಕ್ತಿ, ಅದರ ಬೆಡಗು ಅಣುವಿನಷ್ಟು ಇಲ್ಲವೇನು?
ಕೊಡದ ನೀರು ಕಡಲಿನಲ್ಲಿ ಸುರುವಿಕೊಳುವ ಶಕ್ತಿವಂತ!
ಇಂದೆ ನನ್ನ ಸುಟ್ಟರೊಂದು ಆವೆಯಾಗಿ ಹಾರಬಹುದು!
ನಾನೆ ಒಂದು ನನ್ನ ಒಡವೆ, ಬೇಡಿದೊಡನೆ ಕೊಟ್ಟುಬಿಡುವೆ
ಆದರೇನು ? ಬೇಡಲಾರೆ ! ಬೇಡಲಾರೆ ಕರುಣಿಸೆಂದು!

೨೫. ಹಿರಿಮೆ

ಭೂಮಿ ತಾಯ ತೊಡೆಯ ಮೇಲೆ
ನನ್ನದೊಂದು ಚಿಕ್ಕ ಗೂಡು
ಪುಟ್ಟಮನೆಗೆ ಮುಗಿಲೆ ಛತ್ರು
ಮೇಲೆ ಹೊಳೆವ ಚಿಕ್ಕೆ ಕಳಸ
ತೆರೆಯ ಕಣ್ಣು ಚಂದ್ರ ಸೂರ್ಯ
ನನ್ನ ಮನೆಗೆ ಬೆಳಕನೀವರು
ಪಂಚ ತತ್ವಗಳಲಿ ವಾಯು
ನಿತ್ಯ ಕಸವನುಡುಗಬೇಕು !
ಅಗ್ನಿ ಅಡಿಗೆಮನೆಯ ಆಳು !
ನೀರೆ ಅಂಗಸೇವೆಗಾರ್ತಿ!
ಪ್ರಕೃತಿ ದೇವಿ ಅಡಿಗೆಯವಳು!
ನವಗ್ರಹಗಳೇ ಮಂತ್ರಿವರ್ಗ!
ದಿನದ ಕಜ್ಜ ಕೃತಿಯ ಬರೆಯೆ
ಚಿತ್ರಗುಪ್ತ ಬರಹಗಾರ!
ಮುಗಿಲಿನಟ್ಟದಲ್ಲಿ ಕುಳಿತು
ವಾದ್ಯ ಬಾರಿಸುವವರು ಬೇರೆ
ಗಾಳಿ ಓಲೆಕಾರ ಮತ್ತೆ
ಮೇಘರಾಜ ತೋಟದಾಳು!
ಬೆಂಕಿಯನ್ನು ಕಡ್ಡಿತುದಿಗೆ
ಕಟ್ಟಿ ಕೂಡಿಸಿರುವೆ ಅವನು
ಕರೆಯೆ ಬರುವನು
ತಂತಿಯಲ್ಲಿ ಹಾಕಿಮಿಂಚ

ಹೆಂಚಿಕೆಯಲಿ ಕಟ್ಟಿಇರುವೆ
ಇರುಳು ದೀಪ ಹೊತ್ತಿಸುವನು
ಇಂತು ಅರಸುಮಗನಿಗೆಂದು
ತಂದೆಯಿತ್ತ ಪುಟ್ಟ ರಾಜ್ಯ
ಇಲ್ಲಿ ಆಳ್ವ ಶಕ್ತಿ ಪಡೆಯೆ
ಹಿರಿಯರಾಜ್ಯಕಾನೆ ಒಡೆಯ-ಆಗ ಸಾರ್ವಭೌಮ ನಾನೆ

೨೬. ಕವಿನೆರಳು

ಕವಿನೆರಳು ! ಕವಿನೆರಳು ! ಎಲ್ಲೆಲ್ಲು ಕವಿನೆರಳು !
ವಸ್ತುವಿರುವಲ್ಲೆಲ್ಲ ಕವಿನೆರಳು ಹುದುಗಿಹುದು
ಬೆಳ್ಳಿ ಬೆಳಕನು ಮರೆಸಿ, ಕತ್ತಲೆಯ ಬಿತ್ತರಿಸಿ
ಒಡವೆಯಡಿಯಲಿ ಅಡಗಿ ದಿಗ್ಗನೇಳುವದು ಒಮ್ಮೆ !
ನಿಚ್ಚಳದ ರೂಹಿಲ್ಲ, ತನಗೆ ಚೇತನೆ ಇಲ್ಲ
ಗಾತ್ರದಲಿ ನಿಲುವಿಲ್ಲ, ಬಣ್ಣದಲಿ ಚೆಲುವಿಲ್ಲ
ಒಡವೆಯೊಲು ಚೇತನವು ಮಸಮುಸಕು ಆಕೃತಿಯು !
ಮೂಲವನು ಅಣಕಿಸುವ ನಿಬ್ಬೆರಗು ಅದಕುಂಟು !
ನನಗೊಂದು ಕವಿನೆರಳು ನಿತ್ಯಕೆಣಕುವುದೆನ್ನ
ಅದರ ಕುಂದನು ಕಂಡು, ಕೊಂಕು ಕೊರತೆಯನರಿತು
ತಿಳಿಗೇಡಿತನದೊಳಗು ನೋಡಿ ತಿಳಿದು
ನನ್ನನಾ ನಿಟ್ಟಿಸಿದೆ—ಕವಿನೆರಳ ತಂದೆ ನಾನು !
ನಿಚ್ಚಳದ ತಿಳಿವಿಲ್ಲ, ನನಗೊಂದು ಅಲುಗಿಲ್ಲ
ಗಾತ್ರಸ್ಥಿರವಾಗಿಲ್ಲ ಬಗೆಬಗೆಯ ಬಣ್ಣಗಳು
ಇದನೆಣಿಸೆ ನಾನೊಂದು ಕವಿನೆರಳು ! ನಿಶ್ಚಯವು.
ಯಾವ ವಸ್ತುವಿಗಿಂಥ ಕವಿನೆರಳು ! ಕವಿಯುವುದೊ?
ಅದರ ಕಾಲಲಿ ನನ್ನ ಅಂಗವೊಂದಡಗಿಹುದೆ ?
ಅದನಾರುಪಾರಾಗಿ ನೋಡಲಿಕೆ ಕಣ್ಬರಲಿ
ಅದರಾಚೆಯಾ ಪ್ರಭೆಯ ದರ್ಶನವು ಆಗ
ಕವಿನೆರಳ ಸಾಲುಗಳ ಅಳಿವು ಆಗ !

೨೭ ಸುಲಭವಲ್ಲವು

ವಸುಧೆಯೊಂದು ಸಂತೆ ಪೇಟೆ
ಅಲ್ಲಿ ಸಿಗದ ವಸ್ತು ಇಲ್ಲ
ಮುತ್ತು ರತ್ನ ಹೊನ್ನು ಬೆಳ್ಳಿ
ಹಣ್ಣು ಕಾಯಿ ಹೂವು ಜೇನು
ಅರಸು ಉಡಿಗೆ ಜರದ ತೊಡಿಗೆ
ಸರ್ವ ವಸ್ತು ಅಲ್ಲಿ ಉಂಟು
ಒಡೆಯ ಬೆಲೆಯ ಹೇಳನೆಂದು
ದಾನವಾಗಿ ಈಯನೊಂದು
ತೋಳಬಲರು ಬನ್ನಿರೆಂದು
ಗಾಳಿಕಹಳೆ ಊದುತಿಹನು
ಪಡೆದುಕೊಳ್ಳಿರೆಂದು ಸಾರಿ—
    ಸಾರಿ ಹೇಳುತಿರುವನು

* * *

ಬಸಿರು ಬಿಲದಿ ಮುದ್ದು ಕೂಸು
ಬೇನೆ ತಿಂದು ಪಡೆಯಬೇಕು
ನೆಲದ ಬಸಿರನಗೆದು ಸೋಸಿ
ಚಿನ್ನ ಬೆಳ್ಳಿ ಗಳಿಸಬೇಕು
ಕಡಲಿನಾಳನಳೆಯದಿರಲು
ರತ್ನರಾಶಿ ಸಿಗುವುದೆಂತು ?
ನೊಣದ ದಂಡಿನೊಡನೆ ಹೋರ
ದಿರಲು ಜೇನು ನಮ್ಮದೆಂತು ?
ಹಂಗುದೊರೆದು ಏರದಿರಲು
ಮರದ ಹಣ್ಣು ಕೈಗೆ ಬರದು

ಕರೆಯದಿರಲು ಆವು ಹಾಲು
ಸಮ್ಮದಾಗಿ ತಾನೆ ಬರದು
ಕಡಿದು ಸುಲಿದು ಅಗಿದರಾಗ
ಕಬ್ಬು ಸವಿಯ ಹಾಲನೀವುದು
ಮುಳ್ಳುಮರೆಯ ಹೂವುಗಳನು
ಜೋಕೆಯಿಂದ ಬಿಡಿಸಬೇಕು
ಬದುಕಿನೊಡವೆ ಬೇಡಿದನಿತು !
ಕಣ್ಣು ಕೈಗೆ ತಗಲುವನಿತು !
ರಾಶಿರಾಶಿ ಬಿದ್ದರೇನು ?
ಪಡೆಯಲೊಂದು ಸುಲಭವಿಲ್ಲವು .

೨೮. ಬೀಜರಾಸಿ

ಮಾನವರೆ ನಾವೆಲ್ಲ ? ಮಾನಿಸರೆ ನಾವಿಲ್ಲಿ ?
ಕಲ್ಪನೆಯ ಮೊಳೆಯಾಗಿ ಕಲ್ಪತರು ನಮ್ಮಲಿದೆ
ಅದ್ಭುತದ ಶಕ್ತಿಶಿಶು ನಮ್ಮ ಗರ್ಭದಲುಂಟು
ಶಿಶುವಿಸುಕಿ ಕಲ್ಪನೆಯ ಮಿಡಿಸುವದು ಒಮ್ಮೊಮ್ಮೆ
ನೆಲನೀರು ಗೊಬ್ಬರಕೆ ಮೈಗೊಟ್ಟು ಒರಗಿ
ವಜ್ರಕವಚದ ಮುಸುಕ ಕತ್ತರಿಸಬೇಕು
ಇಲ್ಲವಿರೆ ಹೊರಳಾಡಿ ಕೊಳೆಯಬೇಕು
ಒಲ್ಲದಿರೆ ಈ ಹೊಲಬನರಿಯಬೇಕು
ಬೀಜಗಳು ! ಬೀಜಗಳು ನಾವೆಲ್ಲ !
ಕಲ್ಪತರುವಿನ ಬೀಜ ! ನೆನಪಿರಲಿ
ಕೆಂಗಣ್ಣ ನೋಟದಲಿ ಅದು ಕಂದುತಿಹುದು
ಕಾಮದುಸುರಿನ ಬಿಸಿಗೆ ಅದು ಕುಂದುತಿಹುದು
ಬಿರುನುಡಿಯ ಕಣೆಗಳಿಗೆ ಅದು ಸೀಳುತಿಹುದು
ಹಳಿದು ಹೀಗಳಿಸುವರೆ ಅದು ಹೋಳುತಿಹುದು
ರಕ್ಷಿಸುವ ರಕ್ಷಿಸುವ ಕಲ್ಪನೆಯ ಮೊಳೆಯ
ಹನಿಹನಿಸಿ ಬೆಳೆಸೋಣ ಸರಸತೆಯ ಮಳೆಯ
ಸಮರಸದ ಬೆಳೆಗಾಳಿ ಜೀವ ತುಂಬಿಸಲಿ
ಕಲ್ಪನೆಯ ಕಲ್ಪತರು ಬೆಳೆ ಬೆಳೆಯುತಿರಲಿ

೨೯. ಕಡಲಿನಾಳದಲ್ಲಿ

ನಾವಿರುವ ತಾಣವಿದು ಆಳಕಡಲು
ಎತ್ತೆತ್ತ ನೋಡಿದರು ಅವ್ಯಕ್ತದೊಡಲು
ತೊಯಿಸಲಾಗದ ರಸವು ನೀರಿಗುಂಟು
ಗಂಧರುಚಿಗಳೆ ಇಲ್ಲ–ತೆರೆಗಳಿಲ್ಲ
ಹವಳ ಮುತ್ತಿನ ರಾಶಿ ತೇಲುತಿದೆ ಮೇಲೆ
ಜೀವಚೇತನವೆಲ್ಲ ಮುಳುಗಿಹುದು ತಳದಿ
ಏನು ಕಡಲು ! ಅವ್ಯಕ್ತದೊಡಲು !!
ವ್ಯಕ್ತವಾಗಿಹುದೇನು-ಸುಪ್ತಲೋಕ ?
ಬಹುವಿಧದ ಆಕೃತಿಯ ಮಡಕೆಗಳು ಮಡಿಲಲ್ಲಿ
ಬಹುವಿಧದ ಬಣ್ಣಗಳ ಕಾಜಿನಲಿ ರಚಿಸಿಹವು
ಕೆಂಪುಕರಿ, ನೀಲಿಬಿಳಿ, ಹಸರು ಮಿಶ್ರ
ನೀರು ಬಣ್ಣದ ಮಡಕೆ ಇಲ್ಲದಿಲ್ಲ
ಕಡಲ ನೀರಲಿ ತುಂಬಿ ಮುಳುಗಿಹವು ನೋಡು
ಮಡಕೆಗಳ ಮೈಬಣ್ಣ ನೀರಿಗೇನೊ ?
ಮೈಬಣ್ಣದಲಿ ನೀರವರ್ಣವನೆ ಬಗೆದು
ತಾನೊಂದು—ನೀ ಬೇರೆ ಎಂದು ಹೀಗಳಿದು
ಉಲಿದು ನಲಿಯುವುದುಂಟು, ಕೆಲೆದು ಕುಣಿಯುವುದುಂಟು
ನೊಂದು ನಡುಗುವ ಕೆಲವು, ಬೆಂದು ಬಳಲುವ ಕೆಲವು
ಹಿಡಿದು ಜಡಿ, ಓಡಿಬಾ ಮಲ್ಲಯುದ್ಧಕೆ ಎಂದು
ಹೊಡೆದು ಹಾಕುವೆ ಮತ್ತೆ ಸೀಳಿ ಒಗೆಯುವೆನೆಂದು
ಉರಿದೆದ್ದು ಮಿಗೆನೆಗೆದು ಬರುತಿಹವು ತೂರಿ
ಕದನದೀ ಹೋರಾಟದಲಿ ಹಲವು ಮಡಕೆಗಳೊಡೆದು
ನೀರೆಲ್ಲ ಕಡಲಿನಲಿ ಬೆರೆತು ಹೋಯ್ತು

ಒಡೆದ ಮಡಕೆಗೆ ಆಗ ಬುದ್ಧಿ ಬಂತು
“ ನಾನೂ ನೀನೂ ಒಂದೆ ಬಣ್ಣ—ಮಡಕೆಯ ಬಣ್ಣ
ನಮಗೆಲ್ಲಿ ನೀರು ? ಅದು ಎಲ್ಲ ಕಡಲಿನದು
ವರ್ಣರೂಪಗಳಹುದು ಅಳಿದುಳಿವ ಒಡವೆ
ಒಳಗಿರುವ ನೀರು ನಾವೆಲ್ಲ ”
ಎಂದೊರಲಿ ಸಾರುತಿದೆ ದನಿಯು ಅಲ್ಲಿ
ಬಿಂಕದಲಿ ಬಿಗಿದುಬ್ಬಿ ಮಲಗಿಹವು ಇಲ್ಲಿ

---

೩೦. ಡಬ್ಬುಗಳ್ಳಿ

ಡಬ್ಬುಗಳ್ಳಿಯೆ ! ನಿನ್ನ ನಿರ್ಮೂಲಗೊಳಿಸಲಿಕೆ
ಹಲವು ಹುಸಿದಾಳಿಗಳು ಸುಳಿದೇರಿನುಸುಳಿದವು !
ಯುಗ ನಾಲ್ಕು ಗತಿಸಿದರು ಅಮರನಂತೆಸೆಯುತಿಹೆ !
ಆ ಪುರಾತನ ಪುಣ್ಯಪುರುಷರಿಗು ನೀಮೂಲ !
ಪುಣ್ಯನಾಡಿನ ಸಂದುಸಂದುಗಳ ಕೀಲಿಸಿಹೆ !
ಭಾರತದ ಸಿರಿಯು ಪ್ರಾಚೀನ ಪರಮುದ್ರೆಯಂತೆ !!
ಕೊಡಲಿಕೊಳ್ಳಿಯನೆತ್ತಿ ನೆರೆಯೇರಿ ಬಂದೆರಗಿ
ಕಡಿಕಡಿದು ಚಲ್ಲಿದರು ! ಎಳೆದು ಕಿಚ್ಚಿಕ್ಕಿದರು !!
ರಭಸದಾವೇಶದಾವೇಗದುರುವಣಿಗೆಯದು
ಮೂರ್ಛೆ ತರುವಂತಿತ್ತು! ಅಶೆ ತೋರೆಯಿಸುತಿತ್ತು!!
ಆದೊಡಾಕೋಟಲೆಗೆ ನಿನ್ನ ತಳಿ ನೂರ್ಮಡಿಸಿ
ಹತ್ತುನಿಟ್ಟಿಗೆ ಬೆಳೆದು—ತಳತಳಿಸಿತು !!
ಇಂತು ಈ ಭೀಕರದ ದವಡೆಯಲಿ ಬದುಕುಳಿದೆ !
ಪಡುವಣದ ಬಿರುಗಾಳಿ ಬಂತು ಕಂಗೆಡಿಸುತ್ತ
ಬಿಳಿಹುಳದ ತಂಡಗಳು ಯುಕ್ತಿಪರಿಯುಕ್ತಿಯಲಿ
ಕಳ್ಳಿಯನು ಮುದ್ದಿಡುತ—ಮುದ್ದಿಡುತ
ಜೀವಶಕ್ತಿಯನೊರೆದು ರಕ್ತವನು ಹೀರಿದವು !
ಎಲ್ಲೆಲ್ಲು ಬಯಲಾಯ್ತು! ನಾಡು ಹೊಸ ಹೊಸದಾಯ್ತು!
ಒಂದೆ ಕೊರಳಲಿ ಕೂಗಿ ನಾಡಿಗರು ಹರಸಿದರು ಹಿಗ್ಗಿದರು
ಬಿಳಿಯ ಹುಳಗಳು ಶ್ವೇತಕೀರ್ತಿಕೇತುವ ಕಟ್ಟಿ
ರಾಜ್ಯವನೆ ಆಳಿದವು! ನಾಡಿಗರ ರಮಿಸಿದವು!
ಅನಿತರಲಿ— ಮುನ್ನಣೆಯ ತಾಯುಳಿದ ನಸುಮುರುಗು
ನವತರುಣರೆದೆ ಕೊರೆದು—ಉರೆಜರೆದು
ಸಂಜೀವ ಶಕ್ತಿಯು ತಳೆದು, ಒಣಗು ಹೆಣಗಳನೆತ್ತಿ
ನವಜನ್ಮವಿತ್ತಂತೆ—ನೊಳೆತು ತಳತಳಿಸುತಿದೆ
ಕಳ್ಳಿಯೇ! ನಿನಗೆಂದು ಮರಣವಿಲ್ಲವು ನೀನು—
ಭಾರತದ ಸಂಸ್ಕೃತಿಯಂತೆ!!

೩೧. ಎರಿದು

ಮೊರೆದುರುಳುವ ತಿಳಿನೀರಿನ ‘ ಜುಳು ಜುಳು ’
ದನಿಯು ಮರ್ಮವೇನು ?
ಮರದೆಲೆಯಲಿ ಬಲು ಸುಸುಳುವ ಗಾಳಿಯು
ಕೊಳಲಿನರ್ಥವೇನು ?
ಕೆಂಚಿಗುರಿನ ನೆಸುನಗೆಯುಂದದ ಸವಿ
ಮುಗುಳಿನಂದವೇನು ?
ಮಿಂಚಿನ ಮಸಿಯುಲಿ ಬರೆವಿಹ ಸುಳುಹಿನ
ಮುಗಿಲ ಬರಹವೇನು ?
ನೀಲಿಮುಗಿಲಿನಲಿ ತೇಲಿಯುಡಗುವಾ
ಮೇಘಚಿತ್ರವೇನು ?
ಮೇಲಕೆ ನೋಡಲು ತೊಳಗುವ ತಾರೆಯು
ಸೂಚಿನರ್ಥವೇನು ?
ಮುಚ್ಚಿದ ಮುಷ್ಟಿಗಳಂತಿಹ ಮಾವಿನ
ಕಾಯ್ಗಳ ಗುಟ್ಟೇನು ?
ಬಿಚ್ಚಿದ ಕಣ್ಣಲಿ ಮೆಚ್ಚಿಸುವಂತಹ
ಹೂಗಳ ನಿಟ್ಟೇನು ?
ಗುಡುಗಿನ ಬಲುಹಲಿ ನಡುಗಿನ ತೊಡಕಿದೆ
ಅದನು ತಿಳಿವುದೆಂದು ?
ಹಕ್ಕಿಗಳುಲುಹಲಿ ಅಕ್ಕರೆಯೊಂದಿದೆ
ತಿಳಿವ ಸಮಯವೆಂದು ?
ಬಿಳಿಮುಗಿಲಿನ ಬೆಳದಿಂಗಳ ಸೂಸುವ
ಚಂದ್ರನಿಚ್ಛೆಯೇನು ?

ಹೊಳೆಯುವ ಹಸುರಿನ ಹೊನಲಲಿ ಹರಿಯುವ
ಸೊಬಗಿನ ಕುರುಹೇನು ?
ಕಣ್ಣಿಗೆ ಕಾಣುವ ತಿಳಿಯದ ಸಿರಿಯನು
ಕಂಡರೆ ಫಲವೇನು ?
ನುಣ್ಣಗೆ ಕೇಳುವ ಹೊಳೆಯದ ದನಿಯನು
ಕೇಳಲು ಫಲವೇನು ?
ಚಿತ್ರಬರಹ, ಆ ಒಡಪಿನ ನುಡಿಗಳು
ಸೂಚು ಸುಳುಹು ಕಂಡು
ಎತ್ತ ನೋಡಿದರು ತಿಳಿಯದ ತೊಡಕೇ
ತಿಳಿದು ತಣಿವೆನೆಂದು ?

೩೨. ಶರಾವತಿ

ಸಿಂಧುವಿನಂದದಿ ಹಿರಿಯವಳಲ್ಲ !
ಗಂಗೆಯ ತೆರದಿಂ ನಿರ್ಮಲಳಲ್ಲ !
ಬಹುನದಿಯಿಂದೊಡಗೂಡವಳಲ್ಲ !
ಜನಕುಪಕರಿಸುವ ಬಲವನಿತಿಲ್ಲ !
ಪಟ್ಟಣದುದ್ದಿಮೆಗಾಸರವಿಲ್ಲ !
ಸರಿಮೊರೆಯುಂದದಿ ಸಾಗುವಳಲ್ಲ !
ನೌಕೆಗೆ ಸನಿಬರಗೊಡಿಸುವಳಲ್ಲ !
ದೇಶದೇಶದಲಿ ಬಲ್ಪೆಸರಿಲ್ಲ !
ಹೀಗಿದ್ದರು ನಿನಗಧಿಕತೆಯುಂಟು
ಅದು ತಿಳಿಯದ ತಿಳುವಳಿಕೆಯು ಕುಂಟು !
ನಿನಗೆ ಹಿರಿಯ ವ್ಯಕ್ತಿತ್ವವೊಂದಿಹುದು
ಬ್ರಹ್ಮಪುತ್ರೆ ಪಡೆದಿಲ್ಲ ನಿನ್ನಯಶ
ನಲಿದು ನೆಗೆದು ಪಡುವಣಕೆ ಸಾಗುತಿರೆ
ಅಬ್ಬ ! ನಿನ್ನ ಉಬ್ಬರವು ಮೀರಿಮುದು
ಭೂಮಿ ತಾಯಿಗು ಹಿಡಿಯದ ದುಗುಡು
ಅಬ್ಬರದಿಂದಲಿ ಕೊಳ್ಳದಿ ಜಿಗಿದು
“ ಎಲ್ಲಿ ನನ್ನ ಆ ನಚ್ಚಿನ ನಲ್ಲ ! ”
ಎಂದು ಮೊರೆದು ಹೋಳಾಗಿ ಹೋದೆಂಕೋ ?
ಮೂರುಲೋಕಕು ನಿನ್ನ ಭವ್ಯಧ್ವನಿಯನು ಸಾರಿ
ಲೋಕವೆಲ್ಲಕು ನಿನ್ನ ಹಿರಿದು ಸಾಹಸ ತೋರಿ
ತನ್ನತನವನ್ನುಳಿಸಿ ಗುರಿಯ ಮಂದಿರವರಸಿ
ಕಡಲರಾಜನ ನಚ್ಚಿನರಸಿಯೆ ನೀನಾದೆ
ಎಲೆ ! ಶರಾವತಿ ! ನಿನ್ನ ಚಾಪಹುಸಿಯಲ್ಲ—

ಶ್ರೀ ರಾಮ ದಾಸ !!

೩೩ ಸಾಹಸ

ಜೀವವಿರುವುದೊಂದೆ ಒಂದು
ಅದಕೆ ಕಾಟ ನೂರೊಂದು
ಸಣ್ಣದೆಂದು ಕರುಣವಿಲ್ಲ
ತಣ್ಣಗಿರಲುಗೊಡಿಸವಲ್ಲ
ನವಗ್ರಹಗಳ ಕಾಟ ಬೇರೆ
ದೇವದೈತ್ಯರಾಟ ಬೇರೆ
ಮಾರಿಮಸಣಿ ಮಾಟವೆನಗೆ
ಹೊನ್ನಹೆಣ್ಣ ಬೇಟವೆನಗೆ
ಅರಸು ಮಾಡಿಕೊಂಡ ಗಂಡ
ಪುಂಡವಾಯ್ತು, ನೆರೆಯ ತಂಡ
ಬುದ್ಧಿಗೋಲಿಯುದಿರುವಸರಸಿ
ಬಡವನೆನಳು ಹೊನ್ನಿನರಸಿ
ದಿವ್ಯಕರುಣೆಗೊಂದು ಸುಂಕು
ಮನಕೆ ಹಿಡಿವುದೊಂದು ಮಂಕು
ದೇವ ದೈತ್ಯ ಶಕ್ತಿ-ಯುಕ್ತಿ
ಸಾವು ನೋವುಗಳಿಗೆ ಬುತ್ತಿ
ಶಕ್ತಿ ಸಾರ್ವಭೌಮರೆಲ್ಲ
ಯುಕ್ತಿ ಸಂಘ ತೊಟ್ಟರಲ್ಲ
ಕೂಸಿನೊಡನೆ ಕದನ ಹೂಡಿ
ಮುಷ್ಟಿಯುದ್ಧವಾಡಿಯಾಡಿ
ಹಣಿಯ ಬರುವ ಬಂಟರೇ!
ಕೇಳಿರಿನ್ನು ನಂಟರೆ!

ಮಗುವಿನೊಡನೆ ಸೆಣಸಿ
ಮರವೆಯಿಂದ ಸೊಕ್ಕಿ
ಇರುವೆಯೊಡನೆ ಕುಸ್ತಿಯೆ ?
ಭವ್ಯಶಕ್ತಿ ಹಸ್ತಿಯೆ !
ಆದರೆನಗೆ ಹೆಮ್ಮೆಯೊಂದು—
ನಿನ್ನ ಜೊತೆಯ ಆಳು ಎಂದು ?

———

೩೪. ನೀನು

(ಭಗವದ್ಗೀತೆಯಿಂದ)

ಆದಿದೇವನು ನೀನು ಪೂರ್ವದ ಪುರುಷ ವಿಶ್ವಾಧಾರನು
ಲೋಕವ್ಯಾಪ್ತನನಂತರೂಪನು ಜ್ಞೇಯ ಮೋಕ್ಷಸ್ಥಾನನು ॥
ವಾಯು ಯಮನು ನೀನಗ್ನಿ ಬ್ರಹ್ಮನು ವರುಣ ಶಶಿ ಮುತ್ತಜ್ಜನು
ನಿನಗೆ ಸಾವಿರ ಬಾರಿ ವಂದನೆ ಮತ್ತೆ ವಂದನೆ ಗೈವೆನು ॥
ಹಿಂದೆ ವಂದನೆ ! ಮುಂದು ವಂದನೆ ! ಸರ್ವನಿಟ್ಟಿಗು ವಂದನೆ
ನಿನ್ನ ವೀರ್ಯವನಂತ ಶಕ್ತಿಯಪಾರ ಸರ್ವಾಧಾರನೆ ॥
ನೀನು ಸ್ಥಿರಚರಗಳಿಗೆ ತಂದೆಯು, ಪೂಜ್ಯಗುರು ಮಹಾಶ್ರೇಷ್ಠನು
ನಿನ್ನ ಸಮರಾರಿಲ್ಲ ನಿನ್ನನು ಮೀರಿಸುವರನು ಕಾಣೆನು ॥
ನಿನ್ನ ಬಲಕೆ ಸಮಾನವಾದುದು ಇಲ್ಲ ಲೋಕತ್ರಯದಲಿ
ಸುಪ್ರಸನ್ನತೆ ತೋರು ಬೇಡುವೆ ಉರುಳಿ ನಿನ್ನಡಿತಳದಲಿ ॥
ತಂದೆ ಮಗನನು ಮತ್ತೆ ಸಖನನು ಸಖನು ಸಹಿಸುವದಿಲ್ಲವೆ ?
ಎನಗೆ ಪ್ರಿಯ ನೀನೆನ್ನ ಸುಹಿತಕೆ ಸಹನೆ ಗೆಯ್ಯುವುದು ಸಹಜವೆ ॥
ಮೊದಲು ನೋಡದ ನಿನ್ನರೂಪವ ಕಂಡು ಮೈನಿಮಿರೆದ್ದಿದೆ
ಮೊದಲ ರೂಪವನೆ ತೋರುದೇವನೆ! ಭಯದಿ ಮನ ವ್ಯಥೆಗೊಂಡಿದೆ ॥
ಬೇಕು ನಿನ್ನಯ ಮುಕುಟಗದೆ ಆ ಚಕ್ರಧಾರಿಯ ದರ್ಶನ
ಸಹಸ್ರಬಾಹುವೆ! ವಿಶ್ವಮೂರ್ತಿಯೆ! ಮಾಡು ಚತುರ್ಭುಜ ಧಾರಣ ॥

೩೫ ಮನದಾಸೆ

ಈಸು ದಿನವ ಕಳೆದರೇನು
ಏಸು ವರುಷ ಗತಿಸಲೇನು
ನಾನು ಗಳಿಸಲಿರುವುದೊಂದೆ
ಏನು ಹಾಡಲದನ ತಂದೆ
ನುಡಿಯುತಿರುವದು। ವೀಣೆ।
ಮಿಡಿಯುತಿರುವದು ॥ ೧ ॥
ವಿಶ್ವವೃಕ್ಷಕಾನು ಅರಳು
ಕಾಯಿ ಹಣ್ಣು ಆಗದಿರಲು
ರೆಂಬೆಗಂಟಿನಿಂತ ಹಸುರು
ಎಲೆಯದಾಗಲೆನುವ ಉಸಿರು
ಸೂಸುತಿರುವದು। ಎದೆಗೆ।
ಬೀಸುತಿರುವದು ॥ ೨ ॥
ತಳೆದ ರಸನೆ ಸರಿಬರಲಿ
ನನ್ನ ಬದುಕು ಕಳೆಗೊಳ್ಳಲಿ
ಮುಗಿಲ ಬೆಳಕನುಂಡು ಕಣ್ಣು
ಜೀವನಾಗಿ ಬಿಡಲಿ ಹೊನ್ನು
ಕುಸುರುಗೊಳುವದು। ಸಾವ।
ಕೊಸರಿಕೊಳುವದು ॥ ೩ ॥
ಕುಳಿರುಗಾಳಿ ಹೊಡೆವವರೆಗೆ
ತೊಳಗಿ ಬೆಳಗುತಿರುವ ಹಾಗೆ
ಹುಟ್ಟಿ ಬರಲು ಆ ವಸಂತ
ತೊಟ್ಟ ಬಣ್ಣ ಕಾಣುವಂತೆ
ಬಾಳಲೆಳಸಿದೆ। ಜೀವ।
ತಾಳಲೆಳಸಿದೆ ॥ ೪ ॥

೩೬ ಹೇಳು ಹಕ್ಕಿ !

ಹೇಳು! ಹೇಳು! ಹೇಳು ಹಕ್ಕಿ
ನಿನ್ನ ಗೂಡು ಎಲ್ಲಿ—ಹಕ್ಕಿ ?
ಇಲ್ಲಿ ಬಂದು ಹೇಗೆ ಸಿಕ್ಕಿ ?
ಎಲ್ಲಿಗೆಂದು ಹಾರುವಾಕೆ ? ||
ಸಂಜೆಯಾಗ ಬಂತು ನೋಡು
ಅಂಜದೆಲ್ಲಿ ತಂಗದೋಡು
ಜೊತೆಗೆ ಬರುವುದೊಂದೆ ಹಾಡು
ಚತುರ ಕತೆಯು ಸಾಕು ಮಾಡು ||
ಗೂಡೆ ನಿನಗೆ ಅಚಲ ತಾರೆ
ಮೂಡಿ ಕರೆಯುತಿಹುದು ಬಾರೆ
ಹಣ್ಣಸವಿಯು ಮರೆದು ಬಾರೆ
ಬಣ್ಣದೆಲೆಯು ತೊರೆದು ಜಾರೆ ||
ಹೆಸರು ಮರೆತರಿಲ್ಲ ಕೇಡು
ದೆಸೆಯು ಮರೆತರೆಲ್ಲಿ ಗೂಡು ?
ಸಡಿಲು ಬಿಡುವರೇನು ರೆಕ್ಕೆ
ಬಿಡದೆ ಸೇರು ಗುರಿಯು ಚಿಕ್ಕೆ ||

೩೭. ಒಂದು ಬೆಳಗು

ಬೆಳಗು ಬಂತು ! ಬೆಳಗು ಬಂತು !
ಮುಗಿಲ ಹರಿದು ಬೆಳಕು ತಂತು !
ಹೊನ್ನ ಹೊಳೆಯು ಹರಿಯಿಸಿತ್ತು
ಚೀನ ಸೆಲೆಯು ಸುರಿಯಿಸಿತ್ತು ॥
ಹಕ್ಕಿಗಳಿಗೆ ಹಾಡಹಚ್ಚಿ
ಚುಕ್ಕಿಗಳಿಗೆ ಓಡಹಚ್ಚಿ
ಚಿಕ್ಕ ಮೊಗ್ಗೆಗಳನು ಬಿಚ್ಚಿ
ಮಕ್ಕಳನ್ನು ಆಡಹಚ್ಚಿ ! ಬೆಳಗುಬಂತು ॥
ಜಡದ ನಿದ್ದೆ ತೊಲಗಿ ಹೋಯ್ತು
ಹೊದೆದ ಮುಸುಕು ಜಾರಿ ಬಿತ್ತು
ಬಂತು ! ಬಂತು ಹೊನ್ನ ಬೆಳಕು
ಮಿಂದು ಮಿಂದು ಮಡಿಯು ಮನಕು ! ಬೆಳಗುಬಂತು ॥
ಸೃಷ್ಟಿಯೆಲ್ಲ ಮಿಸುಕುವಂತೆ
ಮುಗಿಲು,ನಿಂತು ನೋಡುವಂತೆ
ಅಲ್ಲು-ಇಲ್ಲು-ಎಲ್ಲು ಒಸಗೆ
ಹಿಗ್ಗು ನೋಡು ಒಳಗೆ ಹೊರಗೆ ! ಬೆಳಗುಬಂತು ॥
ಚಳಿಗೆ ನಡುಗಿ ಎದ್ದ ಮನವು
ವಿಷಕೆ ಮೂರ್ಛೆ ಹೊದ್ದ ತನುವು
ಕೆಂಪು ಬೆರೆತ ಬೆಳಕನೂಡಿ
ತಂಪು ತೊಡೆದ ಸುಖದ ಮೋಡಿ ! ಬೆಳಗುಬಂತು ॥
ಮೈಯು ತುಂಬ ಕಣ್ಣೊ ಕಣ್ಣು
ರೋಮುಕೊಂದು ಬಾಯಿ ಅನ್ನು
ಚೆಲುವು ಕಂಡೆ ರಾಸಿ ರಾಸಿ

ನಲಿವನುಂಡೆ ಸೂಸಿ ಸೂಸಿ। ಬೆಳಗುಬಂತು ॥
ಸೂರ್ಯಚಂದ್ರರೆನ್ನ ಕಣ್ಣು
ಭೂಮಿತಾಯಿ ನನ್ನ ಮೈಯು
ಮುಗಿಲತಲೆಯ ನೆತ್ತಿನಿಂದು
ಕುಣಿವೆನಿನ್ನು ದಣಿಯುದೆಂದು । ಬೆಳಗು ಬಂತು ॥
ಒಳಗು ಹೊರಗು ಬೆಳಕು ಸುರಿದು
ನಸುಕು ಹರಿದು ಮುಸುಕು ತೆರೆದು
ಹೊಸದು ಬಾಳ ಬೆಳೆಯ ಕರೆದು
ಇರುಳ ಮರೆಯ ಪರೆಯ ಹರಿದು । ಬೆಳಗು ಬಂತು ॥

---

೩೮ ಮನೆಯುವಳೆ....!

ಮನೆಯುವಳೆ! ನೀನಿನ್ನು ಮನದವಳು ಆಗೇ। ಮನದವಳು ಆಗೇ॥
ನನ್ನವಳು ನೀನಾಗಿ ಈ ಮನೆಗೆ ಬಂದಂತೆ
ನೀಮಾಡೆ ನಿನ್ನವನು ನಾನಾಗುವಂತೆ॥

ತಾಯತೊಡೆಯಿಂದಿಳಿದಿ ಕನ್ನಕ್ಕಿಯಾಗಿ। ಕನ್ನಕ್ಕಿಯಾಗಿ।
ನಲುಮೆ ಚೆಲುವನು ಹೊತ್ತ ಜೊತೆಗಾರ್ತಿ ನೀನಾದಿ।
ಬಾಳಹೂವಿಗೆ ಮಧುರ ಕಸ್ತೂರಿಯಾದಿ ॥ ೧ ॥

ಬಾಳಕಸುಕಿನ ಒಗರು ಸವಿದು ಸಾಕಾಗಿ। ಸವಿದುಸಾಕಾಗಿ।
ಹುಳಿಮಧುರಗೊಳಿಸಿದೆಯೆ ನೀನೆ ಈ ದೋರೆಯನು
ಮನೆಯಲ್ಲಿ ಚಿಗುರಿಸಿದಿ ಮುದ್ದು ಮುಗುಳನ್ನು ॥ ೨ ॥

ಬಾಳುವೆಯ ಕಣದಲ್ಲಿ ಕೈಸೋತು ಬರಲು ಕೈಸೋತು ಬರಲು।
ಅಕ್ಕರೆಯ ಸಕ್ಕರೆಯನಿಕ್ಕು ನೀನೊಲವಿಂದೆ
ನಗೆಮುಖದ ಪನ್ನೀರು ಹನಿಸು ಮುದದಿಂದ ॥ ೩ ॥

ಸಂಸಾರಕಡಲಲ್ಲಿ ಬರುವ ವಿಷನುಂಗಿ। ಬರುವ ವಿಷನುಂಗಿ।
ನಿಂತಿರುವ ಶಿವನಂತೆ ಬಾ ಶಾಂತರಸಮೂರ್ತಿ
ನೋವು ರಣದೇಟುಗಳು ಮಾಯುವವು ಪೂರ್ತಿ ॥ ೪ ॥

ಹೋರಾಡಿ ಹೈರಣಿಸಿ ಬಾಯಾರಿ ಬರಲು। ಬಾಯಾರಿ ಬರಲು।
ಘೋರ ಸಿಡುಕಿನ ಸಿಡಿಲು ತುಸು ಸಿಡಿಯಗೊಡಬೇಡ
ನೂರು ಮಾತಿನ ಗಾರಮಳೆಯುಗುಳ ಬೇಡ ॥ ೫ ॥

ಬಿಸಿಲಿಂದ ಬಸವಳಿದು ಬೆಂದು ಬಂದಾಗ। ಬೆಂದು ಬಂದಾಗ।
ನೆರಳು ಕಾವಳ ಮಾಡಿ ಕಾಳಿ! ಹೆದರಿಸಬೇಡ
ಮೂಕ ಮಾತಿನ ಅಲಗು ನೀ ತಿರುವ ಬೇಡ ॥ ೬ ॥

ನಾವಿನ್ನು ನಡುಹೊಳೆಯ ಈಸಬೇಕಿಹುದು। ಈಸಬೇಕಿಹುದು।
ನಿನ್ನ ಸಂಗಡಿ ನಾನೆ ಗಟ್ಟಿ ಹಿಡಿಬೆಚ್ಚದಲೆ
ಮುಳುಗಿ ಮುಳುಗಿಸಬೇಡ ಕೈ ಬಿಟ್ಟು ನಲ್ಲೆ ॥ ೭ ॥

೩೯. ಗುರುತು

ನೀನೆಲ್ಲಿದ್ದರು ಗುರುತಿಸುವಂತೆ
ನನಗರಿಕೆಯು ಕೊಡು ಅದೇಕೆ ನಿಂತೆ ॥

ಅಂಗಳದಲ್ಲಿ ಕಸಗುಡಿಸುತ್ತಿರಲಿ
ಹಿತ್ತಲಗಂಜಲ ಬಳಿಯುತ್ತಿರಲಿ
ಬಾವಿಯ ನೀರನು ಎಳೆಯುತ್ತಿರಲಿ
ಹೊಗೆಯನೂದಿ ಒಲಿ ಹೊತ್ತಿಸುತಿರಲಿ ॥

ಕಾಳಿನ ಹರಳನು ಆರಿಸುವಾಗ
ಜೋಗುಳ ಹಾಡುತ ಮಲಗಿಸುವಾಗ
ಸುಖದೂಟನು ಬಡಿಸುತ್ತಿರುವಾಗ
ಕವಳಿಸಿ ನೀ ಹೊಡೆಯಲು ಬಂದಾಗ ॥

ಯಾವುದೆ ಬಣ್ಣವ ನೀನುಟ್ಟಿರಲಿ
ಎಂಥದೆ ಹರುಕನು ನೀ ಹೊದೆದಿರಲಿ
ಬಿಚ್ಚಿದ ಹೆರಳಿನ ಕುರುಳಿಳಿದಿರಲಿ
ಮುಡಿಯೊಳಗಿನ ಹೂಗಳು ಬಾಡಿರಲಿ ॥

ಹೇಗಿದ್ದರು ನಾ ಗುರುತಿಸುವಂತೆ
ಚೆಲುವಿನ ಕಣ್ಣನು ನೀ ಕೊಡುವಂತೆ
ಕೇಳುವೆ ನಿನ್ನನು ನಾನಿದನೊಂದೆ
ನಡೆಯಿಸಿಕೊಡು ನೀನೆನಗಿದನಿಂದೆ ॥

೪೦. ಈ ಆಟ ಸಾಕು

ಕಣ್ಣು ಮುಚ್ಚುವಾಟ ಸಾಕು
ಕಣ್ಣು ತೆರೆಯುವಾಟ ಬೇಕು ||

ಕಳ್ಳನಾಗಿ ಹುಡುಕುವವನು
ಕೊನೆಯವರೆಗು ನಾನೆ ಏನು ?
ಒಮ್ಮೆ ಅಡಗಿ ಕುಳಿತೆ ನೀನು
ಇಂಥ ಆಟ ಮುಗಿವುದೇನು ? ||

ಅಡಗಿದವಳು ನೀನೆ ಇರುವಿ
ನೀನೆ ಕಣ್ಣು ಮುಚ್ಚುತಿರುವಿ
ಎಲ್ಲು ನನಗೆ ಕಾಣದಿರುವಿ
ಹೇಗೆ ನೀನು ಹೊರಗೆ ಬರುವಿ ? ||

ಹೊರಗೆ ಒಮ್ಮೆ ಬಂದು ನೋಡು
ಮುಟ್ಟ ಬರಲು ದೂರ ಓಡು
ಕುಣಿಸಿ ನಗಿಸಿ ಆಟವಾಡು
ಒಲ್ಲದಿರಲು ಸಾಕು ಮಾಡು ||

ಇಂಥ ಆಟ ಆಡಲಾರೆ
ನಿಂತು ನಿಂತು ನೋಯಲಾರೆ
“ ಹುಲಿಯು ಬಂತು ! ಬಂತು ಬಾರೆ ”
ಎಂಬ ಆಟ ಆಡಬಾರೆ ||

೪೧. ಸಂಧ್ಯಾವಂದನೆ

" ಗಿಡಮರದೆಲೆಗಳು ಕೈಮುಗಿಯುವವು
ಗುಡಿಯಲಿ ಭಕ್ತರ ಶಿರಬಾಗುವವು "

ಅರಳಿದ ಹೂಗಳ ದಳ ಮುಗಿಯುವವು
ಹರಿತೊರೆ ನೆಲವನು ಬಗಿದೆರಗುವವು ॥
ಕಣ್ಣಿನ ರೆಪ್ಪೆಗಳೊಂದಾಗುವವು
ಚಿಣ್ಣರು ಸಾಗರ ಬಿದ್ದೊರಗುವವು ॥
ಸಂಧ್ಯಾವಂದನೆ ಮಾಡುವರಿಲ್ಲಿ
ಸಂಧ್ಯಾರಾಗವ ಪಾಡುವರಲ್ಲಿ ॥ ೧ ॥

ಅಳಿಗಿಳಿ ಕೋಗಿಲೆ ಕಣ್ಮುಚ್ಚಿದವು
ಉಲುಹದೆ ಧ್ಯಾನಕೆ ಮನಮೆಚ್ಚಿದವು
ಮುಗಿಲಲಿ ಸಾವಿರ ಬತ್ತಿಯ ಥಳಕು
ಮನೆ ಮನೆ ಹಣತಿಯ ಹೃದಯದ ಬೆಳಕು
ಸಂಜೆಯ ಪೂಜಿಸುತಿರುವರು ನೋಡು
ಸಂಜೆಯ ಶರಣರ ಭಕ್ತಿಯ ನೋಡು ॥ ೨ ॥

ಕುರಿಮರಿ ದನಗಳು ಬಿಟ್ಟವು ಮೇವು
ತರುಣರು ಒಮ್ಮೆಲೆ ತೊಟ್ಟರು ದಣಿವು
ಕಾವಿಯನುಟ್ಟವು ನೆಲಮುಗಿಲುಗಳು
ನೋಂಪಿಯ ತೊಟ್ಟರು ಕುಲದಂಪತಿಗಳು
ಸುತ್ತಲು ಮೆರೆವುದು ಭಕ್ತಿಯ ಚಿತ್ರ
ಎತ್ತಲು ಅರ್ಪಣದರ್ಘ ವಿಚಿತ್ರ ॥ ೩ ॥

ಒಂದೆಡೆ ಸೇರಿದೆ ಹಿರಿಯರ ಬಳಗ
ಮುಂದಕೆ ಸಾಗಿದೆ ಕಥೆಗಳ ಯಾಗ
ತೊಟ್ಟಿದೆ ಶಾಂತಿಯು ಉಕ್ಕುವ ಕಡಲು
ಉಟ್ಟಿದೆ ಮುಡಿಯುನು ಗಾಳಿಯ ಸುಯಿಲು ||
ನೋಡಿದರೆಲ್ಲಿಯು ಭಕ್ತಿಯೆ ಹೊಸತು |
ಕೇಳಿದರೆಲ್ಲಿಯು ಸೇವೆಯ ಮಾತು || ೪ ||

೪೨. ದ್ಯಾವಾಪೃಥಿವಿ

ತೊಡೆಯನಿಟ್ಟು ಮಕ್ಕಳೊಡನೆ ಕುಳಿತು ನಗುವ ತಾಯಿಯು
ಹೆಡೆಯನೆತ್ತಿ ನೋಡುತವರ ನಿಂತುನಲಿವ ತಂದೆಯು ॥
ಕಾಲವಾನದಂತೆ ಹಸಿವೆ ತಣಿಸುತಿರುವ ತಾಯಿಯು
ಕಾಲಕಾಲಕೊಂದು ತಿಳಿವ ಹನಿಸುತಿರುವ ತಂದೆಯು ॥
ವಿನಯವೆದೆಯಲಿಟ್ಟು ಭಕ್ತಿ ಕಲಿಸುತಿರುವ ತಾಯಿಯು
ಮನದ ಭಯವ ಸುಟ್ಟು ಶಕ್ತಿನಿಲಿಸುತಿರುವ ತಂದೆಯು ॥
ಹಸುರಹಚ್ಚಿ ಕುಸುರಬಿಚ್ಚಿ ಚೆಲುವನಿಡುವ ತಾಯಿಯು
ಹೊಸದು ಆಡಿ ಹೊಸದು ಮಾಡಿ ಕಲೆಯನಿಡುವ ತಂದೆಯು ॥
ಸೆರಗು ಹೊದಿಸಿ ಇರಳು ಮರೆಸಿ ನಿದ್ದೆಕೊಡುವ ತಾಯಿಯು
ಬೆರಗುಗೊಳದೆ ಕತ್ತಲೆನದೆ ಕಾವಲಿಡುವ ತಂದೆಯು ॥
ದಿವ್ಯಪ್ರತಿಭೆ ವ್ಯಕ್ತದಲ್ಲಿ ತೋರಿಸುವಳು ತಾಯಿಯು
ನವ್ಯಪ್ರಭೆಯವ್ಯಕ್ತದಲ್ಲಿ ಕೋರಿಸುವನು ತಂದೆಯು ॥
ಕೋಟಿ ಗುಣಗಳಿಂದ ಕೋಟಿತನುಗಳೆರೆವ ತಾಯಿಯು
ಕೋಟಿ ರೀತಿಯಿಂದ ಕೋಟಿಮನಗಳೊರೆವ ತಂದೆಯು ॥
ರನ್ನರಾಸಿ ಚಿನ್ನದೊಡಲು ನನ್ನಿಹೃದಯಿ ತಾಯಿಯು
ಘನ್ನಗಾತ್ರ ಉನ್ನತಾಂಗ ಚಿನ್ಮಯಾದ್ರಿ ತಂದೆಯು ॥
ಕಡಲನುಟ್ಟು ಪೊಡವಿತೊಟ್ಟು ಜಡವನಾಂತ ತಾಯಿಯು
ಸುಡುವ ರವಿಯು ಸುಡಿವಕವಿಯು ಬೆಡಗವಾಂತ ತಂದೆಯು ॥
ತನುಗಳೆನಿತು ಹೊಂದಿಸಿದರು ನಿಲುವೆ ಸಿಗದ ತಾಯಿಯು
ಮನಗಳೆನಿತು ಒಂದಿಸಿದರು ನೆಲೆಯು ಸಿಗದ ತಂದೆಯು ॥
ಪುಟ್ಟ ಹಣೆಯನಿಡುವೆ ಮೈಯನವಚಲೆಂದು ತಾಯಿಯು
ಪುಟ್ಟ ಕೈಯ ಮುಗಿವೆ ತಲೆಯ ತಡವಲೆಂದು ತಂದೆಯು ॥

೪೩. ಯಾತ್ರೆ

ಯಾತ್ರೆಗಾಗಿ ಬಂದೆನಹುದು-ಹಿರಿಯಕಾರ್ಯ ಮರೆತೆನೊಂದು ॥

ಕಾಲುನಡಿಗೆ ಶ್ರಮದ ಕುತ್ತು
ಬೀಯುವಾಯ್ತು ಹಣದ ಬೊತ್ತು
ಎತ್ತಲೆತ್ತ ಜನದಜಾತ್ರೆ
ಕಣ್ಣಿಗೊಂದು ಹಬ್ಬಮಾತ್ರ
ಹೊಸದು ತಾಣ, ಹೊಸದು ಜನತೆ;
ಹೊಸದು ಹಾಡು, ಹೊಸದು ಪಾಡು
ಬಾಯಿಗೊಂದು ರುಚಿಯ ತಿನಿಸು
ಮನಸಿಗೊಂದು ಸವಿಯ ಉಣಿಸು
ಅತ್ತಲಿತ್ತ ಎತ್ತ ತಿರುಗಿ
ಹೊತ್ತು ಹೊರಳಿತೆಂದು ಮರುಗಿ
ಯಾತ್ರೆ ಸಾರ್ಥವೆನಿಸದಾಯ್ತು
ಕಾಲವ್ಯರ್ಥ ಕಳೆದುದಾಯ್ತು
ಗುಡಿಯ ಹಾದಿ ಹಿಡಿಯಲಿಲ್ಲ
ದೇವರನ್ನು ಕಾಣಲಿಲ್ಲ
ಪರ್ವಕಾಲ ಮುಗಿದು ಹೋಯ್ತು
ಗರ್ಭಗುಡಿಯು ಮುಚ್ಚಿ ಬಂತು
ಧಾವಿಸೋಡು ಗುಡಿಯ ಕಡೆಗೆ
ಕಂಡು ಬೀಳು ದೇವನಡಿಗೆ
ಇಲ್ಲದಿರಲು ಜಾತ್ರೆ ವ್ಯರ್ಥ
ಯಾತ್ರೆಯೊಡನೆ ಜನ್ಮ ವ್ಯರ್ಥ !

೪೪ ಬಸವಣ್ಣ

ಹಾಡುವ ಬನ್ನಿರಿ! ಕನ್ನಡ ಕುವರರೆ ಬಸವನ ಕೀರ್ತಿಯನು
ಆಡುವ ಬನ್ನಿರಿ! ಕನ್ನಡದೊಲವಿನ ಬಸವನ ವಾರ್ತೆಯನು ॥

ಕನ್ನಡ ನಾಡಿನ ಅಸುವಿಗೆ ಮಂತ್ರದ ಉಸಿರಿತ್ತನು ಬಸವ
ಕನ್ನಡ ನಾಡಿನ ಮಣ್ಣಿಗೆ ಮಾಟದ ಹಸುರಿತ್ತನು ಬಸವ ॥

ಕನ್ನಡ ನಾಡಿನ ಸಾವಿರ ಕುಲಗಳ ಉದ್ಧರಿಸಿದರಾರು ?
ಕನ್ನಡ ನಾಡಿನ ಶರಣರ ಪ್ರಭೆಯನು ಬಿತ್ತರಿಸಿದರಾರು ? ॥

ಶರಣರಿಗೆಲ್ಲಾ ಒಂದೇ ಕುಲವೆಂದೊರಲಿದ ಧೀವರನು
ಶರಣರಿಗೆಲ್ಲಾ ಕಾಯಕವೊಂದಿರಲೆಂದನು ಗುರುವರನು ॥

ಕನ್ನಡ ನಾಡಿನ ತನುತನುವಿಗು ವರಸತ್ತ್ವವನುಣಿಸಿದನು
ಕನ್ನಡ ನುಡಿವರ ಮನಸನು ಬೆಳಕಿನ ಕಳೆಯಲಿ ತಣಿಸಿದನು ॥

ಮುಟ್ಟಿದ್ದೆಲ್ಲವು ಹೊನ್ನಾಯ್ತಲ್ಲವೆ ಪರುಷದ ಮಣಿ ಬಸವ
ಇಟ್ಟಡಿಯೆಲ್ಲವು ಶ್ರೇಷ್ಠಾಚಾರವೆ ಸಂಗನಶಿಶು ಬಸವ ॥

ತ್ಯಾಗದ ಮನಸಿಗೆ ಭೋಗದ ಕಾಯವನಿತ್ತನು ಬಸವಣ್ಣ
ಯೋಗದ ದಾರಿಗೆ ಸಂಸಾರಿಗರನು ತಂದನು ಬಸವಣ್ಣ ॥

ಲೋಕದ ಕೊಳಲಿನ ಸಪ್ತಕದೊಳಗಿನ ಸುಸ್ವರ ಬಸವಣ್ಣ
ಲೋಕದ ಕರಡಿಗೆಯೊಳು ಮಘುಮಘಿಸುವ ಮಲ್ಲಿಗೆ ಬಸವಣ್ಣ ॥

ನಾಡಿಗೆ ಶಾಶ್ವತ ಬೆಳಕನು ಕೊಡುಬಾ ನೇಸರ ಬಸವಣ್ಣ
ಕಾಡಿಗೆ ಮಂಜುಳದುಲುಹನು ಕೊಡಬಾ ಗೀತದ ಬಸವಣ್ಣ ॥

ಬಸವನೆ ನಮ್ಮವ ನೀನೆನ್ನುವ ಅಭಿಮಾನವನಿತ್ತಿರುವೆ
ಬಸವನೆ ನಿಮ್ಮವರಾವೆಂದೊರೆಯುವ ಮಾನವನಿತ್ತಿರುವೆ ॥

೪೫ ಹರಿಹರ

ಏಕೆ ಹರಿಹರೇಶ್ವರಾ ?

ಧಾರವಾಡ ಗಂಡು ಮೈ-
ಸೂರನಾಡು ಹೆಣ್ಣು ಇವರು
ಯಾರಿಗೆಂದು ಸೋಲದಂತೆ
ವೀರರಾಗಿ ಬಾಳುವಂತೆ

ಕೈಯ ಹಿಡಿಸ ನಿಂತಿರಾ ?
ಏಕೆ ಹರಿಹರೇಶ್ವರಾ ! ॥ ೧ ॥

ಇವನು ನಾಡ ವೀರಯೋದ್ಧ
ಇವಳು ಲಲಿತಕಲೆಯ ನಾರಿ
ಇವನ ಬಲವು ಉಕ್ಕುವಂತೆ
ಇವಳ ಒಲವು ಮಿಕ್ಕುವಂತೆ

ತುಂಗ-ಭದ್ರೆ ಹರಿದಿದೆ !
ಏಕೆ ಹರಿಹರೇಶ್ವರಾ ! ॥ ೨ ॥

ಹರಿದು ಹಂಚಿ ಹೋದನಾಡು
ಮರಳಿ ಒಂದುಗೂಡುವಂತೆ
ಎರಡು ಕೈಗಳಿಂದ ಹಿಡಿದ
ಹಿರಿಯ ಮನಸಿನಂತೆ ಮೆರೆವ

ಎರಡು ಸೇತು ಕಟ್ಟಿವೆ !
ಹೌದೆ ಹರಿಹರೇಶ್ವರಾ ! ॥ ೩ ॥

ಮಾಧವಾರ್ಯ ಮುನಿಯ ತಪವು
ಯೋಧ ಹುಕ್ಕನಂದ ವೀರ್ಯ
ಮಧ್ವಶೈವ ಮತಗಳೆರಡು
ಬದ್ಧವಾಗಲೆಂದು ನೆನಿಸಿ

ನಾಡ ಹರಸ ನಿಂದೆಯಾ ?
ಹೇಳು ಹರಿಹರೇಶ್ವರಾ ! ॥ ೪ ॥

೪೬. ಜೀವಶಿಲೆ

ಹಳೆಯ ಬೀಡು ಕಂಡು ಜೀವ ಹಳೆಯ ಕಥೆಯ ನೆನೆಯಿತು ।
ಇಂದಿನ ಜಗ ಮರೆಯಿತು ॥
ಬೆಳೆದು ಬಂದ ಶಿಲ್ಪಕಲೆಯ ಪ್ರತಿಭೆಗಾಗಿ ಬೆರಗಿತು ।
ಅಳಿದುದೆಂದು ಕೊರಗಿತು ॥
ಕವಿಯ ಹಸ್ತಸ್ಪರ್ಶದಿಂದ ಕಲ್ಲು ಜೀವತಾಳಿತು ।
ಕೋಟಿ ವರುಷ ಬಾಳಿತು ॥
ಅವನ ಏಕಚಿತ್ತಶಕ್ತಿ ಶಿಲೆಯ ಮೇಣ ಮಾಡಿತು ।
ಬಿರುಸುತನವ ದೂಡಿತು ॥
ಅಂದಿನವರ ಬಲಕೆ ಬಂಡೆ ಹೇಳಿದಂತೆ ಕುಣಿದವು ।
ನಟಿಸಿ ನಟಿಸಿ ದಣಿದವು ॥
ಅಂದು ಶಿಲ್ಪಿ ಹಿಡಿದ ತಾಳದಲ್ಲಿ ಬೊಂಬೆವೊಲಿದವು ।
ಇಂದು ಹಾಗೆ ನಲಿವವು ॥
ನಕ್ಕ ಹಾಸ್ಯ, ಕುಣಿದ ಭಂಗಿ, ಹಿಡಿದ ತಾಳ ಉಳಿವುದು ।
ಕಂಡು ಹೃದಯ ನಲಿವುದು ॥
ತಕ್ಕ ತಿಳಿವು ತಿಳಿಸಿ ಬಾಳು ಬೆಳಗುವಂತೆ ಕಲಿವುದು ।
ಅದಕೆ ಮನವು ಒಲಿವುದು ॥
ಜಡಕೆ ಜೀವವಿತ್ತ ಶಿಲ್ಪಿ ಎಲ್ಲೊ ಮಾಯವಾದನು ।
ಕಣ್ಗೆ ಕಾಣದಾದನು ॥
ಜಡದ ಜೀವವಾಗಿ ಇಂದು ನೋಡಿ ಮೂಕನಾದೆನು ।
ಒಂದು ಹೇಳದಾದೆನು ॥
ನಾಡ ಸಿರಿಯ ನುಂಗಿನಿಂತ ಕಾಲನಿದನು ನುಂಗನು ।
ಕಲ್ಗಳೆಂದು ಒಗೆದನು ॥
ನಾಡ ಪುನರ್ ಜೀವಕಿದುವೆ ಬೀಜವೆಂದು ಬಗೆಯನು ।
ಅದರ ಕೀಲಿ ತೆಗೆಯನು ॥

೪೨. *ಮದಿರಾ ಮಂದಿರ

ಭಾವದ ದ್ರಾಕ್ಷಾಬಳ್ಳಿಯ ಹಿಂಡುತ ಕಲ್ಪನೆಯೆಂಬಾ ಸೆರೆಯನ್ನು
ತೀವ್ರುತ ಕವಿತಾಪಾತ್ರೆಯ ಕವಿ ಸೆರೆಕೊಡುವವನಾಗಿಯೆ ಬಂದಿಹನು ॥
ಒರಿದಾಗದು ಕ್ಷಣವೆಂದಿಗು ಕುಡಿದರೆ ಕೋಟಿಸಲ, ಶತಕೋಟಿಸಲ
ಸೆರೆಗುಡಿಕರು ಆ ಓದುಗರಿರುವರು ನನ್ನಂಗಡಿ ಪುಸ್ತಕವದಲ ॥
ಮಧುರಭಾವಗಳ ಸುಮಧುರಸೆರೆಯನು ನಿತ್ಯವುಗೆಯ್ಯುತಲಿಹೆ ನಾನು
ಬಿಡದೆ ತುಂಬುವೆನು ಸೆರೆಯಿಂದೆನ್ನಯ ತೃಷಿತಹೃದಯದಾ ಪಾತ್ರೆಯನು॥
ಕಲ್ಪನೆಯೆಂಬಾ ಕೈಯಿಂದೆತ್ತಿ ನಾನೇ ಕುಡಿಕುಡಿಯುವೆನದನು
ಕಲ್ಪಿಸೆ ಕುಡುಕನು ನಾ ಸೆರೆಗಾರನು ಮದಿರಾ ಮಂದಿರವೂ ನಾನು ॥
ಯಾರೊಳಗಿನ ಆ ಜ್ವಾಲೆಯು ಸುಟ್ಟಿದೆ ಧರ್ಮಗ್ರಂಥಗಳ ರಾಸಿಯನು
ಮೀರಿಮದಿಸಿದವನಾವನು ಒಡೆದನೊ ಚರ್ಚುಮಸೀದೆಯ ಗುಡಿಗಳನು॥
ಯಾವನು ಕಡಿದೊಗೆದಿರುವನೊ ಪಾದರಿ ಮೌಲ್ವಿ ಪಂಡಿತರ ಜಾಲವನು
ಈವುದಿಂದು ಸುಸ್ವಾಗತವೆನ್ನಯ ಮದಿರಾಮಂದಿರವವನನ್ನು ॥
ಸೆರೆಮಾರುವನಾಗಲಿ ರವಿ, ಕಡಲೇಕೊಡವಾಗಲಿ, ಆ ನೀರೆ ಸೆರೆ
ಸೆರೆಕೊಡುವವರಾ ಮೋಡಗಳಾದರೆ ಮಧು ಪಾತ್ರೆಯು ತಾನಹುದು ಕ್ಷಿತಿ॥
ಜಡಿಮಳೆಯಂತೆಯೆ ಸುರಿಯಲಿ ಸುರೆತಾ ರಪರಪ ರಪರಪವೆನ್ನುತಲಿ
ಕುಡಿಯುವೆ ಗಿಡಬನ ಹುಲ್ ನಾನಾಗಿ ಮಳೆಗಾಲವೆ ಅಂಗಡಿ ಇಲ್ಲಿ ॥
ಇಬ್ಬರಿಹರು ಆ ಹಿಂದು ಮುಸ್ಲಿಮರು ಆದರವರ ಪಾತ್ರೆಯು ಒಂದೇ
ಇಬ್ಬರಿಗೂ ಸೆರೆಯಂಗಡಿ ಒಂದೆ, ಅವರು ಕುಡಿವ ಆ ಸೆರೆಯೊಂದೇ ॥
ಹೋಗುವರಾ ಗುಡಿ ಮಸೀದೆಗಿಬ್ಬರು ಇರುವವರೆಗೆ ಒಂದಾಗದಲೇ
ಆ ಗುಡಿ ಮಸೀದೆಯಿಂದಲೆ ಕದನ ಒಂದುಮಾಡುವುದು ಮಧುಶಾಲೆ॥

* [ಶ್ರೀ ಹರಿಭಂಸರಾಯ 'ಬಚ್ಚನ್' ಅವರ 'ಮಧುರ ಶಾಲೆ' ಎಂಬಕವನದ ಕನ್ನಡ ರೂಪ]

೪೮ ಭಾರತ ಸೂರ್ಯ

ಹಗಲಲಿ ಸೂರ್ಯನು ಮುಗಿಲೊಳು ಮಿನುಗುತ
ಲೋಕದ ಕತ್ತಲೆ ಕಡಿಯುವನು ||
ನಗೆಮೊಗದಾರ್ಯನು ಬಗೆಯನು ಬೆಳಗುತ
ಭಾರತ ದೇಶದಿ ದುಡಿಯುವನು ||
ಅವನೆನಿಸುವನು ಲೋಕದ ಸೂರ್ಯ
ಇವನೀ ಭಾರತವರ್ಷದ ಸೂರ್ಯ || ೧ ||

ಮೊದಲಿಗೆ ಆ ರವಿ ಗೀತೆಯನಾಲಿಸಿ
ಕರ್ಮದ ತೇಜವ ಗಳಿಸಿದನು |
ಬಿಡದಲೆ ಗೀತಾಧರ್ಮವ ಪಾಲಿಸಿ
ಗಾಂಧಿಯು ಕರ್ಮವ ಬಳಸಿದನು ||
ಸೂರ್ಯನು ಲೋಕದ ಜೀವನದುಸಿರು
ಆರ್ಯನು ಭಾರತಜನ್ಮಕೆ ಬಸಿರು || ೨ ||

ಲೋಕಕೆ ಮಳೆ-ಬೆಳೆ-ಗಾಳಿಯನೀಯುವ
ಆ ರವಿ ದೇವನ ಪ್ರತಿನಿಧಿಯು |
ಸಾಕಿದನೀತನು ಭಾರತಕುಲತನು-
ಮನ ಧನದಾಸ್ತಿಯ ನವನಿಧಿಯು ||
ರವಿ ಜಗದೀಶನ ಉತ್ಸವ ಮೂರ್ತಿ
ಮೋಹನದಾಸನು ಭಾರತ ಕೀರ್ತಿ || ೩ ||

ರಾಹುವು ಕೇತುವು ಮೋಡಗಳೊಡ್ಡುತ
ನೇಸರನನು ಮರೆಮಾಡುವವು |
ಬಾಹುಬಲದ ಸಾಮ್ರಾಜ್ಯದ ಲಾಲಸೆ
ಗಾಂಧಿಯ ತೇಜಕೆ ಬಾಡುವವು ||

ರವಿಯಾಗಮನಕೆ ಕಳೆಯಿತು ಕುರುಡು
ಗಾಂಧಿಯ ಗೀತಕೆ ಮೊಳೆಯಿತು ಕೊರಡು|| ೪ ||
ಕವನೆರಳಿಲ್ಲವು ಆ ರವಿ ಗೀತಕೆ
ಕವಿದಿಹ ಕತ್ತಲೆ ಕಳೆಯುವದು ।
ರವಿಗಿದೆ ಕರ್ಮದ ಸಹಜತೆ, ಈತನ
ಕರ್ಮದ ಕುಶಲತೆ ಬೆಳಗುವುದು ॥
ರವಿಯಾಗಿರುವನು ಲೋಕದ ಕಣ್ಣು.
ಇವನೇ ತೆರೆವನು ಲೋಕದಕಣ್ಣು ॥೫॥

೪೯. ಮೋಹನದಾಸ

ಚೆಲುವಿಕೆಯಿಲ್ಲದೆ ಜನಮನ ಸೆಳೆವನು ಮೋಹನದಾಸನು ಅಹುದೇನು?
ನಿಲುವಿಕೆಯಲಿ ಬಲು ಹಳೆಯನು ಜುಡಿತವ ನೋಡಲು
ಕರ್ಮತನಯನೇನು?
ಉಡುತೊಡಲಿಲ್ಲದ ಬಡವನೆಕಂಡರು ಭಾರತ ದೇಶದ ಪಡಿಯರಸು
ಬಡಕಲವೈ ಪುಡಿಯಾಗಿದೆ, ಒಳಗಿದೆ ಹಿಡಿಸದ ಆತ್ಮವು ನೀನರಸು॥
ಮಂತ್ರಿಯ ಮಗ ಧನಲಕ್ಷ್ಮಿಯ ಕುವರನು ಹೇಸದೆ ಕಕ್ಕಸ
ಬಳಿದವನು
ಎಂತೆಂತಹ ಘನಕಾರ್ಯದಿ ಪಂಡಿತನಾಗಿಯು ಕಾರ್ಯದಿ
ತುಳಿದವನು ॥
ಕರುಣಾಧರ್ಮದ ಬಿರುದನೆ ತೊಟ್ಟರು ಕರುವನು ಕೊಲ್ಲಿಸಿ
ತಣಿದವನು
ವರ ತನುಮನಧನದಾಸ್ತಿಯ ತ್ಯಜಿಸುತ ಪುಡಿಕಾಸಿಗು ಬಲು
ದಣಿದವನು ॥
ಭಾರತ ದೇಶದ ಬಿಡುಗಡೆಯೊಂದನೆ ಬಿಡದಲೆ ನುಡಿವನು
ಹಗಲಿರುಳು ॥
ಮೀರಿದ ಆ ಪರಮಾತ್ಮನ ಕಾಣುವುದೊಂದೆ ಹಿರಿದುಡಿಮೆಯ ತಿರುಳು॥
ಜೀವಾತ್ಮನು ಸ್ವಾತಂತ್ರ್ಯದೊಳಿದ್ದರು ಸೆರೆಮನೆಪಾಲಾಗಿದೆ ಬಾಳು
ದೇವನ ಸನ್ನಿಧಿ ಸುಖವನ್ನುಂಡರು ಬಂಧನಗೊಂಡಿದೆ ಹೊರಬಾಳು ॥
ಕೊರೆಯುವ ಚಳಿಮಳೆಯಾಪರನಾಡಲಿ ಆತ್ಮದ ಶಕ್ತಿಯ
ತೋರಿದನು
ಅರಿತವರೆಲ್ಲರು ಹುಟ್ಟಿದ ಬಗೆಗುಡಿಗೆಸೆಯುವ ಕಳಸವನಿಟ್ಟವನು ॥
ಹೊಸಕಾಲದ ಸಿರಿಬಾಳಿನ ಬಳ್ಳಿಗೆ ಹೂ ಬಿಟ್ಟಂತಿಹನೀ ಗಾಂಧಿ
ಹೊಸ ಯುಗ ಕಟ್ಟುವ ಸಾಸಿಗರೆಲ್ಲರ ಜೀವನಮುಸಿರಾಗಲಿ ಗಾಂಧಿ ॥

೫೦ ಆಶೆ

ಒಂದೇ ಆಶೆಯು ಎನಗಿದೆ ತಂದೆ
ಅದ ಪಡೆಯುವುದೇ ಮೊದಲಾಶೆ ।
ಇಂದೇ ಸಿಗದಿರೆ ಇನ್ನೆಂದಾದರು
ದೊರಕೊಳಲೆನ್ನುವುದಾ ಆಶೆ ॥
ವಿಶ್ವದ ವೃಕ್ಷಕೆ ಎಲೆ ಹೂ ಕಾಯ್ ಬಿಡು
ಹೊರತೊಗಟೆಯೆ ಆಗುವ ಆಶೆ ।
ವಿಶ್ವದ ಸಾಗರ ವಿಸ್ತರದಾಳದ
ಕಿರಿಯೊತ್ತಾಗುವ ಹಿರಿಯಾಸೆ ॥
ತೊಗಟೆಯೆ ಆಗಲಿ ಕಿರಿಯೊತ್ತಾಗಲಿ
ನಿನ್ನಂಗವೆ ಆಗುವ ಆಶೆ ।
ತೊಗಟೆಗೆ ನಿನ್ನೀರಸ, ಕಿರಿಯೊತ್ತಿಗೆ
ಮುನ್ನೀರೇರುವ ಒಳ ಆಶೆ ॥
ನಿನ್ನೀ ವೈಭವ ನಿನ್ನೀ ವಿಸ್ತರ
ಎನ್ನವು ಎನ್ನುವ ಮನದಾಸೆ ।
ನಿನ್ನೀ ಶುದ್ಧಿಯು ನಿನ್ನೀ ಋದ್ಧಿಯು
ಎನ್ನೊಳಗಳವಡಲೆಂಬಾಸೆ ॥
ಆಶೆಯು ನುಡಿಯಿದು ಬಾಯ್ನುಡಿಯಾಗದೆ
ಒಳಗುಡಿಯಾಗಿರಲೆಂಬಾಸೆ ।
ಆಶೆಯ ಶಿಶುವಿದು ಆತ್ಮದ ಬಸುರಲಿ
ಮೊಳೆತೇರಲಿಯೆನ್ನುವ ಆಸೆ ॥
ಆಶೆಯುದಾರದು ? ಕೇಳುವುದಾರಿಗೆ
ಎನ್ನುವ ನಿಲುವಿಗೆ ನಿಲುವಾಶೆ ।
ಆಶೆಯುದಿಲ್ಲದೆ ಲೇಸಿಗನೆನ್ನೊಳು
ನಿತ್ಯವು ನೆಲೆಗೊಳಲೆಂಬಾಶೆ ॥

೫೧ ಸ್ವೀಕರಿಸು

ದೇವ ಶಿಲ್ಪಿಯೆ ! ಕೇಳು ನಾ ಬಲು ಬಿರುಸು ಕಲ್ಲಾಗಿರುವೆನು ।
ಯಾವ ಒಡವೆಯು ಮಾಡಿಬಿಡುವಿಯೊ ನಿನ್ನ ಕೈಯಲಿ ಕೊಡುವೆನು ॥
ಮೆಟ್ಟುಗಟ್ಟೆಗೆ ಹಾಕು, ಇಲ್ಲವೆ ಮೂಲೆಗಲ್ಲಾಗೇರಿಸು ।
ಕಟ್ಟು ಭಿತ್ತಿಯೊಳಿಟ್ಟು, ಸುಮ್ಮನೆ ತಳಹದಿಗೆ ಅದನೊಗೆಯಿಸು ॥
ಕಂಬ ಹೊರುವೆನು ಕೆಳಗೆ ಇಟ್ಟರೆ ಮುಚ್ಚುಮರೆಯೇನಿಲ್ಲದೆ ।
ಜಂಭವಲ್ಲವು—ಮೋರೆಗಿಟ್ಟರೆ ಸೇವಿಸುವೆನೊಲ್ಲೆನ್ನದೆ ॥
ಏನು ಮಾಡಿದರಾಗುವೆನು ಕೈಮುಟ್ಟಿ ಸ್ವೀಕರಿಸೆನ್ನನು ।
ದೀನತನವೇನಿಲ್ಲವಿದರಲಿ ಹಿಗ್ಗಿನೆದೆಯಲಿ ನುಡಿವೆನು ॥

೫೨. ಉಷಾತಾಯಿ.

ಬಂದಳು ! ಬಂದಳು ! ಉಷೆ ಬಂದಳು ಅದೊ !
ಸೂಸುವ ಮಿಸುನಿಯ ಕಾಂತಿಯಲಿ ।
ನಿಂದಳು ! ನಿಂದಳು ! ಮುಗುಳ್ನಗೆ ಸಾಗರ-
ದಾಚೆಗೆ ತೆರೆಗಳ ತೀರದಲಿ ॥
ತಂದಳು ತಾಯಿಯು ಶಾಂತಿಯ ರಸವನು
ತುಂಬಿದ ಮೇಘಗಳಲಿ ಹೊಳೆಸಿ ॥
ನಿಂದಿಹ ಸಂತತಿಗೆರೆವಳು ಚಿಮ್ಮಿಸಿ
ಚಿಲುಮೆಯ ಕಣ್ಣುಗಳನು ನಿಲಿಸಿ ॥
ಹೊಳಪಿನ ಸೂರ್ಯನ ನೋಡಲು ಕಣ್ಣಿಗೆ
ಕೇಸರಿಯಂಜನ ಲೇಪಿಸುತ ।
“ ಉಳಿಯನು ಬಾರದೆ ಸೂರ್ಯನು ” ಎನ್ನುವ
ಶ್ರದ್ಧೆಯನೆದೆಯಲಿ ತೇಲಿಸುತ ॥
ಎದೆ ಎದೆಗಳ ಬಲು ನಲಿಯಿಸಿ ಮೋದದಿ
ಹಿಗ್ಗಿಸಿ ಹೆಗ್ಗರೆ ಮಾಡುವಳು ॥
ಅದೊ ! ಆ ಕೆರೆಯಲಿ ತಾವರೆಮಧುರಸ-
ದಮೃತವನೂಡುವಳು ॥
ಇದೊ ! ಈಗರಳಿದ ತಾವರೆ ತುಂಬಿದ
ಕಲಶವ ನನ್ನಡಿತಳಕಿಡುವೆ ।
ಕಡೆತನಕಿಡು ಇದೆ ಕೃಪೆಯೆಂದೆನ್ನುತ
ಭಕ್ತಿಯ ಭರದಲಿ ಪೊಡಮಡುವೆ ॥

೫೩. ಏನು ಕೇಳಲಿ?

ಏನು ಕೇಳಲಿ? ನಾನಿನ್ನೇನು ಕೇಳಲಿ?॥

ದಿನದ ಎಲ್ಲ ಗಳಿಗೆಗಳಲಿ
ದುಃಖ ಸುಖದ ಬಾಳಿನಲ್ಲಿ
ನಿದ್ರೆ ಎಚ್ಚರಿಕೆಗಳಲಿ
ಒಂದೆ ನೆನಹು ಉಳಿದು ಬಿಡಲಿ ॥ ೧ ॥

ಗಳಿಗೆ ಕ್ಷಣವು ಕಳೆದಂತೆ
ಸಾವಿನೆಡೆಗೆ ಸಾಗುವೆವಂತೆ!
ಅಂತೆ ಪರಮನರಸುವಂತೆ
ಒಂದು ನೆನಹು ಉಳಿದು ಬಿಡಲಿ ॥ ೨ ॥

ಮೃತ್ಯುಬಾಯ ದವಡೆಯೊಳಗೆ
ಘೋರವಹ್ನಿ ಜ್ವಾಲೆಯೊಳಗೆ
ಯಾವ ಕ್ಷಣವೊ ಸಾವಿನ ಗಳಿಗೆ!
ಎಂಬ ನೆನಹು ಉಳಿದು ಬಿಡಲಿ ॥ ೩ ॥

ಕಣ್ಣು ಮುಚ್ಚಿದಾಗಲೆನಗೆ
ಕಾರ್ಯ ಮಾಡುತಿರುವಾಗೆನಗೆ
ದಿವ್ಯ ಆಶೆ ಮೂರ್ತಿಯಾಗೆ
ನೆನಹಿನಲ್ಲಿ ಉಳಿದು ಬಿಡಲಿ ॥ ೪ ॥

ಬಾಳಿನಾಟದಲ್ಲಿ ನಾನು
ಧರಿಸಿ ಬಂದ ಪಾತ್ರವಿದನು
ನಟಿಸಿ ಹಿಂದೆ ಸರಿವ ನಟನು
ಎಂಬ ನೆನಹು ಉಳಿದು ಬಿಡಲಿ ॥ ೫ ॥

ಒಂದೆ ನೆನಹಿನಿಂದ ಘೋರ
ರಂಗಗಳಲಿ ಹೋರುವ ವೀರ-
ನಾದರಾಗ ಮುಖವನು ತೋರಾ
ಒಂದೆ ನೆನಹು ಉಳಿದು ಬಿಡಲಿ ॥ ೬ ॥

೫೪. ಮುಂದೇನು ?

ಅರ್ಧಬಾಳು ಕಳೆಯಬಂತು ಮುಂದುಗಾಣದೆ
ಅರ್ಧಶಕ್ತಿ ಕರಗಿ ಹೋಯ್ತು ಒಂದುವರಿಯದೆ ॥

ಎಳೆಯತನದ ನಲಿವು ಕರಗಿ ಹರೆಯ ಬಂದಿತು
ಉಳಿಯಲಾರದದುವು ಕೂಡ ಹುರುಪುಗುಂದಿತು ॥

ಯಾವ ಗಳಿಗೆಗೇನೊ ಎಂದೊ ಸಾವು ಬೆನ್ನ ಹಿಂದೆಂತೊ
ಯಾವ ಬೆಳಕು ಕಾಣದಿಂಧು ಕುರುಡನಂತೆಂತೊ ॥

ತುಸುವೊ ಬಹಳೊ ಆಯು, ಶಕ್ತಿ ನೆಚ್ಚಿಗಿಲ್ಲವು
ಹಸುಳೆತನದ ಬುದ್ಧಿ ಮೀರಿ ಸಾಗಲಿಲ್ಲವು ॥

ಏನು ! ಏನು ! ಮುಂದೆ ಏನು ! ಸುಲಭವೆಲ್ಲಿದೆ !
ತಾನೆ ತಾನು ಎಣಿಸುತಿದ್ದೆ ಶಾಂತಿಯಿಲ್ಲದೆ ॥

" ವ್ಯರ್ಥವಾಗಿ ಬದುಕಿ ಬಾಳ ಮುಗಿಸಲೊಲ್ಲೆನು
ಅರ್ಥವುಂಟು ಕಂಡರಾನು ಬಾಳಕೊನೆಯನು"

ಎಂದು ಮಿಡುಕಿ ಮನದಿ ಮರಗುತಿರಲು ಕೊರಗುತ
ಒಂದು ಮಾತು ಮನದಿ ಮಿಡಿದು ಬಂತು ಕುಣಿಯುತ

"ಕೇಳು ಕೇಳು! ಏಕೆ ಅಳುವೆ? ನರನ ಹಿರಿಯ ಗುರಿಯನು
ತಿಳಿಸಿ ಜಗದಿ ಮೊಳಗುತಿಹನು ಇಂದು ದೇವ ದೇವನು ॥

ಅದುವೆ ನಿನ್ನ ಗುರಿಯು ! ಗಳಿಸು ಅದರ ಕೀಲಿಯ
ಅದುವು ನಿನ್ನದಾಗುವಂತೆ ವ್ಯಯಿಸು ನಿನ್ನ ಬಾಳ್ವೆಯ ॥

ಬೇಸರಿಯದೆ ಮುಂದೆಸಾಗು ಬಾಳತಪದಲಿ
ಏಸು ದೊರೆತರದುವೆ ಲೇಸು ನಿನ್ನ ಪಥದಲಿ ॥

ಜಗದ ತಂದೆಯುಸುರುವುದನು ತಿಳಿವ ಕಜ್ಜದಿ
ಯುಗದ ಮನುಜಸಾಯುವನ್ನು ಕಳೆವುದಂದದಿ ॥

ದುಡಿಮೆ ಸೇವೆ ಆತಗೆಂದೆ ಮೀಸಲಾಗಿಸು
ಅಡಿಯ ಪೂಜೆ ದೇಹ ಶ್ರಮವನವನಿಗೊಪ್ಪಿಸು ॥

ಮೂರು ಮಾತು ಮೂರು ಪಾದನಂತೆ ವ್ಯಾಪಕ
ಚೂರು ಸಾಧಿಸಿದರೆ ಅಷ್ಟೆ ನಿನಗೆ ಸರ್ವ ಸಾರ್ಥಕ ॥"

ಎಂಬ ಗುಡುಗು ರಕ್ತದಣುವಿನಲ್ಲಿ ಹಾಡುತ ।
ತುಂಬಿ ಉಳಿಯುವಂತೆ ಕರುಣಿಸೆನುವೆ ಅವನ ಬೇಡುತ ।

೫೫. ಪುರುಷ

ಆದಿ ಅನಾದಿಯಲಿ
ಜನನದ ಆಚೆಯಲಿ
ಮರಣದ ಈಚೆಯಲಿ
ಎಂದೋ ಮುಟ್ಟಿದೆ ಪುರುಷವು
ಈ ತನುಮನದೊಳ ಹೊರಗನ್ನು ‖ ೧ ‖

ಮಣ್ಣಿನ ಮೈ ಹೊನ್ನು
ಪ್ರಾಣದ ಬಲಬೆನ್ನು
ಮನ ದಿವ್ಯದ ಕಣ್ಣು
ಎಂದೋ ಮುಟ್ಟಲು ಪುರುಷವು
ತನುಮನ ತಳೆದಿವೆ ಮೆರುಗನ್ನು ‖ ೨ ‖

ಮುಗಿಲಿನ ಬೆಳಕಿನಲಿ
ನೀಲಿಯ ತಳಕಿನಲಿ
ದೃಶ್ಯದ ಒಳಕಿನಲಿ
ನಿಂತಿಹೆ ಪುರುಷವೆ ಲೀಲೆಗೆ
ದಿವ್ಯತೆ ತಳೆದಂತಿಹೆಸಿನ್ನೂ ‖ ೩ ‖

ಮನಸಿನ ಮೊನೆಯಲ್ಲಿ
ನೆನಪಿನ ತೆನೆಯಲ್ಲಿ
ಕನಸಿನ ಕೆನೆಯಲ್ಲಿ
ಕಂಡಾಕ್ಷಣವೇ ಹಿಂದಿನ ಸ್ಪರ್ಶದ
ನೆನಹಾಗುವದಿನ್ನು ‖ ೪ ‖

ಇರುಳಿನ ಹಗೆಯಲ್ಲು
ಹಗಲಿನ ನಗೆಯಲ್ಲು
ಸಂಜೆಯ ಹೊಗೆಯಲ್ಲು
ನಿತ್ಯ ನಿರಂತರ ಹತ್ತಿರವಿರು ನಾ-
ಬೇಡಲಿಯಿನ್ನೇನು ? ‖ ೫ ‖

ತಂಗಾಳಿಗು ತಣುವು
ತಿಂಗಳನಿಗು ಅನುವು
ಮಂಗಳಕರ ದಣುವು
ಅಂತೇ ಹಾರಯಿಸುವೆನೌ ಪರುಷವೆ
ನಿಶಿದಿನ ನಿನ್ನನ್ನು || ೬ ||

ಬಂದೊಮ್ಮೆ ನೋಡು
ತಂದೊಮ್ಮೆ ಹಾಡು
ಹಿಂದಿನದು ದೂಡು
ಹೆಚ್ಚಿನ ಸಿರಿನಾ ಬೇಡೆನು ಪರುಷವೆ
ನೀನೊಂದೇ ಹೊನ್ನು || ೭ ||

ಒಂದನ್ನೇ ಬಯಸಿ
ಒಂದಕ್ಕೇ ಎಳಸಿ
ಒಂದೆಂದೇ ಬಳಸಿ
ನಾ ಬಾಳುವ ತೆರ ನಡಿಸೌ
ಪರುಷವೆ ಮರೆಸು ಸಮಸ್ತವನು || ೮ ||

೫೬. ಉದಿತ ಸೂರ್ಯ.

ಮೂಡಿ ಬಂದನದೋ ಸೂರ್ಯ ಮೂಡಣಂಗಳಲ್ಲಿ
ದೂಡಿ ಕಾಳರಾತ್ರಿಯನ್ನು ಯುದ್ಧರಂಗದಲ್ಲಿ ॥

ನೋಡಿ ನೋಡಿದಂತೆ ಅಹುದು ನನ್ನ ಪ್ರತಿಬಿಂಬ
ಹಾಡಿ ಮೇಲೆ ನೆಗೆಯುತಿಹುದು ಹಿಗ್ಗು ಹೃದಯ ತುಂಬ

ಬಳ್ಳಿಗಿಡಗಳರಳು ಸಲಿಸಲಿಹವು ಬೊಗಸೆಯಿಂದ
ಹುಲ್ಲು ಎಲೆಗಳರ್ಘ್ಯ ನೀಡನಿಂತ ನಿಲವು ಅಂದ

ಅಮೃತ ಕಿರಣ ತೂರಿ ಸೃಷ್ಟಿಯನ್ನು ತೊಳೆವ ಮೋಡಿ
ಅಮೃತರಸವೆ ಸುತ್ತಲೆಲ್ಲ ಸೂಸುತಿರುವ ಗಾಡಿ ॥

ನೆನಪುಕೊಡುವುದಲ್ತೆ ತಾಯ ಮುಖವ ಸೂರ್ಯಬಿಂಬ
ಮಿನುಗುತಿರುವ ರಶ್ಮಿ ತಾಯಸ್ನೇಹ ಸ್ರೋತದಿಂಬ ॥

ಕಣ್ಗೆ ತಣಿವು, ಮನಕೆ ಹರುಷ ಹೃದಯಕೆಂಥ ಹಬ್ಬ
ಮಣ್ಗೆ ಹೊನ್ನ ಕಳೆಯು, ಮುಗಿಲು ರನ್ನಬೆಳೆಯೊ ಅಬ್ಬ!

ಹೃದಯಕಿದುರು ಹಿಡಿದ ಹೊಳೆವ ರನ್ನಹರಳು ಕಾಂತಿ
ಹೃದಯವೆರಗಿ ತನ್ನ ತಾನೆ ಕುಡಿಯುತಿಹುದು ಶಾಂತಿ ॥

ನನ್ನ ರೂಪು ಕಣ್ಗೆ ಬಿದ್ದುದೊಂದು ದಿವ್ಯಯೋಗ
ನನ್ನ ತೇಜ ಕಂಡು ಕರಗಿ ಹೋಯ್ತು ಭವ್ಯರೋಗ ॥

ನನ್ನನರಿಯದಿರುವ ಗಳಿಗೆಸು ದುಃಖ ಕಷ್ಟ
ನನ್ನನರಿತ ಕ್ಷಣವೆ ಮರೆವು- [illegible]ಯು ನಷ್ಟ ॥

೫೭. ನಿಶ್ಚಿಂತ ಪುರುಷ.

ನಿಶ್ಚಿಂತ ಪುರುಷ ನಾನಿರಲು ನನ್ನ ಬಳಿಯಾಕೆ ।
ಸುಳಿಯುದಿರು ಜೋಕೆ ॥

ಗುಂಯೆಂದು ಮೆದುಳಹೂ ಸುತ್ತುವರಿವ ಅಳಿಯಂತೆ ।
ಅಹುದು ದುಶ್ಚಿಂತೆ ॥

ತಲೆ ಜೇನಹುಟ್ಟು ಮಾಡಿರುವ ಚಿಂತೆಯಾ ಸಂತೆ ।
ಇಲ್ಲಿ ಯಾಕಂತೆ ॥ ೧ ॥

ದಿಗ್ದೇಶದಿಂದ ಹೊರ ಹೊರಟ ಗೋಳಿನಾವಾರ್ತೆ ।
ಇರಲಿ ನಿಮ್ಮ ಪೂರ್ತೆ ॥

ನಿಮ್ಮಳುವು ಬೊಬ್ಬೆ ಸರಳಾಟ ಗಜಬಜಿಯು ಸಂತೆ ।
ಇಲ್ಲಿ ಯಾಕಂತೆ ॥ ೨ ॥

ಆ ಸೂಜಿ, ಕೊಳ್ಳಿ, ತಿವಿವಬರ್ಚಿ, ಕೊಡಲಿ, ಮೊನೆಶೂಲ
ನೋವಿನಾ ಮೂಲ ॥

ಎಲ್ಲಿಲ್ಲಿ ಹೋದರಲ್ಲಲ್ಲಿ ತಿವಿದುಬಲು ಇರಿದು ಚುಚ್ಚು-
ವಿಯುಲ್ಲ ಇಲ್ಲಿ ಸ್ಥಳವಿಲ್ಲ ॥ ೩ ॥

ಸಂಕಲ್ಪ ಸೈನ್ಯ ಸುತ್ತರಿದು ನಿಂತು ಕೊಟ್ಟಿಲ್ಲ ಚಿಂತೆಗೆಳ್ಳಷ್ಟು
ದಾರಿ ಬಂದಿಷ್ಟು ॥

ಬರಬೇಡಿ ಬಂದವರು ಹೊರಡಿ ನಿಂತರೇನುಂಟು ।
ಕಟ್ಟಿರೀ ಗಂಟು ॥ ೪ ॥

ನೆಲೆಯಿಲ್ಲ ನಿಮ್ಮ ಬೆಲೆಯಿಲ್ಲ ಮತ್ತೆ ಕರೆಯಿಲ್ಲದಲ್ಲಿ ನೀವೇಕೆ
ಹೊರಡಿ ತಡವೇಕೆ ।

ಸುಳಿಸುಳಿದು ಬಂದರೊಳಿತಲ್ಲ ನನ್ನ ಅಪ್ಪನಿಗೆ ಹೇಳುವೆನು ।
ಹೇ [illegible] ನ್ನು ಮುರಿಸಿಕೊಳ್ಳು [illegible] ॥

೫೮. ಹೇಗೆ ?

ಹೇಗೆ ಉಳಿದು, ಹೇಗೆ ಬೆಳೆದು ಜಗವಿ ಮೊಡಲಿ ?
ಹೇಗೆ ದುಡಿದು, ಹೇಗೆ ಪಡೆದು ಜಗವ ಕೂಡಲಿ ?

ಕಾಮ ಕೆಸರಿನಂತೆ ಮೈಗೆ ಬಳಿಯಹತ್ತಿದೆ
ಹೇಮದಾಶೆ ಮನದೊಳೆಲ್ಲು ಒತ್ತಿಬಿತ್ತಿದೆ
ನೇಮನಿಷ್ಠೆ ಸೇವೆ-ಗೀವೆ ತೀರ ಬತ್ತಿದೆ
ತಾಮಸಾದಿ ಅಂಗಕೆಲ್ಲ ಮೆತ್ತಿಮುತ್ತಿದೆ ॥ ೧ ॥

ಪೆರರ ಸಿರಿಗೆ ಕೊರಗಿ ಮರುಗಿ ಒಳಗೆ ಸೊರಗುವೆ
ಅರರೆ! ಹೊಟ್ಟೆಯುರಿಯಲೊಮ್ಮೆ ಎನಿತು ಕರಗುವೆ
ಮರುಳನಂತೆ ತಂದೆ ಇಲ್ಲವೆಂದು ಬೆರಗುವೆ
ಹೊರಳಿ ಹೊರಳಿ ಮರಳಿ ಮರಳಿ ನೆಲಕೆ ಉರುಳುವೆ ॥ ೨ ॥

ಉಳಿಯಲಾರೆನೆಂದು ಬಗೆದು ನೆನಹುಗುಂದಲು
ಸುಳಿದು ಮುಂದೆ ತಿಳಿವು ಒಮ್ಮೆ ಮನವನೊಂದಲು
“ಸೆಳೆವ ಪೀಡೆಗಳಿಗೆ ಬೇಡ-ಒಲ್ಲೆ-ಕೂಡದೆಂದರೆ
ಕಳೆವೆ” ನೆನುವ ನುಡಿಯು ಬಂತು, ಇಲ್ಲ ಇನ್ನು ತೊಂದರೆ ॥ ೩ ॥

೪೮. ಹಾಲಾಹಲ

ಹೃದಯ ಕಡಲ ಕಡೆದರೇನೊ ದೇವದೈತ್ಯರು ।
ಹೃದಯದಲ್ಲಿ ನಂಜಿನುರಿಯ ಸುತ್ತಲೊಲತ್ತರು ॥

ಎತ್ತ ಹೊರಳಲೆತ್ತಲುರುಳಲತ್ತ ಜ್ವಾಲೆಯು
ಮುತ್ತಿ ಮುಸುಕಿ ಕವಿಯುತಿಹುದು ಹೊಗೆಯ ಮಾಲೆಯು ॥

ಅಮೃತವಿಲ್ಲ ವಿಷವು ಮಾತ್ರ ಮೊದಲು ಹೊರಟಿತು
ಅಮೃತವನ್ನು ಕೊಲುವ ಶಕ್ತಿ ವಿಷಕೆ ದೊರಕಿತು ॥

ಮನವು ಬೆಂದು ಶಾಂತಿ ಬಿಂದುವೆಂದು ಹಲುಬಿತು
ತನುವು ನೊಂದು ಸಾವೆ ಬಂಧುವೆಂದು ನಲುಗಿತು ॥

ಪ್ರಾಣ ಕಾಣದಾಯ್ತು ಕ್ಷೀಣ ಕ್ಷೀಣವಾಗುತ
ಕ್ಷೋಣಿಯೆಲ್ಲ ಪ್ರಲಯಜ್ವಾಲೆ ಬಂತು ಸುತ್ತುತ ॥

ಬೊಟ್ಟಿನಗಲದೊಂದು ತಾಣ ಕಾಯ್ವೆನೆನ್ನುತ
ಗಟ್ಟಿಯಾಗಿ ಕೂಗುತಿಹುದು ಬಾರೊಯೆನ್ನುತ ॥

ಅಲ್ಲಿ ಹೊರಟೆ! ಶಿವನೆ ಹೀರು ಸುತ್ತಿನುರಿಯನು
ಬಲ್ಲೆ ನಂಜನುಂಡು ಲೋಕ ಪೊರೆವ ಹೆಸರನು ॥

ನನ್ನ ಅವ್ವನಿಗ [illegible]
[illegible] ನ್ನು ಮುರಿಸಿಕೊಳ್ಳು [illegible] ॥

೬೦. ಕಂಕಾಳಿ

ಬೆಳೆದು ಬಂದಳದೋ ಕಾಳಿ
ತುಳಿದು ಬಂದಳಿದೋ ಹೂಳಿ
ಮಹಾಕಾಳಿಯು !
ನಲಿವು ತೊರೆದು ನಿಂತಳದೋ
ಒಲವು ಮರೆದು ಕುಣಿದಳದೋ
ಕಂಕಾಳಿಯು ॥
ಮಕ್ಕಳಲ್ಲಿ ಅಕ್ಕರಿಲ್ಲ
ಉಕ್ಕುತಿರುವ ಕರುಳೆ ಇಲ್ಲ
ಉಗ್ರ ಮೂರುತಿ !
ಪುಕ್ಕರೆಲ್ಲ ಸತ್ತರಾಗ
ಬಿಕ್ಕಿ ಬಿಕ್ಕಿ ಅತ್ತರಾಗ
ಸಿಡಿಲನೊಗೆಯುತೀ ॥
ನಗೆಯನೊಗೆವ ಕಣ್ಣು ಎರಡು
ಬಗೆಯ ಬಿಗಿವ ತೋಳು ಎರಡು
ಧರಿಸಲಾರೆಯಾ ?
ಹೊಗೆಯ ನುಂಗಿ ಕಿಚ್ಚು ತವಿಸಿ
ಮಿಗುವ ನಲುಮೆ ಮೊದಲು ಧರಿಸಿ
ಮೆರೆಯಲಾರೆಯಾ ? ॥
ಉಗ್ರದುಕ್ಕು ಕೊಳೆಗೆ ಕಿಚ್ಚು
ವ್ಯಗ್ರದೊಟ್ಟು ಬಿನ್ಮಿಗೆಚ್ಚು
ತಾಯೆ ! ಸೈರಿಸು ॥
ನುಗ್ಗಿ ಬೀರು ಶಾಂತಿ ಸುಧೆಯ
ಸಗ್ಗದೊಲುಮೆ ತೋರುತಿಳೆಯ
ಅಭಯವೇಳಿಸು ॥

೬೧. ಮಾಣೆನೆನುವ ಬುದ್ಧಿ!

ಕಾಸು! ಕಾಸು!! ತಾಯಿ ನನ್ನ ಬಣ್ಣವೇರಲಿ
ಬೀಸು! ಬೀಸು!! ತಾಯಿ ಹಿಟ್ಟು ನುಣ್ಣಗಾಗಲಿ ॥

ಕಾಲನೆತ್ತಿ ಹೃದಯನೊತ್ತು ತೆಳ್ಳಗಾಗಲಿ
ಕೋಲನೆತ್ತಿ ತಲೆಗೆಬಡಿ ಬುದ್ಧಿಮಾಗಲಿ ॥

ಏಟಿಗೊಮ್ಮೆ ಶರಣೆನ್ನುವ ಶಬ್ದವುಳಿಯಲಿ
ಮಾಟಿಗೊಮ್ಮೆ ನಮಿಸೆನೆನುವ ಅರಿವು ತಿಳಿಯಲಿ ॥

ಕಣಿವೆ ಕಂಟೆ ಅಲೆದರೇನು ನಿನಗೆ ಹತ್ತಿರ
ದಣಿದು ಸೋತು ಸುತ್ತಲೇನು ನದಿಗೆ ಒತ್ತರ ॥

ಮಾನಹಾನಿಯೊದಗೆ ಹೃದಯ ತಿಳಿಯಿತೆಂಬೆನು
ಮ್ಲಾನ-ಗ್ಲಾನಿ ಸುಳಿಯೆ ದಿವ್ಯ ಲಭಿಸಿತೆಂಬೆನು ॥

ಏನೆ ಇರಲ್ಲಿ, ಏನೆ ಬರಲಿ ಹರಕೆಯೆನ್ನುವೆ
'ಮಾಣೆ'ನೆನುವ ಬುದ್ಧಿಮನದಿ ನೆಲಿಸಲೆನ್ನುವೆ ॥

...ನ್ನ ಅಪ್ಪನಿಗ
... ಮುರಿಸಿಕೊಳ್ಳು ... ॥

೬೨. ಕಾಳಿ ಬಾರೆ

ಅಡಿಯನೆತ್ತಿ, ಜಡದಲೊತ್ತಿ ನಡೆದು ಕಾಳಿ ಬಾರೆ
ತನುವು ಜಾರೆ, ಹಿಮವು ತೂರೆ ಕ್ರಮದಿ ಸುಳಿದು ಬಾರೆ
ಮುಸುಕು ತೆರೆದು, ಕಸುಕು ಮುರಿದು ನಸುಕಿನಂತೆ ತೋರೆ
ಬೆಸುಗೆ ಬಿಚ್ಚಿ, ಒಸಗೆ ಹೊಚ್ಚಿ ಉಷೆಯ ಬರವ ತೋರೆ ||
ಮನದ ಮಲಿನ ಗುಣದ ಜ್ವಲನ ಅನಲಗಣ್ಣಿಗೊಪ್ಪಿಸು
ಪ್ರಾಣದೆಣಿಕೆಯೇನು ಕುಣಿಕೆ ಗ್ಲಾನಿಯನ್ನು ತಪ್ಪಿಸು ||

ಕಾಯುವಾಗ ಕಾಯಿಸು
ಸಾಯುವಾಗ ಸಾಯಿಸು
ಮಾಯುವಾಗ ಮಾಯಿಸು ||

ಒಂದು ಗಣಿಸೆ, ನೊಂದು ಗುಣಿಸೆ ಹಿಂದು ಮುಂದು ನೋಡದೆ
ಒಮ್ಮೆ ನಲಿದು, ಸುಮ್ಮನೊಲಿದು ಅಮ್ಮಗಿತ್ತೆ ಬಾಡದೆ ||

ಸೋಲು ಭೀತಿ ಸುಳಿಯದು
ಬೀಳು ಭಯವು ಬೀಸದು
ಹೋಳು ಹೆದರು ನುಸುಳದು ||

ಥಯ್ಯ ಥಕ್ಕ ! ಕುಣಿತ ತಕ್ಕ ! ಮಣಿಸಿ ನೈಯ ಕೈಗಳ
ತುಳಿದ ಹೆಜ್ಜೆ ! ಗಿಳಿರು ಗೆಜ್ಜೆ ! ಒಲಿಸಲಿನುವ ಕಿವಿಗಳ ||
ನಿನ್ನ ಕುಣಿತ, ನಿನ್ನ ಮಣಿತ ಎನ್ನ ಹೃದಯಕಮೃತ
ಅಗಿಲಸೇಟು, ಸಹಿಸಲಿಷ್ಟು ನೆಲಿಸಿಸಲಿವ ಮಾಟ ||

ಕಲ್ಪನಾ ಗ್ರಂಥಮಾಲೆಯ
ಪ್ರಕಟನೆಗಳು

★

೧	ಹಾಲಾಹಲ	ಹಿರೇಮಲ್ಲೂರ ಈಶ್ವರನ್	೧	೧೨	೦
೨	ರಾಮಣ್ಣ ಮಾಸ್ತರು	ಮಿರ್ಜಿ ಅಣ್ಣಾರಾಯ	೨	೦	೦
೩	ಫಲ ಸಂಚಯ	ವರದರಾಜ ಹುಯಿಲಗೋಳ	೧	೮	೦
೪	ರಾಜಾ ರಾಣಿ ದೇಖೋ	ಹಿರೇಮಲ್ಲೂರ ಈಶ್ವರನ್	೧	೮	೦
೫	ಶಿವನ ಬುಟ್ಟಿ	ಹಿರೇಮಲ್ಲೂರ ಈಶ್ವರನ್	೧	೮	೦
೬	ಮುಗಿಲ ಜೇನು	ಸಿಂಪಿ ಲಿಂಗಣ್ಣ	೧	೮	೦
೭	ಕನ್ನಡ ತಾಯ್‌ನೋಟ	ಹಿರೇಮಲ್ಲೂರ ಈಶ್ವರನ್	೧	೧೨	೦
೮	ಕಾವ್ಯಾಕ್ಷಿ	ಚೆನ್ನವೀರ ಕಣವಿ	೧	೦	೦
೯	ಅರವಿಂದರ ಪತ್ರಗಳು	ಸಿಂಪಿ ಲಿಂಗಣ್ಣ	೦	೮	೦

ಕಲ್ಪನಾ ಗ್ರಂಥ ಪ್ರಕಾಶನ ಸಮಿತಿ
ಹುಬ್ಬಳ್ಳಿ